MADRAS GOVERNMENT ORIENTAL SERIES

No. XXVIII

అశ్వశాస్త్రం

AŚVAŚĀSTRAM

MADRAS GOVERNMENT ORIENTAL SERIES

PUBLISHED UNDER THE AUTHORITY OF
THE GOVERNMENT OF MADRAS.

General Editor
T. CHANDRASEKHARAN, M.A., L.T.,
Curator, Government Oriental Manuscripts Library.
Madras.

No. XXVIII

అశ్వశాస్త్రం

AŚVAŚĀSTRAM

Critically edited with Introduction and Notes

BY

DR. P. SRINIVASA RAO, G. M. V. C.
(*Veterinary Surgeon, Madras.*)
AND
PANDIT H. SESHA IYENGAR,
(*Retired Kannada Lecturer, University of Madras.*)

GOVERNMENT ORIENTAL MANUSCRIPTS LIBRARY, MADRAS.

1950

Price Rs. 4—2—0

PRINTED AT
THE SREEVATHSA PRESS
ROYAPETTAH, MADRAS.

Introduction

The Government of Madras took up for consideration the question of publication of the various manuscripts in different languages on subjects like Philosophy, Medicine and Science, etc., early in May, 1948. Important manuscript libraries in the Madras Presidency were requested to send a list of unpublished manuscripts with them for favour of being considered by the Government for publication. The Honorary Secretary of the Tanjore Maharaja Serfoji's Sarasvathi Mahal Library, Tanjore, alone complied with this request. This list as well as a similar list of unpublished manuscripts in the Government Oriental Manuscipts Library, Madras, were carefully examined and a tentative selection of manuscripts suitable for publication was made The Government in their Memorandum No. 34913/48-10, Education, dated 4-4-49, constituted an Expert Committee with the Curator of the Government Oriental Manuscripts Library, Madras, as the Secretary for the final selection of manuscripts suitable for printing and for estimating the cost of publication.

The following are the members of the Committee :—

1. Sri T. M. Narayanaswami Pillai, M.A., B.L.
2. ,, R. P. Sethu Pillai, B.A., B.L
3. ,, C. M. Ramachndra Chettiar, B.A., B.L.
4. ,, R. Krishnamoorthy, (Kalki).
5. Dr. N. Venkataramanayya, M.A., Ph. D.
6. Sri M. Ramanuja Rao Naidu, M,A.
7. ,, V. Prabhakara Sastri.
8. ,, N. Venkata Rao, M A.
9. ,, H. Sesha Ayyangar.
10. ,, Masti Venkatesa Ayyangar, M.A.
11. ,, M. Mariappa Bhat, M.A., L.T,
12. Dr. C. Achyuta Menon, B.A., Ph.D.
13. ,, C. Kunhan Raja, M.A., D.Phil.
14. ,. A. Ṣankaran, M.A., Ph. D., L.T.
15. Sri P. S. Rama Sastri.
16. ,, S. K Ramanatha Sastri.
17. Dr. M. Abdul Haq, M.A., D. Phil., (Oxon).
18. Afzul-ul-Ulama Hakim Khader Ahamed.
19. Sri P. D. Joshi.
20. ,, S. Gopalan, B.A.,B.L.
21. ,, T. Chandrasekharan, M.A., L.T.

The members of the Committee formed into Sub-Committees for the various languages, Sanskrit, Tamil, Telugu, Kannada, Malayalam, Marathi, and Islamic Languages. They met during the month of May, 1949, at Madras and at Tanjore to examine the manuscripts and make a selection. The recommendations of the Committee were accepted by the Government in G.O. No. Mis. 2745 Education, dated 31-8-1949, and they decided to call these publications as the "MADRAS GOVERNMENT ORIENTAL SERIES" and appointed the Curator. Government Oriental Manuscripts Library, Madras, as the General Editor of the publications.

The following manuscripts have been taken up for publication during the current year :—

"A" From the Government Oriental Manuscripts Library, Madras.

TAMIL

1. KAPPAL S'ĀTTIRAM.
2. ANUBHAVA VAIDYA MURAI.
3. ĀTTĀṈAKŌLĀHALAM.
4. UPADĒS'A KĀNḌAM.
5. CŌḶAN PŪRVA PAṬṬAYAM.
6. KOṄGA DĒS'A RĀJAKKAL.
7. S'IVAJNĀNA DĪPAM.

TELUGU

1. SANGĪTARATNĀKARAMU.
2. AUṢADHA YŌGAMULU.
3. VAIDYA NIGHANṬUVU.
4. DHANURVIDYĀ VILĀSAMU.
5. YŌGA DARS'ANA VIṢAYAMU.
6. KHAḌGA LAKṢAṆA S'IRŌMAṆI.

SANSKRIT

1. VIṢANĀRĀYAṆĪYAM.
2. BHĀRGHAVA NĀDIKA.
3. HARIHARACATURANGAM.
4. BRAHMA SŪTRAVṚTTI MITĀKṢARA.
5. NYĀYASIDDHĀNTA TATVĀMṚTAM.

MALAYALAM

1. GARBHA CIKITSA.
2. a. VĀSTULAKṢAṆAM.
   b. S'ILPAS'ĀSTRAM.
   c. S'ILPAVIṢAYAM
3. MAHĀSĀRAM
4. KAṆAKKUSĀRAM.
5. KRIYĀKRAMAM.

KANNADA

1. LŌKŌPAKĀRA.
2. RAṬṬAMATA.
3. AS'VAS'ĀSTRA.
4. a. AUṢADHAGALU.
   b. VAIDYAVIṢAYA.
5. SANGĪTARATNĀKARA.
6. SŪPAS'ĀSTRA.

ISLAMIC LANGUAGES

1. JAMI—AL—ASHYA.
2. TIBB—E—FARIDI.
3. TAHQIQ—AL—BUHRAN.
4. SAFINAT—AL—NAJAT.

"B" From the Tanjore Maharaja Serfoji's Sarasvathi Mahal Library, Tanjore.

TAMIL

1. S'ARABĒNDRAVAIDYA MURAI, (Dibates).
2. do (Eyes).
3. AGASTIYAR
4. KONKAṆARSARAKKU VAIPPU.
5. TIRUCHITRĀMBALAKKŌVAIYAR with padavurai.
6. KĀLACAKRAM.
7. TAṬVASAMUDRAM.
8. BHARATANĀṬYAM.
9. a. PUNDIKELI VILĀSAM.
   b. PURŪRAVA CAKRAVARTI NĀṬAKAM.
   c. MADANA SUNDARA VILĀSA NĀṬAKAM.
   d. PERCY MACQUEEN'S COLLECTION in the Madras University Library on Folklore.
10. RĀMAIYAN AMMANAI.
11. TAMIL PADALKAL including Pattinattar Venba and Vannankal.

TELUGU

1. KĀMANDAKANĪTISĀRAMU.
2. TĀLADAS'APRĀṆAPRADĪPIKA.
3. a. RAGHUNĀTHA NAYAKĀBHYUDAYAMU.
   b. RAJAGŌPĀLA VILĀSAMU.
4. RĀMĀYAṆAMU by Kaṭṭā Varadarāju.

MARATHI

1. NĀṬYAS'ĀSTRA SANGRAHA.
2. a. BOOK OF KNOWLEDGE.
   b. FOLK SONGS.
   c. DORA DARUN VENI PADDHATI.
   d. ASVA CATULA DUMANI
3. a. PRATĀPASIMHENDRA VIJAYA PRABANDHA
   b. S'ARABHĒNDRA THIRTHĀVALI.
   c. LĀVAṆI.
4. DEVĒNDRA KURAVANGI.
5. BAKTA VILĀSA.
6. SLOKA BANDHANA RĀMĀYANA.

SANSKRIT

1. AS'VAS'ĀSTRA with Tricolour illustrations.
2. RĀJAMṚGĀNKA.
3. CIKITSĀMṚTASĀGARA.
4. ĀYURVĒDĀMAHŌDADHI.
5. GĪTA GŌVINDA ABHINAYA.
6. a. CŌLACAMPU.
   b S'ĀHĒNDRAVILĀSA.
7. DHARMĀKŪTAM—Sundara Kāṇḍa.
8. JĀTAKASĀRA.
9. VIṢṆUTATTVANIRṆAYA VYAKHYA.
10. SANGĪTA DARPAṆA.
11. BIJAPALLAVA.

It is hoped that the publication of most of the important manuscripts will be completed within the next four years.

Some of the manuscripts taken up for publication are represented by single copies in the Library and consequently the mistakes that are found in them could not be corrected by comparing them with other copies. The Editors have, however, tried their best to suggest correct readings. The wrong readings are given in round brackets and correct readings have been suggested in square brackets. When different readings are found, they have been given in the footnotes except in the case of a few books in which the correct readings have been given in the footnote or incorporated in the text itself.

The Government of Madras have to be thanked for financing the entire scheme of publication although there is a drive for economy in all the departments. My thanks are due to the members of the Expert Committee who spared no pains in selecting the manuscripts for publication. I have also to thank the various editors who are experts in their own field, for readily consenting to edit the manuscripts and see them through the press. The various presses that have co-operated in printing the manuscripts in the best manner possible also deserve my thanks for the patience exhibited by them in carrying out the corrections made in the proofs.

This edition of the Asvasastra is based on the palm leaf manuscript in the Government Oriental Manuscripts Library, Madras, bearing D. No. 1347 containing 243 pages of 7 lines each. The manuscript is in a much injured condition and contains lacunae as the leaves are worm eaten and broken in several places. The press copy of this manuscript was collated with another copy got on loan from the University of Madras which helped to a great extent in filling the lacunae. I have to thank the Vice Chancellor of the Madras University for lending the manuscript. My thanks are also due to Pandit H. Sesha Iyengar, Retired Kannda Lecturer of the Madras University for comparing the press copy with his own manuscript and making the necessary corrections.

Govt. Oriental Manuscripts Library,
Madras

T. CHANDRASEKHARAN,
General Editor,
Madras Govt. Oriental Series.

PREFACE

We are thankful to the Madras Government for having given a lead to publish the old manuscript copies of different sciences which lie scattered in different Libraries in India and which are all in a decaying condition. The entire scheme of publication is financed by the Government even in the face of great economic crisis.

Asvasastra is one of such manuscripts taken up for publication. The old manuscripts were in the Madras Oriental Manuscripts Library and the mistakes and omissions found in them could not be corrected by comparing with other copies. The old manuscript copy of Asvasastra found in the Madras Gavernment Oriental Manuscripts Library is in palm leaves. It is in much dilapidated condition, some leaves were moth-eaten, some were torn and broken in many places. The press copy of the manuscript, was collated with another copy got on loan from the Madras University which helped to a great extent in filling up the lacunae. This copy also did not serve our purpose fully. Then a reference was made to a copy from Mysore Oriental Library. A copy prepared by Pandit H. Sesha Iyengar who was a Kannada Lecturer in the Madras University was secured but we got it only after the 5th, forme was completed. So even with the help of these manuscripts, there may be defective readings and omissions here and there. In the next publication, all these defects can be rectified if better manuscript copies are available. After the book was printed, we received a copy of Asvasastra in palm leaf from Moodabidiri Jaina Library, in South Kanara district. It is a pity we could not make use of this copy for collation. However, at the end of this note some of the stanzas which are not found in our present edited work but are found in the Moodabidri manuscript are appended. They will fill up the lacunae to some extent and afford additional information about this great branch of Veterinary Science.

This book is called Asvavaidya Shastra and deals with confirmation, colour, habits, diseases and treatment of horses. The book is divided into sixteen chapters.

The first chapter deals with the birth and features of the whole body of horses.

Second chapter deals with colours and their effects, good or bad.

Third chapter deals with the marks on their faces and their good or bad effects.

In the fourth chapter are described the different twists of hairs on the body with their good or bad effects.

Fifth chapter deals with the age of the horse.

In the sixth chapter the period of life can be determined by looking at the marks on the different parts of the body (Samudrika).

Seventh chapter deals with feeding of horses

In the eighth chapter, elaborate festive celebrations in honour of the horses done by kings and chieftains during Dasara are described.

In the ninth chapter, names of different parts of the body are given.

Tenth chapter deals with, medicines and the qualifications required of a true disciple who is to be initiated into the science of Asvasastra.

Eleventh chapter treats with colic and its treatment.

Twelfth chapter deals with various kinds of ulcers and their treatment.

Thirteenth chapter describes fever and its treatment.

Fourteenth and fiteenth deal with different ailments and their treatment.

Sixteenth deals with snake poison and Tuberculosis, their symptoms and treatment.

It is not known which are the Sanskrit works written by Sinhadatta and Revata, whom our author Abhinava Chandra mentions as great authorities on Asvasastra. However, we find a number of identical things said in this work and a sanskrit work on Veterinary Science "Hariharacaturanga" by name which is being published in the Madras Government Oriental Series. But our work contains more useful information about maintaining horses and treating when ill. In the Kannada introduction some parallels between the present work and Hariharacaturanga are given.

From the prefatory verses we can learn that the author's name is Abhinava Chandra. He is a Brahmin by caste and a brother of Somannaya. In the lives of Kannada Poets (by Sri. R. Narasimhachar), it is said that he was the son of Kalasaya and Attimabbe and a native of Bagevadi. Perhaps his real name was "Chandra" and he styled himself "Abhinava Chandra" to distinguish from a former Chandra who might have written an "Asvasastra".

His composition is good and style simple. Almost the entire work is written in Kanda metre.

It is extremely difficult to state anything more about the author and his work from the internal or external evidences in the text. The late R. Narasimhachar has assigned the date of C. 1400 for this author, judging the language employed in the text. That date seems tenable.

Is is often said that in these days when modern medicine is holding sway with its researches and new findings it is futile to spend time and energy on deciphering Ancient manuscripts about animal diseases. This is a form of cheap argument flung against everything ancient including medical science and it comes only from those who know very little of what is contained in the

old texts. There are many things in heaven and earth that we know not of. This applies very well to our present knowledge of animals and their diseases, which is only very little. Our ignorance about them is really colossal. India belongs to the old world and it takes pride in having some of the finest types of animals, even though they have now fallen on evil days for want of care and attention. These animals must have been evolved after a laborious process and they must have been attended to with skill and knowledge, as otherwise, we should have only mongrels' in this country. Some of this knowledge and skill has been handed down from generation to generation in Guru-Shishya parampara fashion while the others have been reduced to writing for the use of the future generations. It is quite possible that some of these writings may have got mutilated in the process of copying and recopying but all the same, by an intelligent process of careful collection and comparision, it should be possible to get at the original and decipher the contents. If this is done, there is no doubt we would get some valuable information which will throw light on the various obscure matters concerning Veterinary Science as practiced in this country. The effects of environment on health and disease, the relation of colour to the working capacity of the animal as well as to its temperament, the dietitic values of the various indigenous fodders and feeds-there and similar matters about which there is no little knowledge at present are likely subjects to be found in these old manuscripts and, therefore, the present attempt of collecting old manuscripts and printing them is indeed a laudable one and should be freely encouraged. We are sure there will be found many a gem of purest ray serene buried in ocean fathoms deep.

P. SRINIVASA RAO.

ಮುನ್ನುಡಿ

೧. ಮುದ್ರಣ ವಿಚಾರ

ಈ ಅಶ್ವಶಾಸ್ತ್ರವೆಂಬ ಗ್ರಂಥವು ಅಯ್ದು ಹಸ್ತಲಿಖಿತಪ್ರತಿಗಳ ಆಧಾರದಿಂದ ಮುದ್ರಿತ ವಾಗಿದೆ. ಮೊದಲು ಮದ್ರಾಸ್ ಓರಿಯಂಟಲ್ ಲೈಬ್ರರಿಯಲ್ಲಿದ್ದ ತಾಳಪತ್ರಾತ್ಮಕ ಪ್ರತಿಯಿಂದ ತಯಾರಿಸಿದ ಕಾಗದದ ಪ್ರತಿಯ ಆಧಾರದಿಂದ ಮುದ್ರಣದ ಪ್ರತಿಯು ಸಿದ್ಧವಾಗಿ ಮುದ್ರಣಾ ಲಯಕ್ಕೆ ಕಳುಹಿಸಲ್ಪಟ್ಟು ಒಂದು ಫಾರಂ ಮುದ್ರಣಕ್ಕೆ ಸಿದ್ಧವಾಯಿತು. ಆದರೆ ಆ ಭಾಗದಲ್ಲಿ ಒಂದು ಪದ್ಯವಾದರೂ ಪೂರ್ಣವಾಗಿಲ್ಲದಿದ್ದುದರಿಂದ ಮತ್ತೆ ಮೂರು ಪುಸ್ತಕಗಳ ಸಹಾಯದಿಂದ ಪ್ರಕೃತ ಮುದ್ರಣದ ಪ್ರತಿಯನ್ನು ತಯಾರಿಸಿ ಮುದ್ರಣದ ಕೆಲಸವನ್ನು ಪೂರ್ಣಗೊಳಿಸಿದೆ.

(೧). ಮದ್ರಾಸ್ ಲೈಬ್ರರಿಯಲ್ಲಿರುವ ತಾಳಪತ್ರಾತ್ಮಕವಾದ ಪ್ರತಿ. ಈ ಪ್ರತಿಯ ಓಲೆಗಳೆಲ್ಲವೂ ಒಡೆದುಹೋಗಿರುವುದಲ್ಲದೆ ೨ ಪತ್ರಗಳೂ ಗಳಿತವಾಗಿವೆ.

(೨). ಮದ್ರಾಸ್ ಯೂನಿವರ್ಸಿಟಿಯಲ್ಲಿ ಕನ್ನಡ ಲೆಕ್ಚರರಾಗಿದ್ದು ರಿಟೈರ್ಡ್ ಆಗಿರುವ ಪಂಡಿತ H. ಶೇಷಯ್ಯಂಗಾರ್ಯರಲ್ಲಿದ್ದ ಓಲೆಯ ಪ್ರತಿ—ಇದರಲ್ಲಿ ೪೮ ಓಲೆಯ ಪತ್ರಗಳಿವೆ. ಈ ಓಲೆಯ ಪ್ರತಿಯಲ್ಲಿಯೂ ಹಲವು ಓಲೆಗಳ ಅಂಚುಗಳು ಮುರಿದುಹೋಗಿರುವುವಲ್ಲದೆ ಮೊದಲ ನೆಯ ಮತ್ತು ೨೮ ನೆಯ ಓಲೆಗಳೂ ಗಳಿತವಾಗಿವೆ. ಇವೆರಡು ಪ್ರತಿಗಳಲ್ಲೂ ಟೀಕೆಯಿಲ್ಲ.

(೩). ಮೈಸೂರು ಸರ್ಕಾರದ ಓರಿಯಂಟಲ್ ಲೈಬ್ರರಿಯಲ್ಲಿರುವ ಓಲೆಯ ಪ್ರತಿ. ಇದರಲ್ಲಿ ಯಾವ ಬಗೆಯ ಲೋಪವಿಲ್ಲದಿದ್ದರೂ ಅಲ್ಲಲ್ಲಿ ಗ್ರಂಥಪಾತಗಳೂ ಲೇಖಕ ಪ್ರಮಾದದಿಂದ ತೋರಿಬರುವ ಅಶುದ್ಧಪಾಠಗಳೂ ಇವೆ. ಇದರಲ್ಲಿ ಟೀಕೆಯಿದೆ.

(೪). ಮದ್ರಾಸ್ ಯೂನಿವರ್ಸಿಟಿಯಲ್ಲಿ ಕನ್ನಡ ಲೆಕ್ಚರರಾಗಿದ್ದ ಪಂಡಿತ H. ಶೇಷಯ್ಯಂಗಾರ್ಯರಿಂದ ತಯಾರಿಸಿದ್ದ, ಹಲವು ಪ್ರತಿಗಳ ಪಾಠಗಳನ್ನು ಗುರ್ತಿಸಿದ್ದ ಕಾಗದದ ಪ್ರತಿ. ಗ್ರಂಥದ ೫, ೬ ಫಾರಂಗಳು ಮುದ್ರಿತವಾದ ಬಳಿಕ ಇದು ದೊರಕಿದುದರಿಂದ ಆದಿಭಾಗದಲ್ಲಿ ಇದರ ಸಾಹ್ಯವು ದೊರಕಲಿಲ್ಲ. ಇದರಲ್ಲಿ ೧೧೭ ಪತ್ರಗಳಿವೆ–ಟೀಕೆಯೂ ಇದೆ.

(೫). ಮೈಸೂರು ಮಹಾರಾಜಾ ಸಂಸ್ಕೃತ ಕಾಲೇಜಿನ ಸರಸ್ವತೀ ಭಂಡಾರದಲ್ಲಿರುವ ಓಲೆಯ ಪ್ರತಿ—ಇದರಲ್ಲಿ ಗ್ರಂಥವು ಅಲ್ಲಲ್ಲಿ ತ್ರುಟಿತವಾಗಿದೆ. ಟೀಕೆಯೂ ಇದೆ. ಇದರಲ್ಲಿ ಹಲವು ಶುದ್ಧಪಾಠಗಳೂ ಇವೆ. ಇದರ ಸಹಾಯವು ಆದಿಯಲ್ಲಿ ಸ್ವಲ್ಪ ಭಾಗಕ್ಕೆ ಮಾತ್ರವೇ ದೊರಕಿತು. ಉಳಿದುದಕ್ಕೆ ಅಲ್ಲಿ ಹೋಗಿ ಆ ಪಾಠವನ್ನು ಗುರ್ತಿಸಿಕೊಳ್ಳುವಷ್ಟು ಆನುಕೂಲ್ಯವೂ, ಕಾಲವೂ ಇಲ್ಲದಿದ್ದುದರಿಂದ ಸಾಧ್ಯವಾಗಲಿಲ್ಲ.

ಹೀಗೆ ಈ ನಾಲ್ಕು ಪ್ರತಿಗಳ ಸಹಾಯವು ದೊರಕಿದರೂ ಇನ್ನೂ ಅಲ್ಪಸ್ವಲ್ಪ ಲೋಪ ದೋಷಗಳು ಇದ್ದೇ ಇವೆ. ಕೆಲವು ಸ್ಥಳಗಳಲ್ಲಿ ಗ್ರಂಥಪಾತವೂ ಅಶುದ್ಧ ಪಾಠವೂ ಇದೆ. ಮುಂದೆ ಹಸ್ತಲಿಖಿತ ಪ್ರತಿಗಳ ಆಧಾರವು ದೊರಕಿದರೆ ಮುಂದಣ ಮುದ್ರಣದಲ್ಲಿ ಈಗಿರುವ ಈ ಅಲ್ಪಸ್ವಲ್ಪ ಲೋಪದೋಷಗಳನ್ನೂ ಸರಿಪಡಿಸಿಕೊಳ್ಳಬಹುದು.

ಲಿಖಿತ ಪ್ರತಿಗಳನ್ನು ಅನನ್ಯಪ್ರಯೋಜನವಾಗಿ ಕಳುಹಿಸಿ ಕೊಟ್ಟ, ಪಂಡಿತ H. ಶೇಷಯ್ಯಂಗಾರ್ಯರಿಗೂ, ಮದ್ರಾಸ್ ಯೂನಿವರ್ಸಿಟಿ ರಿಜಿಸ್ಟ್ರಾರವರಿಗೂ, ಮೈಸೂರು ಓರಿಯೆಂಟಲ್ ಲೈಬ್ರರಿ ಕ್ಯೂರೇಟರಿಗೂ ನಮ್ಮ ಅನಂತಾನಂತ ವಂದನೆಗಳು. ಈ ಗ್ರಂಥಮುದ್ರಣಕ್ಕೆ ಮೂಲ ಕಾರಣಭೂತರಾದ ಮದ್ರಾಸ್ ಓರಿಯಂಟಲ್ ಲೈಬ್ರರಿ ಕ್ಯೂರೇಟರವರಿಗೂ, ಮುದ್ರಣಕ್ಕೆ ಧನ ಸಹಾಯವನ್ನೆಸಗಿದ ಮದ್ರಾಸ್ ಗವರ್ನಮೆಂಟಿಗೂ ನನ್ನ ಅನಂತಾನಂತ ವಂದನೆಗಳು.

೨. ಗ್ರಂಥ ಮತ್ತು ಗ್ರಂಥಕರ್ತೃವಿನ ವಿಚಾರ

ಈ ಗ್ರಂಥಕ್ಕೆ "ಅಶ್ವಶಾಸ್ತ್ರ"ವೆಂದು ಹೆಸರು. ಕೆಲವು ಪ್ರತಿಗಳಲ್ಲಿ ಅಶ್ವವೈದ್ಯವೆಂದೂ, ಅಶ್ವವೈದ್ಯಸಂಗ್ರಹವೆಂದೂ ಬರೆದಿದೆ. ಆದರೆ ಈ ಗ್ರಂಥದ ಆಧಾರದಿಂದ ಇದಕ್ಕೆ ಅಶ್ವಶಾಸ್ತ್ರವೆಂದೇ ಗ್ರಂಥಕರ್ತನು ನಾಮಕರಣಮಾಡಿರುವನೆಂಬುದು,

*ಕನ್ನಡಕವಿ ನಿಜಕವಿತೆಯ | ಬಿನ್ನಣಮಂ ಮೆಱೆವುದಱಿದೆ ಪದ್ಯದೊಳದಱಿಂ ||
ಬಿನ್ನಣಮನಱಿಪಲೆಂ | ದೆನ್ನಟ್ಟಿಯೆ(ರ್ಥಿಯ) "ವಾಜಿಶಾಸ್ತ್ರ"ಮಂ ವಿರಚಿಸುವೆಂ ||

ಎಂಬ ಪದ್ಯದಿಂದ ತಿಳಿದುಬರುವುದು.

ಈ ಲೋಕದಲ್ಲಿ ಜನ್ಮವೆತ್ತಿದ ಪ್ರತಿಯೊಬ್ಬ ಮನುಷ್ಯನೂ ತನ್ನ ಜೀವಿಕಾಲದಲ್ಲಿ ದೇಹಯಾತ್ರೆಯನ್ನು ಸುಕರವಾಗಿ ನಡೆಯಿಸಿಕೊಂಡು ಹೋಗಲು ಯಾವುದಾದರೊಂದು ವೃತ್ತಿಯನ್ನವಲಂಬಿಸಿಯೇ ತೀರಬೇಕೆಂಬ ವಿಷಯವು ಸರ್ವಜನ ವಿದಿತವಾಗಿಯೇ ಇದೆ.

ಕುದುರೆಯನ್ನು ಪೋಷಿಸಿ ಅದರಿಂದ ತನ್ನ ಜೀವನ ವೃತ್ತಿಯನ್ನು ನಿರ್ವಹಿಸಿಕೊಳ್ಳುವವನಿಗೆ ಅಶ್ವಶಾಸ್ತ್ರದ ಜ್ಞಾನವು ಅತ್ಯಾವಶ್ಯಕವು. ಇಂತಹ ಶಾಸ್ತ್ರಗಳಿಗೆ ಸಂಹಿತೆಯೆಂದೂ, ಆಗಮವೆಂದೂ ಹೆಸರು. ಈ ಕವಿಯೇ ಅಲ್ಲಲ್ಲಿ "ತುರಗಾಗಮ" "ಅಶ್ವಾಗಮ" ಎಂದೂ ಪ್ರಯೋಗಿಸಿರುವನು.

ಹೀಗೆ ಪ್ರತಿಯೊಬ್ಬ ಮನುಷ್ಯನಿಗೂ ತಾನು ಅವಲಂಬಿಸಿದ ವೃತ್ತಿಯನ್ನು ಚೆನ್ನಾಗಿ ನಿರ್ವಹಿಸಲು ಆ ವೃತ್ತಿಯ ವಿಷಯದಲ್ಲಿ ಸಂಪೂರ್ಣ ಜ್ಞಾನವಿರಬೇಕು. ಈ ಬಗೆಯ ಜ್ಞಾನಕ್ಕೆ ವಿದ್ಯೆಯೆಂದು ವ್ಯವಹಾರವು. ವಿದ್ಯೆಯು ಲೌಕಿಕ ಮತ್ತು ಅಲೌಕಿಕ ಎಂದು ಎರಡು ಬಗೆಯಾಗಿದೆ. ಮೋಕ್ಷವಿಷಯನ್ನು ತಿಳಿಸುವ ವಿದ್ಯೆಗೆ ಜ್ಞಾನವೆಂದೂ, ಲೌಕಿಕವ್ಯವಹಾರಕ್ಕೆ ಬೇಕಾದ ವಿದ್ಯೆಗೆ ವಿಜ್ಞಾನವೆಂದೂ ಪಂಡಿತರು ಶಾಸ್ತ್ರಗಳಲ್ಲಿ ವ್ಯವಸ್ಥೆಮಾಡಿರುವರು. ಈ ಬಗೆಯ ವಿಜ್ಞಾನಕ್ಕೆ ಕಲೆಯೆಂದೂ, ಈ ಕಲೆಗಳು ಅರುವತ್ತುನಾಲ್ಕೆಂದೂ ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. ಕುದುರೆಗಳನ್ನು ಪೋಷಿಸುವ ವಿಧಾನವೂ ಈ ಕಲೆಗಳಲ್ಲಿ ಒಂದಾಗಿದೆ ಈ ಬಗೆಯ ಕಲೆಗಳನ್ನು ವಿವರಿಸುವ ಗ್ರಂಥಗಳಿಗೆ ಶಾಸ್ತ್ರಗಳೆಂದು ಹೆಸರು. ಈ ಗ್ರಂಥದಲ್ಲಿ ಕುದುರೆಗೆ ಸಂಬಂಧಿಸಿದ ಲಕ್ಷಣ ಪೋಷಣ ವೈದ್ಯಾದಿ ಹಲವು ವಿಷಯಗಳನ್ನು ಸಂಗ್ರಹವಾಗಿ ತಿಳಿಸಿರುವುದರಿಂದ ಇದಕ್ಕೆ ಅಶ್ವಶಾಸ್ತ್ರವೆಂಬ ಹೆಸರು ತಕ್ಕುದಾಗಿಯೇ ಇದೆ. ಈ ಗ್ರಂಥವು ಸ್ವತಂತ್ರ ಗ್ರಂಥವಲ್ಲ. ಗ್ರಂಥಕರ್ತನು ಹೇಳಿರುವಂತೆ

* ಈ ಪದ್ಯವು ಪ್ರಕೃತ ಮುದ್ರಿತ ಗ್ರಂಥದಲ್ಲಿಲ್ಲ. ಕವಿಚರಿತ್ರೆಕಾರರಾದ ಶ್ರೀಮಾನ್ ಆರ್. ನರಸಿಂಹಾಚಾರ್ಯರು ಉದಾಹರಿಸಿರುವ ಪದ್ಯವನ್ನು ಇಲ್ಲಿ ಕೊಟ್ಟಿದೆ. ಈ ಪದ್ಯವಲ್ಲದೆ ಇನ್ನೂ ಈ ಗ್ರಂಥದ ಪ್ರಾಶಸ್ತ್ಯವನ್ನು ಹೇಳುವ ಒಂದೆರಡು ಪದ್ಯಗಳೂ ಈ ಪ್ರಕೃತ ಗ್ರಂಥದಲ್ಲಿಲ್ಲ. ಇವನ್ನು ಒಳಗೊಂಡಿದ್ದ ಪ್ರತಿಯೊಂದು ಕವಿಚರಿತ್ರೆಕಾರರಿಗೆ ದೊರಕಿರಬೇಕು.

ಅನುಪಮ ಹಯಶಾಸ್ತ್ರಾಗಮ | ವನನಿಧಿಯೊಳ್ ಸಿಂಹದತ್ತಕೃತಿಲಕ್ಷಣದಿಂ ||
ದಿನಕರತನಯನ ರೇವಂ | ತನ ಮತದಿಂ ಪೇೞ್ವೆನಱಿಯೆ ಪೊಸಕನ್ನಡದಿಂ ||

ಎಂಬ ಪದ್ಯದಿಂದ ಸಂಸ್ಕೃತದಲ್ಲಿ ಸಿಂಹದತ್ತ, ರೇವಂತ ಇವರು ಮಾಡಿದ್ದ ಹಯಶಾಸ್ತ್ರವನ್ನನುಸರಿಸಿ ಸಂಗ್ರಹವಾಗಿ ಹೊಸಗನ್ನಡದಲ್ಲಿ ಈ ಗ್ರಂಥವನ್ನು ಬರೆದಿರುವನೆಂದು ತಿಳಿದು ಬರುವುದು. ಆದುದರಿಂದ ಈ ಗ್ರಂಥದಿಂದ ಅಶ್ವಪಾಲಕರಿಗೆ ತುಂಬಾ ಪ್ರಯೋಜನವುಂಟೆಂಬುದನ್ನು ಮತ್ತೆ ಹೇಳಬೇಕಾಗಿಲ್ಲ.

ಈ ಗ್ರಂಥದಲ್ಲಿ ಹದಿನಾರಧ್ಯಾಯಗಳೂ ೮೮೮ ಕಂದಪದ್ಯಗಳೂ ನಾಲ್ಕಾರು ಸಮವೃತ್ತಗಳೂ ಇರುವುವು. ಒಟ್ಟು ೨೩೨೦ *ಗ್ರಂಥಸಂಖ್ಯೆಯೆಂದು ಒಂದು ಓಲೆಯ ಪ್ರತಿಯ ಕೊನೆಯಲ್ಲಿ ಬರೆದಿದೆ. ಗ್ರಂಥವಿಭಾಗಕ್ಕೆ ಅಧ್ಯಾಯವೆಂದೂ, ಅಧಿಕಾರವೆಂದೂ, ಆಶ್ವಾಸವೆಂದೂ ಪ್ರತಿಗಳಲ್ಲಿ ಭಿನ್ನ ಭಿನ್ನ ಪಾಠಗಳಿವೆ. ಆದರೆ ಈ ಗ್ರಂಥದ ಅಧ್ಯಾಯಗಳ ಕೊನೆಯಲ್ಲಿ ದೊರಕುವ ಉಪಸಂಹಾರ ಪದ್ಯಗಳಲ್ಲಿ "ಅಧ್ಯಾಯ" ಎಂಬ ಹೆಸರೇ ವಿಶೇಷವಾಗಿರುವುದರಿಂದ ಆ ಹೆಸರನ್ನೇ ಈ ಗ್ರಂಥದಲ್ಲಿ ವ್ಯವಹರಿಸಿದೆ. ಅಧ್ಯಯನ ಎಂಬ ಹೆಸರೂ ಒಂದು ಪದ್ಯದಲ್ಲಿ ದೊರಕುವುದು.

ಈ ಗ್ರಂಥದಲ್ಲಿ ಕ್ರಮವಾಗಿ ಮೊದಲಧ್ಯಾಯದಲ್ಲಿ–ಮಂಗಳಶ್ಲೋಕ, ಪ್ರತಿಜ್ಞೆಯಾದ ಬಳಿಕ ಸೃಷ್ಟಿಕ್ರಮದಲ್ಲುಂಟಾದ ಕುದುರೆಗಳ ಉತ್ಪತ್ತಿಕ್ರಮ, ಸರ್ವಾಂಗ ಲಕ್ಷಣ, ಎರಡನೆಯ ಅಧ್ಯಾಯದಲ್ಲಿ ಕುದುರೆಯ ವರ್ಣಗಳು, ವರ್ಣಾನುಗುಣವಾಗಿ ಹೆಸರುಗಳು, ಅವುಗಳ ಶುಭಾಶುಭಗಳು, ಮೂರನೆಯ ಅಧ್ಯಾಯದಲ್ಲಿ ಕುದುರೆಗಳ ಮುಖಾದಿಗಳಲ್ಲಿರುವಪುಂಡ್ರ ಪುಷ್ಪಾದಿಗಳ ಲಕ್ಷಣ, ಅವುಗಳ ಶುಭಾಶುಭ ಫಲಗಳು. ನಾಲ್ಕನೆಯ ಅಧ್ಯಾಯದಲ್ಲಿ ಕುದುರೆಗಳ ಸುಳಿಗಳ ಲಕ್ಷಣ ಅವುಗಳ ಶುಭಾಶುಭ ಫಲಗಳು. ಐದನೆಯದರಲ್ಲಿ ಕುದುರೆಯ ಆಯುಸ್ಸಿನ ಪರಿಮಾಣಗಳು. ಆರನೆಯದರಲ್ಲಿ ಕುದುರೆಗಳ ಅಂಗಸಾಮುದ್ರಿಕದಿಂದ ಆಯುಃಪರಿಮಾಣ ನಿರ್ಣಯ. ಏಳನೆಯದರಲ್ಲಿ ಕುದುರೆಗಳ ಪೋಷಣವಿಧಾನ. ಎಂಟನೆಯದರಲ್ಲಿ ಕುದುರೆಗಳನ್ನು ನೀರಾಜಿಸುವ ಮಹಾನವಮಿಯ ಉತ್ಸವಕ್ರಮ. ಒಂಬತ್ತನೆಯದರಲ್ಲಿ ಹಯಶರೀರಪ್ರದೇಶ ವಿಜ್ಞಾನ (ಕುದುರೆಯ ಅಂಗೋಪಾಂಗ ಸ್ಥಳ ವಿಭಾಗ–ಅವುಗಳ ಹೆಸರು). ಹತ್ತನೆಯದರಲ್ಲಿ ಅಶ್ವವೈದ್ಯ, ಗುರುಶಿಷ್ಯಲಕ್ಷಣ, ಶೂಲರೋಗ ವಿಧಾನ ಮತ್ತು ಚಿಕಿತ್ಸೆ. ಹನ್ನೊಂದನೆಯದರಲ್ಲಿ ಶೂಲೆರೋಗ, ಅದರ ಚಿಕಿತ್ಸೆ, ಹನ್ನೆರಡನೆಯದರಲ್ಲಿ ವ್ರಣಚಿಕಿತ್ಸೆ, ಹದಿಮೂರನೆಯದರಲ್ಲಿ ಜ್ವರಲಕ್ಷಣ ಚಿಕಿತ್ಸೆ, ಹದಿನಾಲ್ಕನೆಯದರಲ್ಲಿ– ತಾಳುರೋಗ, ಜಿಹ್ವೆರೋಗ, ಗಳಗ್ರಹ, ಶೋಫ, ಉಲೂಕಪಾತ, ಬಡವು ಶೋಫ ಇವುಗಳ ಲಕ್ಷಣ ಔಷಧಿಗಳು. ಹದಿನೈದನೆಯಧ್ಯಾಯದಲ್ಲಿ– ತಳರೋಗ, ಕೂರ್ಚರೋಗ, ಕಣ್ಣಿನ ಪುಷ್ಪಪಟಲಾದಿರೋಗ, ಆವುಂಡಿಗೆ (ಚರಣಗ್ರಂಥಿರೋಗ) ಇವುಗಳ ಲಕ್ಷಣ, ಔಷಧಿಗಳು– ಇವನ್ನು ಹೇಳಿರುವನು. ಹದಿನಾರರಲ್ಲಿ– ಸರ್ಪವಿಷಾದಿಗಳ ವ್ಯಾಪ್ತಿ, ಕ್ಷಯರೋಗ ಇವುಗಳ ಲಕ್ಷಣ, ಔಷಧಗಳು – ಇವನ್ನು ಹೇಳಿ, ಕೊನೆಯಲ್ಲಿ ಗುಗ್ಗುಳ ಲಕ್ಷಣ, ಕುದಿರೆಗೆ ಕೊಡುವ ಗುಗ್ಗುಳ ಲಕ್ಷಣ ಮತ್ತು ಅದನ್ನು ಕುದಿರೆಗಳಿಗೆ ಕೊಡುವ ಕ್ರಮ – ಕೊನೆಯಲ್ಲಿ ಹರೀತಕೀ ಕ್ರಿಯೆ (ಅಳಲೆಕಾಯಿನ ಸೇವನ ಕ್ರಮ) ಯನ್ನು ಹೇಳಿ, ಗ್ರಂಥವನ್ನು ಉಪಸಂಹರಿಸಿರುವನು.

ಈ ಗ್ರಂಥಕರ್ತೃವು ಹೇಳಿರುವ ಸಿಂಹದತ್ತ, ರೇವಂತ ಇವರಿಂದ ಬರೆಯಲ್ಪಟ್ಟ ಸಂಸ್ಕೃತ ಗ್ರಂಥಗಳಾವುದೆಂದು ತಿಳದುಬರುವುದಿಲ್ಲ. ಆದರೆ ಶಾಲಿಹೋತ್ರ ಋಷಿಪ್ರಣೀತವಾದ ಅಶ್ವಶಾಸ್ತ್ರ

*ಗ್ರಂಥ – ಮೂವತ್ತೆರಡು ಅಕ್ಷರಗಳಿಗೆ ಒಂದು ಗ್ರಂಥವೆಂದು ಸಂಸ್ಕೃತಭಾಷೆಯಲ್ಲಿ ರೂಢವಾಗಿದೆ.

ವೊಂದು ಮೈಸೂರು ಲೈಬ್ರರಿಯಲ್ಲಿ ದೊರಕುವುದು. ಅದನ್ನು ಈ ವಿಮರ್ಶೆಯಲ್ಲಿ ಉಪಯೋಗಿಸಲು ಕಾಲವಿಲಂಬವಿಲ್ಲದುದರಿಂದ ಶಕ್ಯವಾಗಲಿಲ್ಲ. ಆದರೆ ಈಗ ತಾನೇ ಈ ಲೈಬ್ರರಿಯ ಗ್ರಂಥಮಾಲೆಯಲ್ಲಿ "ಹರಿಹರಚತುರಂಗ"ವೆಂಬ ಸಂಸ್ಕೃತ ಗ್ರಂಥವೊಂದು ಮುದ್ರಿತವಾಗುತ್ತಿರುವುದು, ಇದು ಓರಗಲ್ಲಿನ ಪ್ರತಾಪರುದ್ರದೇವನ ಕಾಲದಲ್ಲಿ ಆತನಮಂತ್ರಿಯಾದ ಗೋದಾವರಮಿಶ್ರನೆಂಬುವನಿಂದ ರಚಿತವಾದುದು. ಅದರಲ್ಲಿ ಅಶ್ವಲಕ್ಷಣ ಪರಿಚ್ಛೇದವೆಂಬ ಭಾಗದಲ್ಲಿ ೮೩೭ ಅನುಷ್ಟುಪ್ ಶ್ಲೋಕಗಳಲ್ಲಿ ಅಶ್ವಲಕ್ಷಣವನ್ನು ಮಾತ್ರ ವಿವರವಾಗಿ ಹೇಳಿರುವನು. ಈ ಗ್ರಂಥದಲ್ಲಿ ಹೇಳಿರುವ ಪೋಷಣ ವಿಧಿ, ವೈದ್ಯವಿಧಿಗಳನ್ನು ಹೇಳಿಲ್ಲ; ಪ್ರಕೃತದಲ್ಲಿ ಅದರಲ್ಲಿ ಹೇಳಿರುವ ಹಲವು ವಿಷಯಗಳಿಗೆ ಈ ಗ್ರಂಥಸ್ಥ ವಿಷಯದೊಡನೆ ಸಂವಾದವಿರುವುದರಿಂದ ಅದರಲ್ಲಿ ಹೇಳಿರುವ ವಿಷಯಗಳೊಡನೆ ಇಲ್ಲಿ ಸಂಗ್ರಹವಾಗಿ ಹೋಲಿಸಿದೆ.

ಪೃಥ್ವೀಪಾಲನವೆಂಬ ಧರ್ಮಾವಲಂಬನವೇ ರಾಜತ್ವದ ಮುಖ್ಯಲಕ್ಷಣ, ಪೃಥ್ವೀಪಾಲನದಲ್ಲಿ ಬಲಸಹಾಯವು ಅತಿಮುಖ್ಯ. ಬಲವು ಆನೆ, ಕುದುರೆ, ರಥ, ಪತ್ತಿ ಎಂದು ನಾಲ್ಕು ಅಂಗವುಳ್ಳುದಾಗಿ ಚತುರಂಗವೆನಿಸಿಕೊಳ್ಳುವುದು. ಈ ಚತುರಂಗದಲ್ಲಿ ಅಶ್ವಬಲವೇ ಬಹು ಮುಖ್ಯವಾದುದು, ಆದುದರಿಂದ ರಾಜನಾದವನಿಗೆ ಅಶ್ವಲಕ್ಷಣವು ಆಗತ್ಯವಾಗಿ ತಿಳಿದಿರಬೇಕು. ಅದಕ್ಕಾಗಿ ಆ ವಿಷಯವನ್ನು ಇಲ್ಲಿ ಹೇಳುವೆನೆಂದು ಆರಂಭಿಸಿ ಕುದುರೆಗಳ ಉತ್ಪತ್ತಿಕ್ರಮವನ್ನು ಮೊದಲು ಹೇಳಿರುವನು. ಜಗತ್ಸೃಷ್ಟಿಮಾಡಲುಪಕ್ರಮಿಸಿದ ಬ್ರಹ್ಮನು ಶಾಸ್ತ್ರೋಕ್ತವಾಗಿ ಯಾಗವೊಂದನ್ನು ಮಾಡಿದನು. ಆ ಯಾಗದ ಎರಡನೆಯಾಹುತಿಯಲ್ಲಿ ಶುಭಲಕ್ಷಣದ ನಾಲ್ಕು ರೆಕ್ಕೆಗಳುಳ್ಳ ಬಿಳಿಯ ಬಣ್ಣದ ಉತ್ತಮಾಶ್ವವೊಂದು ಹುಟ್ಟಿ ಅತಿವೇಗದಿಂದ ಆಕಾಶಕ್ಕೆ ಹಾರಿಹೋಯಿತು. ಹೋಮಧೂಮದಿಂದುಂಟಾದ ಕಣ್ಣೀರಿನಿಂದ ಬ್ರಹ್ಮನಿಗೆ ಆ ಕುದುರೆ ಹಾರಿಹೋದುದು ಕಾಣಲಿಲ್ಲ. ಬಳಿಕ ಬ್ರಹ್ಮನು ತಿಳಿದು ಆ ಕುದುರೆಗೆ ನೀನು ಸಮುದ್ರದಲ್ಲಿ ವಾಸಮಾಡುತ್ತಿರು ಎಂದು ಶಾಪಕೊಟ್ಟನು. ಆಗ ಆಕಾಶದಲ್ಲಿ ಹಾರಿಹೋಗುತ್ತಿದ್ದ ಆ ಕುದುರೆಯು ಒಡನೆಯೇ ಸಮುದ್ರದಲ್ಲಿ ಬಿದ್ದು ಬಹುಕಾಲ ಅಲ್ಲಿದ್ದಿತು. ದೇವಾಸುರರು ಸಮುದ್ರವನ್ನು ಕಡೆದಾಗ ಉಚ್ಚೈಶ್ರವಸ್ಸು ಎಂಬ ಹೆಸರಿನಿಂದ ಅದು ಮತ್ತೆ ಹುಟ್ಟಿಬಂದಿತು. ಅದನ್ನು ಆಕಾಲದಲ್ಲಿ ರಾಕ್ಷಸ ಚಕ್ರವರ್ತಿಯಾಗಿದ್ದ ಬಲಿಯು ವಶಪಡಿಸಿಕೊಂಡು ದೇವತೆಗಳನ್ನೆಲ್ಲಾ ಜಯಿಸಿದನು. ಬಳಿಕ ದೇವತೆಗಳು ಬ್ರಹ್ಮನಲ್ಲಿ ಹೋಗಿ ನಮಗೂ ಉತ್ತಮಾಶ್ವವನ್ನು ದಯಪಾಲಿಸಬೇಕೆಂದು ಬೇಡಿಕೊಂಡರು. ಆಗ ಬ್ರಹ್ಮನು ಓ ದೇವತೆಗಳಿರಾ, ದಕ್ಷನು ಹಿಂದೆ ಯಾಗಮಾಡುತ್ತಿರುವಾಗ ಅಲ್ಲಿ ಇದ್ದ ನನ್ನ ಕಣ್ಣಿನಲ್ಲಿ ಹೋಮಧೂಮದಿಂದ ಕಣ್ಣೀರು ಬಂದಿತು. ಅದನ್ನು ಶ್ರೀ ಮಹಾಲಕ್ಷ್ಮಿಯು ಆತುಹಿಡಿದುಕೊಂಡಳು. ಅವರಿಂದ ಕುದಿರೆಗಳು ಹುಟ್ಟಿದುವು. ಆದುದರಿಂದ ಆ ಕುದಿರೆಗಳಿಗೆ ಲಕ್ಷ್ಮೀಪುತ್ರರೆಂದು ಹೆಸರಾಯಿತು ಆ ಕುದಿರೆಗಳು ಒಳ್ಳೆಯ ಲಕ್ಷಣಗಳುಳ್ಳುವೂ ಶುದ್ಧ ಬಿಳಿಯ ವರ್ಣದುವೂ ಆಗಿದ್ದು ಒಳ್ಳೆಯ ಬಾಲ ಮತ್ತು ಕೇಸರಗಳಿಂದ ಶೋಭಿಸುವುವು. ನಾಲ್ಕು ರೆಕ್ಕೆಗಳುಳ್ಳುದುವೂ ಆಗಿದ್ದುವು. ಅವುಗಳೇ ಬ್ರಾಹ್ಮಣಜಾತಿಯ ಕುದುರೆಗಳು. ಎದೆಯಲ್ಲಿ ನಿಂತ ಕಣ್ಣೀರಿನಿಂದ ಹುಟ್ಟಿದುವು ಕ್ಷತ್ರಿಯ ಜಾತಿಯ ಕುದುರೆಗಳು. ತೊಡೆಯಲ್ಲಿ ನಿಂತ ಕಣ್ಣೀರಿನಿಂದ ಹುಟ್ಟಿದುವು ವೈಶ್ಯಜಾತಿಯವು, ಪಾದದಲ್ಲಿ ನಿಂತ ಕಣ್ಣೀರಿನಿಂದ ಹುಟ್ಟಿದವು, ಶೂದ್ರಜಾತಿಯ ಕುದುರೆಗಳು. ಹೀಗೆ ಇವುಗಳೆಲ್ಲವೂ ದಕ್ಷಾಶ್ರಮದ ಸುತ್ತಲೂ ಸಂಚರಿಸುತ್ತಾ ಯಜ್ಞಸಂಭಾರಗಳನ್ನೆಲ್ಲಾ ನಾಶಮಾಡುತ್ತಿದ್ದುವು ಆಗ ದಕ್ಷನು ಅವುಗಳಿಗೆ ಶಾಪಕೊಟ್ಟನು. ಆ ಶಾಪದಿಂದ ಅವುಗಳ ರೆಕ್ಕೆಗಳೆಲ್ಲವೂ ಹೋಗಿ ಅವು ವಧಬಂಧನಗಳಿಗೆ ಗುರಿಯಾಗಿ ದೇವಮನುಷ್ಯರ ವಶವಾಗುವ

ಸ್ಥಿತಿಯನ್ನು ಪಡೆದುವು. ಆಗ ಆ ಕುದಿರೆಗಳು ಮತ್ತೆ ದಕ್ಷನನ್ನು ಪ್ರಾರ್ಥಿಸಲು ಆತನು ನೀವು ಅಶ್ವಮೇಧಯಾಗದಲ್ಲಿ ಪಶುಗಳಾಗುವುದರಿಂದ ನಿಮಗೆ ಪುಣ್ಯಲೋಕಗಳು ಲಭಿಸುತ್ತವೆ. ನೀವು ಹಿಮಾಲಯದ ತಪ್ಪಲಲ್ಲಿ ಹೋಗಿ ವಾಸಮಾಡಿರಿ ಎಂದು ಅನುಗ್ರಹಿಸಿದನು. ಆದುದರಿಂದ ಅವು ಈಗ ಹಿಮಾಲಯ ತಪ್ಪಲಲ್ಲಿ ಶಾಲಿಹೋತ್ರ ಮಹರ್ಷಿಯ ಆಶ್ರಮದ ಸುತ್ತಲೂ ವಾಸಿಸುತ್ತಿವೆ. ನೀವು ಆ ಋಷಿಗಳ ಅನುಗ್ರಹದಿಂದ ಆ ಕುದುರೆಗಳನ್ನು ಪಡೆಯಿರಿ ಎಂದು ಹೇಳಿದನು. ಬಳಿಕ ದೇವತೆಗಳೆಲ್ಲರೂ ಹಿಮಾಲಯದತಪ್ಪಲಿಗೆ ಹೋಗಿ ಶಾಲಿಹೋತ್ರ ಮಹರ್ಷಿಗಳನ್ನು ಯಾಚಿಸಲು ಅವರು ಆಕುದಿರೆಗಳಲ್ಲಿ ಒಬ್ಬೊಬ್ಬರಿಗೆ ಉತ್ತಮವಾದ ಒಂದೊಂದು ಬಣ್ಣದಂತೆ ಹಲವು ಬಣ್ಣದ ಕುದಿರೆಗಳನ್ನು ಇಂದ್ರಾದಿ ದಿಕ್ಪಾಲಕರಿಗೂ ದೇವತೆಗಳಿಗೂ ಕೊಟ್ಟು ಉಳಿದುವನ್ನು ಮನುಷ್ಯರಿಗೆ ಹಂಚಿಕೊಟ್ಟರು. ಹೀಗೆ ಮನುಷ್ಯರ ಹಂಚಿಕೆಗೆ ಬಂದ ಕುದಿರೆಗಳ ವಂಶದುವುಗಳೇ ಈಗ ಭೂಮಿಯಲ್ಲಿರುವ ಕುದಿರೆಗಳು ಎಂದು ಉತ್ಪತ್ತಿ ಕ್ರಮವು ವಿವರವಾಗಿ ಹೇಳಿರುವುದು. ಈ ಗ್ರಂಥದಲ್ಲಿಯಾದರೋ ಬ್ರಹ್ಮನ ಕಣ್ಣೀರಿನಿಂದಲೂ, ಸಮುದ್ರ ಮಥನದಿಂದಲೂ, ಯಜ್ಞದಿಂದಲೂ, ಮೃಗ್ಯೂಲೂಕಗಳಿಂದಲೂ ನಾಲ್ಕು ಬಗೆಯಲ್ಲಿ ಕುದಿರೆಗಳು ಹುಟ್ಟಿ ರೆಕ್ಕೆಯೊಡನೆ ಹಾರಾಡುತ್ತ ಲೋಕಹಿಂಸಕಗಳಾಗಿದ್ದುವು. ಆಗ ಬ್ರಹ್ಮನು ತನ್ನ ಯಜ್ಞದಲ್ಲಿ ಹುಟ್ಟಿದ ಶಾಲಿಹೋತ್ರನಿಗೆ ಆಕುದಿರೆಗಳನ್ನು ಶಿಕ್ಷಿಸುವಂತೆ ಹೇಳಿದನು. ಶಾಲಿಹೋತ್ರನು ದೇವಾಸುರರು ವಾಹನಬೇಕೆಂದು ಬಂದು ತನ್ನನ್ನು ಯಾಚಿಸಲು ಮಂತ್ರಾಕ್ಷರಬಲದಿಂದ ಆ ಕುದಿರೆಗಳ ರೆಕ್ಕೆಗಳನ್ನು ಕತ್ತರಿಸಿ ದೇವತೆಗಳ ವಶಕ್ಕೆ ಕೊಟ್ಟನು ಎಂದು ಸಂಗ್ರಹವಾಗಿ ಹೇಳಿರುವನು ಎಂದರೆ ಉತ್ಪತ್ತಿಕ್ರಮದಲ್ಲೂ ಅವುಗಳನ್ನು ದೇವತೆಗಳೂ ಮನುಷ್ಯರೂ ಪಡೆದ ಕ್ರಮದಲ್ಲೂ ಇಬ್ಬರ ಹೇಳಿಕೆಗೂ ಸ್ವಲ್ಪ ವ್ಯತ್ಯಾಸವಿದೆ.

ಹೀಗೆ ಬ್ರಹ್ಮನಿಂದಲೇ ಹುಟ್ಟಿದ ಒಂದೇ ಬಗೆಯ ಗುಣಶೀಲಗಳುಳ್ಳ ಕುದಿರೆಗಳು ಮನುಷ್ಯರ ವಶವಾಗಿ ಹಲವು ದೇಶಗಳನ್ನು ಸೇರಿಕೊಂಡುದರಿಂದ ಆಯಾ ದೇಶದಲ್ಲಿ ಸೇರಿಕೊಂಡ ಕುದಿರೆಗಳ ವಂಶದ ಕುದಿರೆಗಳಲ್ಲಿ ಗುಣಶೀಲಗಳೂ ಭಿನ್ನಭಿನ್ನವಾಗಿರುವುದರಿಂದ ಆದೇಶ ಭೇದಗಳನ್ನು ಹೇಳುವೆನೆಂದುಪಕ್ರಮಿಸಿ ಕಾಂಭೋಜಾದಿ ಮಗಧ ಪರ್ಯಂತ ೫೪ ದೇಶಗಳ ಹೆಸರನ್ನು ಹೇಳಿ ಬಳಿಕ ಪ್ರತಿಯೊಂದು ದೇಶದ ಕುದಿರೆಗಳ ಲಕ್ಷಣ ಗುಣಶೀಲಸತ್ವಾದಿಗಳನ್ನು ವಿಶೇಷವಾಗಿ ವಿವರಿಸಿರುವನು. ಈ ಗ್ರಂಥಕರ್ತೃವಾದರೋ ಈ ದೇಶಭೇದದ ವಿಷಯವನ್ನು ಒಂದೆರಡು ಪದ್ಯಗಳಲ್ಲಿ ಹೇಳಿ ಸಂಗ್ರಹಿಸಿರುವನು.

ಬಳಿಕ ಬ್ರಾಹ್ಮಣ ಮೊದಲಾದ ನಾಲ್ಕುವರ್ಣದ ಕುದಿರೆಗಳ ಗುಣಶೀಲಗಳನ್ನು ಹೇಳಿ ಸತ್ವರಜಸ್ತಮೋ ಗುಣಸಂಬಂಧದಿಂದಲೂ ಜಾತಿಭೇದವನ್ನು ತಿಳಿವ ಕ್ರಮವನ್ನು ಹೇಳಿ–ಕುದಿರೆಗಳ ಪ್ರದೇಶ ವಿಜ್ಞಾನವನ್ನು ಹೇಳಿರುವನು. ಈ ಗ್ರಂಥಕರ್ತೃವು ಕೂಡ ಒಂದು ಅಧ್ಯಾಯವನ್ನೇ ಈ ಪ್ರದೇಶವಿಜ್ಞಾನಕ್ಕಾಗಿ ಉಪಯೋಗಿಸಿರುವನು. ಈ ಭಾಗದಲ್ಲಿ ಎರಡು ಗ್ರಂಥಸ್ಥ ವಿಭಾಗಗಳಿಗೂ ಮುಕ್ಕಾಲುಪಾಲು ಹೋಲಿಕೆಯಿದ್ದರೂ ಅಲ್ಪಸ್ವಲ್ಪ ವ್ಯತ್ಯಾಸಗಳೂ ಇವೆ.—

ಬಳಿಕ ಕುದುರೆಗಳ ಶರೀರವನ್ನು ಪೂರ್ವಕಾಯ ಮಧ್ಯಕಾಯ ಪಶ್ಚಾತ್ಕಾಯವೆಂದು ಸ್ಥೂಲವಾಗಿ ವಿಂಗಡಿಸಬಹುದೆಂದು ಹೇಳಿ ಹೆಣ್ಣು ಕುದಿರೆಗೆ ಸ್ತನಯೋನಿ ಇವೆರಡು ಅವಯವಗಳಲ್ಲಿ ವ್ಯತ್ಯಾಸವುಂಟೆಂದು ಹೇಳಿ ಕುದಿರೆಗಳ ಆಕಾರ ಸಾಮಾನ್ಯವಾದ ಎತ್ತರ, ಅಗಲ, ಸುತ್ತಳತೆ (ಆಯಾಮ–ಉತ್ಸೇಧ–ವಿಷ್ಕಂಭ) ಇವುಗಳ ಪರಿಮಾಣವನ್ನು ನಿರ್ಧರಿಸಿ ಪ್ರತಿಯೊಂದು ಪ್ರದೇಶಗಳ

ಅಂಗುಲ ಮಾನವನ್ನೂ ಈ ಮಾನದ ವ್ಯತ್ಯಾಸದಂತೆ ಉತ್ತಮ ಮಧ್ಯಮ ಕನಿಷ್ಠಗಳೆಂಬ ಮೂರು ಬಗೆಯ ಕುದಿರೆಗಳನ್ನೂ ಹೇಳಿರುವನು. ಈ ಗ್ರಂಥಕಾರನು ಈ ಅಂಗುಲ ಪ್ರಮಾಣವನ್ನು ಹೇಳಿಲ್ಲ.

ಮುಂದೆ ಕುದಿರೆಗಳ ಸುಳಿ, ಧ್ರುವಾಧ್ರುವಗಳೆಂದು ಎರಡು ವಿಧವೆಂದೂ ಅವುಗಳ ಭೇಧವನ್ನೂ, ಲಕ್ಷಣವನ್ನೂ ಶಭಾಶುಭ ಫಲಗಳನ್ನೂ ಹೇಳಿರುವನು. ಈ ಗ್ರಂಥಕರ್ತೃವೂ ಇವನ್ನೆಲ್ಲಾ ಒಂದು ಅಧ್ಯಾಯದಲ್ಲಿ ಹೇಳಿರುವನು. ಈ ಭಾಗದಲ್ಲಿ ಎರಡಕ್ಕೂ ಅಲ್ಲಲ್ಲಿ ವಿಶೇಷ ಹೋಲಿಕೆಗಳಿದ್ದರೂ ಅಲ್ಲಲ್ಲಿ ಸ್ವಲ್ಪ ವ್ಯತ್ಯಾಸಗಳೂ ಇವೆ.

ಬಳಿಕ ಸಾಮಾನ್ಯವಾಗಿ ಕುದಿರೆಗಳ ವಯಸ್ಸನ್ನು ಕಂಡು ಹಿಡಿಯುವ ಕ್ರಮವನ್ನು ಹೇಳಿರುವನು. ಈ ಗ್ರಂಥದಲ್ಲಾದರೋ ಕುದಿರೆಗಳ ಆಯುಃಪ್ರಮಾಣವನ್ನು ತಿಳಿಯುವ ವಿಧಾನವನ್ನು ಎರಡು ಅಧ್ಯಾಯದಲ್ಲಿ ವಿಶೇಷವಾಗಿ ಹೇಳಿರುವನು.

ಮುಂದೆ ಕುದುರೆಗಳ ಅವಯವಗಳಲ್ಲಿ ದೋಷವನ್ನೂ ಗುಣವನ್ನೂ ಹೇಳಿ, ಸಮುದಾಯಾವಯವ ಲಕ್ಷಣವನ್ನೂ ಪಂಚಶೋಭೆಗಳನ್ನೂ ವಿವರಿಸವುದರ ಮೂಲಕ ಗ್ರಂಥವನ್ನು ಉಪಸಂಹಾರ ಮಾಡಿರುವನು. ಈ ಗ್ರಂಥಕರ್ತೃವಾದರೋ ಇಷ್ಟಕ್ಕೆ ಹತ್ತು ಅಧ್ಯಾಯಗಳನ್ನು ಮುಗಿಸಿ ಮುಂದೆ ಆರು ಅಧ್ಯಾಯಗಳಲ್ಲಿ ವೈದ್ಯವಿಚಾರವನ್ನೂ ಹೆಚ್ಚಾಗಿ ಹೇಳಿರುವನು.

ಇವೆರಡಕ್ಕೂ ಹೋಲುವ ಕೆಲವು ವಿಷಯಗಳನ್ನು ಮಾದರಿಗಾಗಿ ಇಲ್ಲಿ ಕೊಟ್ಟಿದೆ

ಮಲ್ಲಿಕಾಭೇ ಮಯೂರೋಷ್ಟ್ರ।
ಕಲವಿಂಕಾಕ್ಷಿಸನ್ನಿಭೇ॥
ಕ್ರೌಂಚತಿತ್ತಿರಿ ನೇತ್ರಾಭೇ।
ವಾರಣಾಕ್ಷಿಸಮಪ್ರಭೇ॥
ಕುರಂಗಹಂಸನೇತ್ರಾಭೇ।
ಟಿಟ್ಟಿಭಾಕ್ಷಿನಿಭೇ ತಥಾ॥
ಪಾರಾವತಾಕ್ಷಿಪ್ರತಿಮೇ।
ಪ್ರಶಸ್ತೇ ಹಯಲೋಚನೇ ॥ ೪೪೪ ॥

ಹರಿಣಿಯ ನವಿಲ ಕವುಂಜಿನ।
ಕರಿಣಿಯ ಕೋಗಿಲೆಯ ಕೊಂಚೆಯಂಚೆಯ ಕಣ್ಣಂ॥
ತಿರೆ ನಿಬಿಡಮಾಗಿ ತೋರ್ಪೊಡೆ।
ತುರಗದ ನಯನಂಗಳುಚಿತಮಭಿನವಚಂದ್ರಾ॥
—೨-೨೪

ಪಂಚಮಾಂತೇಪಿ ಚೇದ್ದಂತಾಃ।
ಕತಿಚಿನ್ನೈವ ವಾಜಿನಃ॥
ಹೀನದಂತಸ್ಸ ವಿಜ್ಞೇಯಃ।
ಮಿತ್ರಘ್ನೋ ದಾರದೂಷಣಃ॥
ತುರಗೋಽಧಿಕದಂತಶ್ಚ।
ಪ್ರಜಾಘ್ನೋ ಭರ್ತೃನಾಶನಃ॥
ತ್ರಿಕರ್ಣೀ ಚ ಪರಿತ್ಯಾಜ್ಯಾ।
ಇತಿ ಶಾಸ್ತ್ರವಿದಾಂ ಮತಂ॥

ಕಕುದಿಯು ಮವಹೀನಾ।
ಧಿಕ ರದಸ್ತನಿಯುಂ ತ್ರಿಕರ್ಣಿಯುಂ ದ್ವಿಖುರನುಂ॥
.... ಕುಲನಾಶಕರಂ।
—೪-೪೩

ಮೃದುಸ್ನಿಗ್ಧಾ ಸಮಾ ಚೈವ।
ಮಲ್ಲಿಕಾಪುಷ್ಪಸನ್ನಿಭಾ॥
ರಾಜೀಯಸ್ಯ ಚ ಪರ್ಯಂತೇ।
ಸುಪರಿಕ್ಷಿಪ್ತತಾರಕೇ॥
ಸ ಹಯೋ ಮಲ್ಲಿಕಾಕ್ಷಃ ಸ್ಯಾತ್।
ದೃಷ್ಟಿರ್ಯಸ್ಯ ಚ ಕಾಲಿಕಾ॥
ತೇನ ಮಿತ್ರಾಣಿ ವರ್ಧನ್ತೆ ಇತಿ ಶಾಸ್ತ್ರವಿದಾಂ ಮತಂ॥

ನಯನಂಗಳ್ ತೊಳಗುವ ಬೆ।
ಳ್ಪಿಯಕಣ್ಣಂಪೋಲೆ ಮಲ್ಲಿಕಾಕ್ಷಂ ಶುಭಮಾ॥
ನಯನಕ್ಕೆ ಕರಿಯ ಬಳೆಗಳ್।
ನಿಯತಂ ನಿಲೆ ವಾಜಿ ಕೃಷ್ಣಮಾದೊಡೆ ಶುಭದಂ॥
—೨-೩೭

ಮೃಗಯಾಯಾಂ ಶೀಘ್ರಯಾನೇ
ತಥಾ ಸಂಗ್ರಾಮಕರ್ಮಣಿ।
ಅಶ್ವೇಭ್ಯಃ ಪರಮಂ ನಾಸ್ತಿ ರಾಜ್ಞೋ ವಿಜಯಕಾರಣಂ॥
ಆಶುಕಾರ್ಯಾಣಿ ಭೂಪಾನಾಂ
ಯಥಾಶ್ವಃ ಪೃಥಿವೀತಲೇ।
ಕುರ್ವಂತಿ ಹಿ ತಥಾ ಶೀಘ್ರಂ ನ ಗಜಾಶ್ಚ ಪದಾತಯಃ॥
ಪದಾತಿಗಜಮುಖ್ಯೈಶ್ಚ ಶತಶೋಽಥಸಹಸ್ರಶಃ।
ವೇಷ್ಟಿತೋಽಪಿ ವ್ರಜತ್ಯೇಷ ಯಥೇಷ್ಟಂ ಪಕ್ಷಿರಾಡಿವ॥

ಅತಿದೂರಂ ಪಯಣಕ್ಕೆ ಬೇಂಟೆಗೆ ವಿನೋದಾರ್ಥಕ್ಕೆ
ಸೆಂಡಿಂಗೆ ಪೂಜಿತ ಕಾರ್ಯಕ್ಕೆ ಮಹಾಹವಕ್ಕೆ ಭಟರುಂ
ಗಂಧೇಭಮುಂ ಸುತ್ತಿಮುತ್ತಿ ತಱುಂಬಿರ್ದ ಪದಕ್ಕೆ...
ತುರಗಂ ಮಾೞ್ಕುಂ ಮಹೋತ್ಸಾಹಮಂ
—೭-೬೯

ಅರಸಂಗೆ ಶೀಘ್ರಮಪ್ಪಾ।
ತುರಗಗಜ ....ಳ್॥
ಪರಿದೆಯ್ದಿ ಮಾೞ್ಪ ಕಜ್ಜಂ।
ಕರಿಗಂ ಕಾಲಾಳ್ಗಮೇಕೆ ಮಾಡಲ್ಕಕ್ಕುಂ॥
—೭-೭೬

ಅಮುಷ್ಕಶ್ಚಾತಿಮಂಗಲ್ಯಃ ಕಪಿಮುಷ್ಕೋಽರ್ಥನಾಶನಃ॥
ಮಾಸಮಾತ್ರಂ ಹಯಂ ವಿದ್ಯಾತ್ಸಂದಂಶೈಃ ಕಿಂಚಿದುದ್ಗತೈಃ।
ದ್ವಿಮಾಸಸ್ತುರಗೋಜ್ಞೇಯೋ ವ್ಯಕ್ತಸಂದಂಶನಷ್ಟ ಸಃ ॥ ೭೬೪ ॥

..................ಕ।
ರಂ ದೋಷಂ ವಾಜಿಗಳ್ಗೆ ಕಪಿಮುಷ್ಕಂಗಳ್॥
ಇನಿತಾನುಂ ಸಂದಂಶಂ।
ಜನಿಯಿಸುಗುಂ ....ಮಾಸ್ಯೆಕಂ॥
ಸಂದಂಶಮತಿವ್ಯಕ್ತಂ।
ಬಂಧುರಖುರ......ಮಱುಗೆರಡು ತಿಂಗಳುಂ॥
—೫-೩,೪

೨. ಗ್ರಂಥಕರ್ತೃವಿನ ವಿಚಾರ

ಈ ಗ್ರಂಥವನ್ನು ಬರೆದವನ ವಿಷಯದಲ್ಲಿ ಈ ಮುದ್ರಿತ ಗ್ರಂಥದಿಂದ ಇಷ್ಟುಮಾತ್ರ ತಿಳಿದು ಬರುವುದು. ಈತನು ಪೀಠಿಕೆಯ ೩ (ಪ.) ರಲ್ಲಿ ತನ್ನ ಹೆಸರು ಅಭಿನವಚಂದ್ರನು ತಾನು ಬ್ರಾಹ್ಮಣ ವರ್ಣದವನು (ವಿಪ್ರಕುಲಭೂಷಣಂ) ಸೋಮಣ್ಣಯ್ಯನೆಂಬುವನ ತಮ್ಮನು ಸೋಮಣ್ಣೆಯನನುಜಂ (ಹಯಶಾಸ್ತ್ರಪ್ರೌಢರಾದ ಜನಗಳ ಮನೋನಯನ ಪ್ರಿಯನು)—ಎಂದು ಹೇಳಿಕೊಂಡಿರುವನು, ಆದರೆ ಕವಿಚರಿತ್ರೆಕಾರರಿಗೆ ದೊರಕಿರುವ ಪ್ರತಿಯಿಂದ ಇವನ ತಂದೆ ಕಳಸಯ್ಯ, ತಾಯಿ ಅತ್ತಿಮಬ್ಬೆ (ಅಣ್ಣ ಸೋಮದೇವ) ಸ್ಥಳ ಬಾಗೆವಾಡಿ ಎಂಬ ಹೆಚ್ಚು ವಿಷಯಗಳು ತಿಳಿದುಬರುವುವು. ವಸ್ತುತಃ ಚಂದ್ರ ಎಂಬುದೇ ಈತನ ನಿಜನಾಮ ಹೆಸರು. ಈತನು ತನಗಿಂತ ಹಿಂದೆ ಇದ್ದ ಚಂದ್ರನೆಂಬ ಕವಿಯೊಬ್ಬನು (ಸಂಸ್ಕೃತದಲ್ಲೋ) ಕನ್ನಡದಲ್ಲೋ ಅಶ್ವಶಾಸ್ತ್ರವೊಂದನ್ನು ಬರೆದು ಪ್ರಸಿದ್ಧನಾಗಿದ್ದುದರಿಂದ ತನ್ನನ್ನು* ಅಭಿನವಚಂದ್ರನೆಂದು ಹೇಳಿಕೊಂಡಿರುವಂತೆ ತಿಳಿದುಬರುವುದು. ಕವಿಚರಿತ್ರಕಾರರು ಇವನ ಹಿಂದೆ "ಮದನ ತಿಲಕ" ಎಂಬ (ಕಾಮಶಾಸ್ತ್ರ) ಗ್ರಂಥವನ್ನು ಬರೆದಿರುವ ಪ್ರಸಿದ್ಧನಾದ ಪ್ರಾಚೀನ ಚಂದ್ರರಾಜನೊಬ್ಬನಿದ್ದುದರಿಂದ ಇವನು ತನ್ನನ್ನು ಅಭಿನವ ಚಂದ್ರನೆಂದು ಹೇಳಿಕೊಂಡಿರುವನೆಂದು ಊಹಿಸಿರುವರು. ಒಂದೇಜಾತಿಯ ಗ್ರಂಥವನ್ನು ಬರೆದವರಲ್ಲಿ ಮಾತ್ರವೇ ಈ ಬಗೆ ವ್ಯವಹಾರವಿರುವುದರಿಂದ ಈ ಅಭಿನವಚಂದ್ರನಿಗೆ ಹಿಂದೆ ಪ್ರಸಿದ್ಧನಾದಚಂದ್ರಕವಿಯೊಬ್ಬರು ಅಶ್ವಶಾಸ್ತ್ರವೊಂದನ್ನು ಬರೆದಿರಬೇಕೆಂದೂ ಅದನ್ನೇ ಈ ಕವಿಯು ಪ್ರತಿಯೊಂದು

---

*ಈ ಬಗೆಯ ಪದ್ಧತಿಯು ಕನ್ನಡಕವಿಗಳಲ್ಲಿ ರೂಢಿಯಲ್ಲಿದೆ. ಪಂಪರಾಮಾಯಣ ಕರ್ತೃವಾದ ನಾಗಚಂದ್ರನು—ತನ್ನನ್ನು ಅಭಿನವ ಪಂಪನೆಂದು ಹೇಳಿಕೊಂಡಿರುವನು. ಕರ್ಣಾಟಕ ಭಾಷಾಭೂಷಣವೆಂಬ ಕನ್ನಡ ವ್ಯಾಕರಣವನ್ನು ಬರೆದ ೨ನೇ ನಾಗವರ್ಮನು ಅಭಿನವ ಶರ್ವವರ್ಮ ಎಂದು ಹೇಳಿಕೊಂಡಿರುವನು. ಈ ಶರ್ವವರ್ಮನು ಸಂಸ್ಕೃತದಲ್ಲಿ ಕಾತಂತ್ರವ್ಯಾಕರಣ ಬರೆದವನು ಹೀಗೆಯೇ ಅಭಿನವಮಂಗರಸ ನೆಂಬ ಕವಿಯೂ ಒಬ್ಬನಿರುವನು.

ಅಧ್ಯಾಯದ ಕೊನೆಯಲ್ಲೂ ಚಂದ್ರಮತ ಎಂದು ಹೇಳಿರುವನೆಂದೂ ಹೇಳುವುದು ಸಮಂಜಸವಾಗಿರುವುದು.

ಅಲ್ಲದೆ ಈ ಗ್ರಂಥಕರ್ತೃವೇ ೧೨ ಅ. ೨೮ ರ ಪದ್ಯದಲ್ಲಿ—

ಮುನ್ನಿನ ಹಯಶಾಸ್ತ್ರಂಗಳ್ | ಕನ್ನಡದೊಳ್ ಚಂದ್ರಮತಕೆ ಸಮನಲ್ಲಮದೇಂ ||
ಬಿನ್ನಣಮೊ ಪೇೞಿಮೆನಿಸಿದ | ಪನ್ನೆರಡನೆಯ ವ್ರಣಾಧಿಕಾರಂ ಸಾರಂ ||

ಎಂದು ಹೇಳಿಕೊಂಡಿರುವುದರಿಂದ ಈ ಗ್ರಂಥಕ್ಕೆ ಹಿಂದೆ ಕನ್ನಡದಲ್ಲಿ "ಹಯಶಾಸ್ತ್ರಗಳು" ಹಲವಿದ್ದುವೆಂದು ತಿಳಿದುಬರುವುದು. ಇವೊಂದೂ ಇದುವರೆಗೆ ಬೆಳಕಿಗೆ ಬಂದಿಲ್ಲದಿರುವುದು ಕನ್ನಡಿಗರ ದೌರ್ಭಾಗ್ಯವೇ ಸರಿ.

ಇವನಿಗೆ ಚಂದ್ರವರ್ಮ, ಚಂದಿವರ್ಮ ಎಂಬ ಹೆಸರುಗಳೂ ಇದ್ದುವೆಂದು ಇವನ ಗ್ರಂಥದಿಂದಲೇ ತಿಳಿಯಬರುವುದು.

ಇವನು ಗ್ರಂಥದಲ್ಲಿ ಕೆಲವುಕಡೆ "ಗುಣರತ್ನಾ" ಎಂದೂ "ಬುಧಬಂಧು" ''ಸುಕರವಿಳಾಸ" ವಿಬುಧದಿನಕರ ಎಂದೂ ಹೇಳಿಕೊಂಡಿರುವುದರಿಂದ ಇವನಿಗೆ "ಗುಣರತ್ನ" ಎಂಬ ಬಿರುದಿದ್ದರಬೇಕೆಂದು ತಿಳಿದುಬರುವುದು. ಇದರಿಂದ ಈ ಅಂಕಿತದಲ್ಲಿ ಕೆಲವು ನೀತಿ ಶ್ಲೋಕಗಳನ್ನೂ ಇವನು ಬರೆದಿರಬೇಕೆಂದೂ ಊಹಿಸಬಹುದು. ಇದು ಶಾಸ್ತ್ರಗ್ರಂಥವಾದರೂ ಇದರ ಶೈಲಿಯು (ಬಂಧವು) ಮೃದುವಾಗಿಯೂ ಸರಳವಾಗಿಯೂ ಇದೆ.

ಇವನು ತನ್ನ ಕವಿತಾ ಚಾತುರ್ಯವನ್ನು ಪ್ರಶಂಸಿರುವ—

ಪ್ರಹಸಿತ ಸರಸ್ವತೀ ಮುಖ| ಕುಹರವಿನಿರ್ಗತನುತ ಪ್ರಸನ್ನಾಳಾಪಂ||
ಸಹಜಮಿದೆಂಬಂತಿರೆ ವಾ| ಙ್ಮಹಿಮೆಯ ಮೆರೆದು ವಿಬುಧರಂ ಮೆಚ್ಚಿಸುವೆಂ||
ಅರ್ಥಾವಗಾಢಮೆನಿಸಿ| ರ್ಪರ್ಥಂ ಬುಧಜನದ ಮನಕೆವರೆ ಪೇೞಲ್ಕ||
ನ್ವರ್ಥಂ ಕವಿತಾಪ್ರಭವಸ| ಮರ್ಥಿಕೆ ಯೆನಗುಂಟು ಪೇೞ್ವೆನ್ನೆನ್ನಱಿವನಿತಂ||
ಕನ್ನಡ ಕವಿ ನಿಜಕವಿತೆಯ| ಬಿನ್ನಣಮಂ ಮೆರೆವುದಱಿದೆ ಪದ್ಯದೊಳದಱಿಂ||
ಬಿನ್ನಣಮನಱಿಪಲೆಂದಾ| ನೆನ್ನಱ್ತಿಯೆ ವಾಜಿಶಾಸ್ತ್ರಮಂ ವಿರಚಿಸುವೆಂ||

ಎಂಬ ಈ ಪದ್ಯಗಳೂ, ಕುಕವಿನಿಂದಕವಾದ:—

ಅಗುಱ್ದಿಡಪಿ ಪೆಱರ ಕೃತಿಯಂ ತಗಳ್ದು ಮನಂ ನುಡಿದು ಕೊರಲಸೆರೆ ಬಗಿವಿನೆಗಂ ||
ಬಗುಱ್ದಿ ಬೞಿಕೆಡದ ಕಾಲೊಳ್ ನುಗುಱ್ದಿ ಮನಂಮಗುಳ್ದು ಮುನಿವ ದುಷ್ಕವಿ ಕವಿಯೇ ||

ಎಂಬ ಪದ್ಯವೂ ಮತ್ತು ಶಿವ, ಬಹ್ಮ, ಸೂರ್ಯ, ಗಣಪತಿ, ಲಕ್ಷ್ಮಿ, ಮಹಿಷಾಸುರಮರ್ದಿನಿ, ಇವರನ್ನು ಸ್ತುತಿಸಿರುವ ಪದ್ಯಗಳೂ, ನಮಗೆ ದೊರಕಿರುವ ಪ್ರತಿಗಳಲ್ಲಿ ಕಂಡುಬರಲ್ಲಿಲ್ಲ.

ಇವನ ಜೀವಿತಕಾಲ ನಿರ್ಣಯಕ್ಕೆ ತಕ್ಕ ಆಧಾರಗಳು ಸ್ವಲ್ಪವೂ ದೊರುಕುವುದಿಲ್ಲ. ಆದರೂ ಇವನ ಕವಿತಾಧಾಟಿಯನ್ನನುಸರಿಸಿ ೧೪೦೦ (ಸು) ಎಂದು ಕವಿ ಚರಿತ್ರಕಾರರು ಮೊದಲನೆ ಸಂಪುಟದಲ್ಲಿ ಬರೆದು ಮತ್ತೆ ಎರಡನೆಯ ಸಂಪುಟದಲ್ಲಿಯೂ ಇದೇ ವಿಷಯವನ್ನು ತಿಳಿಸಿರುವರು.

—ಇಂತು ಸಂಪಾದಕರು.

ವಿಷಯಸೂಚಿ

ಅಧ್ಯಾಯ	ವಿಷಯ		ಪುಟ
ಪ್ರಥಮಾಧ್ಯಾಯಂ			
	ಪೀಠಿಕೆ ಮತ್ತು ಅಶ್ವಸರ್ವಾಂಗ ಪರೀಕ್ಷೆ	-	1 — 6
	ಮಂಗಳಾಚರಣೆ–ಗ್ರಂಥಕರ್ತೃವಿನ ಸ್ವವಿಷಯ–ಕುದುರೆಗಳ ಉತ್ಪತ್ತಿ – ಶಾಲಿಹೋತ್ರನು ಅವುಗಳ ರೆಕ್ಕೆಗಳನ್ನು ಕಡಿದು ದೇವತೆಗಳಿಗೆ ಕೊಟ್ಟುದು – ಕುದುರೆಗಳ ಆಯುಸ್ಸು	-	1 — 2
	ಕುದುರೆ ಲಕ್ಷಣ – ಹತ್ತು ಕ್ಷೇತ್ರಗಳು – ಕುದುರೆಗಳ ಶುಭಾಶುಭ ಲಕ್ಷಣಗಳು	-	3 — 6
ದ್ವಿತೀಯಾಧ್ಯಾಯಂ			7 — 15
	ಕುದಿರೆಗಳ ವರ್ಣಾಧ್ಯಾಯ – ಕುದಿರೆಗಳ ನಾಲ್ಕು ವರ್ಣಗಳು ಮತ್ತು ಮಿಶ್ರವರ್ಣಗಳು	-	7 — 11
	ಅಶುಭ ವರ್ಣದ ಕುದುರೆಗಳು	-	12 — 13
	ಶುಭವರ್ಣದ ಕುದಿರೆಗಳು	-	14 — 15
ತೃತೀಯಾಧ್ಯಾಯಂ			
	ಕುದಿರೆಗಳ ಪುಷ್ಪಪುಂಡ್ರಾದ್ಯಧ್ಯಾಯ	-	16 — 23
	ಪುಂಡ್ರಗಳ ಸಾಮಾನ್ಯ ಹೆಸರುಗಳು – ಶ್ರೀವೃಕ್ಷ ಮೊದಲಾದುವು	-	16
	೧. ಪುಂಡ್ರ ಲಕ್ಷಣ	-	17
	೨. ಪುಷ್ಪ ಲಕ್ಷಣ	-	17
	೩. ಗಂಧ ಲಕ್ಷಣ	-	18
	೪. ಧ್ವನಿ ಲಕ್ಷಣ	-	19 — 20
	೫. ಸತ್ವಾದಿಗುಣ ಲಕ್ಷಣ	-	20
	೬. ಗತಿ ಲಕ್ಷಣ	-	20 — 22
	೭. ಛಾಯಾ ಲಕ್ಷಣ	-	22 — 23
ಚತುರ್ಥಾಧ್ಯಾಯಂ			
	ಆವರ್ತಾಧ್ಯಾಯ(ಸುೞಿಗಳ ಭೇದ ಲಕ್ಷಣ)	-	24 — 34
	ಧ್ರುವಮೆಂಬ ಹತ್ತು ಆವರ್ತಗಳು	-	25 — 27

ಅಧ್ಯಾಯ	ವಿಷಯ	ಪುಟ
	ರೋಮಜಾವರ್ತಗಳುನೂಱಿಪ್ಪತ್ತಾಱು –	27 — 29
	ಕುದುರೆಗಳ ಹೇಷಿತಾದಿ ಶಕುನ –	30 — 32
	ಕುದಿರೆ ಮೈಯ ಉರಿಯ ಲಕ್ಷಣ –	32 — 34
ಪಂಚಮಾಧ್ಯಾಯಂ		
	ತುರಗಾಯುಃಪರಿಮಾಣ ನಿರ್ಣಯ –	35 — 44
	ಕುದಿರೆಯ ಹಲ್ಲಿನಿಂದ ವಯೋನಿರ್ಣಯ –	35 — 37
	ಚಿರಜೀವಿ ಕುದಿರೆ ಲಕ್ಷಣ –	37 — 38
	ಮಱಿ ಹುಟ್ಟಿದ ಗಳಿಗೆ ಲಕ್ಷಣ –	38
	ಆಯುಸ್ಸಿನ ರೇಖೆಗಳ ಲಕ್ಷಣದಿಂದ ಮೂವತ್ತೆರಡು ವರ್ಷಗಳ ಆಯುರ್ವಿಭಾಗ –	39 — 44
ಷಷ್ಠಾಧ್ಯಾಯಂ		
	ಶರೀರಾಂಗ ಲಕ್ಷಣದಿಂದ ಆಯುರ್ನಿರ್ಣಯ –	45 — 59
	ಅವಯವ ಲಕ್ಷಣದಿಂದ ಮೂವತ್ತೆರಡು ವರ್ಷಗಳ ಆಯುರ್ವಿಭಾಗ – ಒಂದು ವರ್ಷ ಬದುಕುವುದು, ಎರಡು ವರ್ಷ ಬದುಕುವುದು ಇತ್ಯಾದಿ –	45 — 49
	ಸ್ವಸ್ಥಾರಿಷ್ಟಂ –	49 — 52
	ಅಸ್ವಸ್ಥಾರಿಷ್ಟಂ –	52 — 54
	ಶ್ರೋತ್ರದಿಂದ ಆಯುರ್ನಿರ್ಣಯ – ಅಲ್ಪಾಯುಷ್ಯ ಲಕ್ಷಣಂ –	54 — 55
	ದೇಶ ಭೇದದಿಂದ ಕುದಿರೆಯ ಹುಟ್ಟಿನ ವಿಭಾಗ –	55 — 56
	ದ್ವಿಜಾದಿ ನಾಲ್ಕುವರ್ಣದ ಲಕ್ಷಣ –	56 — 57
	ವಾತಪಿತ್ತ ಶ್ಲೇಷ್ಮ ಸ್ವಭಾವ –	57 — 58
	ಸತ್ವರಜಸ್ತರೋಗುಣಿಗಳ್ –	58 — 59
ಸಪ್ತಮಾಧ್ಯಾಯಂ		
	ಪೋಷಣವಿಧಾನಂ (ಪಿಂಡಮನಿಕ್ಕುವುದು) –	60 — 72
	ಪಾನ ಲಕ್ಷಣಂ – ಲಾಯ ಲಕ್ಷಣಂ –	60 — 61
	ಆಯುದ್ಧಂ ಬಲ ಲಕ್ಷಣಂ –	61 — 62
	ಷಡೃತು ಪೋಷಣ ಕ್ರಮ –	62 — 63
	ಸರ್ವರುಜೆಗೌಷಧಿ –	64

ಅಧ್ಯಾಯ	ವಿಷಯ	ಪುಟ
	ಪಿಂಡಸೇವನೆ –	64 — 68
	ಕುದಿರೆಗಳ್ಗೆ ರೋಗ ಬರಲು ಕಾರಣ –	68
	ಕುದಿರೆಗಳ ಮಹತ್ವ –	69 — 70
	ಋತುಮಾನ ಪಿಂಡ ಕ್ರಮ –	70 — 72
ಅಷ್ಟಮಾಧ್ಯಾಯಂ		
	ನೀರಾಜನವಿಧಿ – ಮಹಾನವಮಿ ಕ್ರಮ –	73 — 77
ನವಮಾಧ್ಯಾಯಂ		
	ಹಯಶರೀರ ಪ್ರದೇಶ ಜ್ಞಾನ –	78 — 89
	ಪದ್ಯಭಾಗ –	78 — 86
	ಗದ್ಯಭಾಗ –	87 — 89
ದಶಮಾಧ್ಯಾಯಂ		
	ಗುರು ಶಿಷ್ಯ ವೈದ್ಯಲಕ್ಷಣಂ–ರೋಗಸಾಮಾನ್ಯ –	90 — 94
	ಶೂಲೆಗೆ–ಶೋಫಕ್ಕೆ ಸೇಕಲಕ್ಷಣ –	91 — 92
	ಅಗ್ನಿಕ್ರಿಯೆ –	93 — 94
ಏಕಾದಶಾಧ್ಯಾಯಂ		
	ಶೂಲೆರೋಗಂ –	95 — 104
	ಮಲಬಂಧ – ಕೀಟಂಗಳ ಮೆದ್ದರೋಗ –	98 — 100
	ಸಿಂಘಾಣ – ಖಾಸ ರೋಗ –	101 — 102
	ಬಾವು (ಮುಷ್ಕವಾತ) –	102 — 104
ದ್ವಾದಶಾಧ್ಯಾಯಂ		
	ವ್ರಣ ಚಿಕಿತ್ಸೆ –	105 — 108
	ಸದ್ಯಃಕ್ಷತ –	107 — 108
ತ್ರಯೋದಶಾಧ್ಯಾಯಂ		
	ಜ್ವರಾಧಿಕಾರ –	109 — 114
	ಮರಣ ಚಿಹ್ನೆ –	112
	ಮೃಗಜೃಂಭಾರೋಗ –	112 — 114
	ಹರಿಣರೋಗ –	114
ಚತುರ್ದಶಾಧ್ಯಾಯಂ		
	ತಾಳುರೋಗ –	115 — 119
	ಜಿಹ್ವೆರೋಗ – ಗಳಗ್ರಹ –	115

ಅಧ್ಯಾಯ	ವಿಷಯ		ಪುಟ
	ಶೋಫ – ಉಲೂಕವಾತ	–	116
	ಬಡವು – ಶೋಫ	–	117 — 119
ಪಂಚದಶಾಧ್ಯಾಯಂ			
	ತಳರೋಗ	–	120 — 122
	ಕೂರ್ಚರೋಗ	–	120
	ಕಣ್ಣ ಪುಷ್ಪಪಟಲಾದಿ	–	121
	ಕಿವಿಬೇನೆ	–	122
	ಆವುಂಡಿಗೆ (ಚರಣಗ್ರಂಥಿರೋಗ)	–	123
ಷೋಡಶಾಧ್ಯಾಯಂ			
	ಸರ್ಪವಿಷಾದಿ ದೋಷ	–	124 — 127
	ಕುಳಿಕ ಸರ್ಪದೋಷ	–	124
	ಸರ್ಪವಿಷ – ಸರ್ವವಿಷ	–	124 — 125
	ಕ್ಷಯರೋಗ	–	125
	ಹರೀತಕೀಕ್ರಿಯೆ	–	126

ಹರಿಹರ ಚತುರಂಗಗ್ರಂಥದಲ್ಲಿ ಹೇಳಿರುವ ಕುದುರೆಗಳ ೞಳ ದೇಶಗಳು

ಆಜಾನ, ಕಾಂಭೋಜ, ಬಾಹ್ಲಿಕ, ವನಾಯುಜ, ಗಾಂಧಾರ, ಆರಟ್ಟ, ಸಿಂಧು, ಚಾಂಪೇಯು, ತೈತಿಲ, ಮೇಚಕ, ಉಪಮೇಚಕ, ತ್ರೈಗರ್ತ, ಅರ್ಜುನ, ಸಾವಿತ್ರ, ಯೌಧೇಯು, ಯಾವನ, ಹ್ರಸ್ವಯಾವನ, ತುಖಾರ, ಕಾನ್ತಾರ, ಪಾರ್ವತ, ಉ(ಓ)ರಸ, ಆವರ್ತ, ಕಾಶ್ಮೀರ, ಶಕಾನಕ, ಉತ್ತರಮದ್ರ, ದಕ್ಷಿಣಮದ್ರ, ಯವನಾಂತದ್ವೀಪ, ಕೈಕೆಯು, ಅಪರಾಂತ ಅಂಬಷ್ಠ, ವಾಸಂತಕ, ಸೌವೀರ, ದಾರದ, ಸೈವಕ, ಕ್ಷುದ್ರಕ, ಐರಾವತ, ಮಾಲವ, ಅವಂತಿ, ಕಳಿಂಗ, ಮಾಕುರ ವನವಾಸ, ತ್ರಿಲಿಂಗ, ಕ್ರಥನ, ಪ್ರಾವೃತಕ, ಸೌರಾಷ್ಟ್ರ, ಸಾಲ್ವ, ಕುರುಕ್ಷೇತ್ರ, ಪಾಂಚಾಲ, ಪ್ರೋಥಜ, ಕುಕ್ಕುರ, ಹಸ್ವಕುಕ್ಕುರ, ಹೈಮವತ, ಅಮವತ್ಯುತ್ತರ, ಮಾಗಧ.

ಕುದಿರೆಯು ಅವಯುವ ಪ್ರದೇಶ ವಿಭಾಗಗಳು

ವಕ್ತ್ರ, (ಮುಖ) ಜಿಹ್ವಾ, ತಾಲು, ಸುನಾ, ಹಾನವ್ಯ, ದ್ವಿಜ, ಪ್ರೋಥಕಾನ್ತರ, ನಾಸಾಪುಟ, ಘೋಣಾ, ಸೃಕ್ವಿಣೀ, ಚುಬುಕ, ಅಶ್ರುಪಾತ, ನೇತ್ರ, ವರ್ತ್ಮ, ವರ್ತ್ಮಸಂಧಿ, ಅಕ್ಷಿಗೋಲಕ, ದೃಷ್ಟಿ, ಅಕ್ಷಿಕೂಟ, ಭ್ರೂ, ಕನೀನಕ (ಯವಮಾತ್ರ), ಅಪಾಂಗ, ಘಾಟಾ, ಲಲಾಟ, ಸ್ತವ, ಕಟ, ಶಂಖ, ಗಂಡ, ಹನೂಚಕ್ರ, ನಿಗಾಲಂ, ವಿದು, ಮನ್ಯ, ಗ್ರೀವಾ, ಸ್ಕಂಧ, ವಹ, ಜತುಕ, ಕಾಕಸ,ಕಕುದ, ಪೃಷ್ಠ, ಕಂಠ,(ಮನ್ಯವತ್)ವಕ್ಷ, ಕ್ರೋಡ, ಬಾಹು, ಜಾನು, ಜಂಘಾ, ಕೂರ್ಚ, ಕುಷ್ಠಿಕಾ, ಶಫ, ಕಕ್ಷ, ಹೃದಿನಿಷ್ಠ, ಹೃದಯು, ಜಠರ, ಕಕುದ, ತ್ರಿಕ, ಜಘನ, ವರ್ತಿಕಾ, ಗುದ, ಸ್ಫಿಕ್‌ಪಿಂಡ, ಸಾವನೀ, ಮುಷ್ಕಬಂಧನ, ಮುಷ್ಕ, ಮೇಹನ, ಮೂತ್ರಕೋಶ, ನಾಭಿ, ಭರುತ್, ಸ್ಥುರಿ.

ಅಶ್ವಶಾಸ್ತ್ರಂ

(ಅಭಿನವಚಂದ್ರಕೃತಂ)

ಪ್ರಥಮಾಧ್ಯಾಯಂ

ಪೀಠಿಕೆ

ಕಂ|| ಶ್ರೀಪತಿ ದಾನವ ಕುಲದ–
ಪಾಪಹನಮರೇಂದ್ರವಂದಿತಂ ಸಕಲಜಗ–|
ದ್ವ್ಯಾಪಕನೆಮಗೀಗೆ ಸುಖ
ವ್ಯಾಪಾರೋದಾರಮಹಿಮೆಯಂ ಚಕ್ರಧರಂ || ೧ ||

ವಿಪ್ರಕುಲಭೂಷಣಂ ಸುಜ–
ನಪ್ರಣುತಂ ಸೋಮಣ್ಣೈಯ್ಯನನುಜಂ ಹಯಶಾ–|
ಸ್ತ್ರಪ್ರೌಢಜನಮನೋನಯ
ನಪ್ರಿಯನಕಲಂಕಚರಿತನಭಿನವಚಂದ್ರಂ || ೨ ||

ಅನುಪಮಹಯಶಾಸ್ತ್ರಾಗಮ
ವನನಿಧಿಯೊಳ್ ಸಿಂಹದತ್ತಕೃತಿಲಕ್ಷಣದಿಂ|
ದಿನಕರತನಯುನ ರೇವಂ–
ತನ ಮತದಿಂ ಪೇೞ್ವೆನಱಿಯೆ ಹೊಸಗನ್ನಡದಿಂ || ೩ ||

ಗ್ರಂಥಾರಂಭಂ

ಚತುರಾಸ್ಯನಶ್ರುಧಾರಾ
ಪ್ರತತಿಯೊಳುದಯಿಸಿದ ವಕ್ತ್ರಸಂಭವ[1] ವಿಜ್ಯಾ–|
ಹುತವಹಮುಖದಿಂದಶ್ವ
ಪ್ರತತಿಗಳುದಯಿಸಿದುವಗ್ನಿಸಂಭವತುರಗಂ || ೪ ||

ಸುರರುಂ ದಾನವರುಂ ಭೋ–
ಗರ್ಗರೆವಮೃತಾಂಭೋಧಿಮಥನಮಂ ಮಾಡೆ [2]ನೆಲಂ|
ಬಿರಿವಿನೆಗಂ ಕಿಲಿಱುತ್ತುಂ
ಶರಧಿಯೊಳುದಯಿಸಿದುವಮೃತಸಂಭವತುರಗಂ || ೫ ||

ಮೃಗಿಗವುಲೂಕಕ್ಕೆ ವಾ
ಜಿ[3]ಗಳುಂ ಪುಟ್ಟಿದುವು ದಿವ್ಯಸಂಭವದಿಂ ತ–|
ತ್ತಿಗಳಾಗಿ ಪುಟ್ಟಿದುವು ವಾ
ಜಿಗಳಂತಾ ಮೃಗಿಗುಳೂಕ ಸಂಭವದಿಂದಂ || ೬ ||

---

1 ನಾಘ್ರಾ. 2 ನಭಂ. 3 ಗಳಿಂಟಿಂಟು.

ಕಂ|| ಇಂತು ಹಯಸಂಕುಲಂ ಪಲ
ವುಂತೆಱದಿಂ ಪುಟ್ಟೆಱಂಕೆವೆರಸಿ ಮನೋವೇ- |
ಗಂ ತಮ್ಮಿಚ್ಛೆಯೊಳಂ ದಿ-
ಗ್ದಂತಿವರಂ ಪಾಱುತುಂ ತೊಳಲ್ವುವು [1]ನಭದೊಳ್ || ೭ ||

ಕೋಪಪ್ರಸಾದದೊಳ್ ಶಿವ
ರೂಪಕನಂ ಸಕಲಶಾಸ್ತ್ರವಿದನಂ ತುರಗ- |
ವ್ಯಾಪಾರಕರ್ಮಕೌಶಲ
ಶಾಪಾನುಗ್ರಹ[ಸಮರ್ಥ]ನಂ ಮುನಿಪತಿಯಂ || ೮ ||

ಪಡೆದನಜಂ ಬೇಳ್ವಿಯೊಳಾ
ಗಡೆ ವೈದ್ಯಂ ಶಾಲಿಹೋತ್ರನಂ ಕುದುರೆಗಳಂ |
ಪಿಡಿದೇಱುವ ಶಿಕ್ಷೆಗೊಡಂ-
ಬಡಿಸುವ ವಿಜ್ಞಾನಕುಶಲನಂ ನಯವಿದನಂ || ೯ ||

ದೇವಸಮೂಹಂ ನೆರೆದಿ(ದೆ)ರೆ
ದೇವಾಸುರಯುದ್ಧದೆಡೆಗೆ ವಾಹನಮೆಮಗಿ- |
ಲ್ಲೀ ವಾಜಿಗಳಂ ಪಿಡಿದೆಮ
ಗೀವುದು ಕಾವುದು ಸಮಸ್ತ ದೇವಾದಿಗಳಂ || ೧೦ ||

ಎಂದು[2]ಪಥಾವಿಸಿದೊಡೆ ಸುರ-
ವೃಂದಮನಾದರಿಸಿ ಶಾಲಿಹೋತ್ರಂ ನಿಮಗಾ |
ನಿಂದು ಪಿಡಿದೀವೆನೀಹಯ
ಸಂದೋಹಮನೆಂದು ಶಕ್ತಿಮಂತ್ರಾಕ್ಷರದಿಂ || ೧೧ ||

ಆದಿವ್ಯವಾಹಪಕ್ಷ
ಚ್ಛೇದನಮಂ ಮಾಡಿ ಶಾಲಿಹೋತ್ರಂ ದೇವೇಂ- |
ದ್ರಾದಿ ಸುರರ್ಗೀಯೆ ವ(ವಾ)ಹನ
ಮಾದುವು ವಶಮಾದುವಂದಿನಿಂದಿಂ [ಬಱಿಯಂ] || ೧೨ ||

ಪರಮಾಯುಷ್ಯಂ ಮೂವ
ತ್ತೆರಡಬ್ದಂ ತಿಂಗಳೆರಡುಮೇೞ್ ದ್ವಾದಶವಾ |
ಸರಮುಮೆರಲ್ತಿಂಗಳೊಳಂ
ಪೇ[ವ]ರ್ತಿಕುಮೊಂದೆ ಸಂದ ಸಂದಂಶಂಗಳ್ || ೧೩ ||

1 ಬನದೊಳ್. 2 ಪಚಾರಿಸಿ.

ಹಯಲಕ್ಷಣಂ

ಕಂ|| ಮೊಗಮುಂ ತಲೆಯುಂ ಕೊರಲುಂ
[ಪೆಗಲುಂ ವ]ಕ್ಷಃಪ್ರದೇಶಮೆಂಬೀ ಕ್ಷೇತ್ರಂ |
ಮಿಗೆ ವಾಜಿಗನುಕ್ರಮದಿಂ
ಮೊಗ ಮೊದಲಾವಕ್ಷವಂತವಕ್ಕಯ್ದುವಿಧಂ || ೧೪ ||

*ಹೃದಯಾನನವಕ್ಷದೊಳಾ-
ಱದಱಿಂ ಬಱಿಕೇೞು ನಾಭಿವರಮೆಂಟದಱಿಂ |
ಗುದದಿಂ ತೊಡೆವರಮೊಂಭ-
ತ್ತದಱಿಂದಂ ಕೆಳಗೆ ಪತ್ತು ಜಂಘಾಕ್ಷೇತ್ರಂ || ೧೫ ||

ಪತ್ತುಂ ದೆಸೆಗಳನಾಳ್ಗುಂ
ಪತ್ತುಂ ಕ್ಷೇತ್ರಂಗಳುಂ ಶುಭಾಶುಭಫಲಮಂ |
ಪತ್ತುಂ ಕ್ಷೇತ್ರಂಗಳುಮಿನಿ-
ತುಂ ತಾವುಂ ತಮ್ಮತಮ್ಮ ದೆಸೆಯೆಯ್ದುವಿನಂ || ೧೬ ||

ತನುವಂ ಧ್ರುವೆಯುಂ ಸತ್ವಮ-
ನನುಪಮ ವರ್ಣಪ್ರಕಾರಮಂ ಪದಗತಿಯಂ |
ಸ್ವನಮಂ ಛಾಯೆಯ ನಾರ-
ಯ್ದನಿತಱೊಳಂ ಪೇೞ್ವುದಷ್ಟವಿಧಲಕ್ಷಣಮಂ || ೧೭ ||

ತನುವುಂ ಧ್ರುವೆಯುಂ ಗತಿಯುಂ
ಸ್ವನಮುಂ ನಾಲ್ಕುಂ ಧ್ರುವಂ ತುರಂಗಮಕೆಡೆಯೊಳ್ |
ತನುವೊಳ್ ಜನಿಯಿಕುಮಧ್ರುವ-
ಮೆನೆ ನೆಗಳ್ದುವು ವರ್ಣಗಂಧ ಸತ್ವಚ್ಛವಿಗಳ್ || ೧೮ ||

[5]ಕಾಯಾನುರೂಪಮುಳವಿಯೊ
ಳಾಯತಮದು ತೆಳ್ಪಿತೆನೆ ಬಹಿರ್ಮುಖಮುಚಿತಂ |
ಬಾಯೊಳಗೆ ನೆರ್ಪುನೆರ್ಪಂ
ತೋಯಜಸುರಭಿಗಂಧ ಮುಳ್ಳೊಡೆ ಪೂಜ್ಯಂ || ೧೯ ||

ನೇರಿದುವುಂ ಸ್ನಿಗ್ಧಮುಂ ಮು-
ಪ್ಪಾರೆಯು ಮೊಳಗೆಱಗಿ ತೋಱುವುದು ಮಧುಕುಂದ |
ಕ್ಷೀರನಿಭ ದಶನಮುಂ ನೆ-
ತ್ತರಾಕರಮುಮೆಂ ಬನಂಗಳುಂ ತಾಳುಗೆಯುಂ || ೨೦ ||

1 ಕಾಯಮರೂಪುಮುಳ.
*ಉದರಮುದಾಱುಂ ನಾಭಿ। ಪ್ರದಮೇೞುಂ ಗುದಮುದೆಂಟು ಕೂಡೆ ಯೊಂಭ- ॥
ತ್ತದ ಪಿಂದು ಜಂಘೆ ಹತ್ತೆಂ-। ಬುದ ನೀಂ ತಿಳಿ ಸ್ಥಾನಸೂಚನೆಹಯಕುಳಕ್ಕಂ ॥ ೧೫ ॥
(ಎಂಬ ಕಂದವು ಒಂದು ಪ್ರತಿಯಲ್ಲಿದೆ)

ಕಂ॥ ತೆರೆ ಮೂಡಿದಂತೆ ಮೂವ–
ತ್ತೆರಡುಂ ದಂತಂಗಳ್ ವಿರಾಜಿಸೆ ಸುಣ್ಪಂ |
ಧರಿಯಿಸಿದ ತಾಲು ವಂಶಾಂ
ತರವುಂ ಗಂಭೀರಮಪ್ಪುದುಂ ಕರಮುಚಿತಂ ॥ ೨೧ ॥

ದರ್ಪಕಮಲ್ಲದ ಜಿಹ್ವಂ
ನೇರ್ಪಟ್ಟಸಿದಾಗಿ ಸುಣ್ಪವೆತ್ತೆಳ್ಪಿನಿತುಂ |
ಕರ್ಪಿಲ್ಲದೆ ನಿಡಿದಪ್ಪುದ
ದಾರ್ಪತೆರವುದಶನರಾಜಿಯುಂ ರಾಜಿಪುದುಂ ॥ ೨೨ ॥

ಅರಿದಾಳ ಪಾಟಲಂ ಕಿ–
ಳ್ಸಿರೆ ರಕ್ತಂ ಮಂಜು ಮೊಳೆ ತಮಸ್ತಿಮಿರಂ |
ನೆರೆಸೆರೆಯುಂಬರಜಾಗಾ ?
ಗರಮಾಡಂ ಮಧುವಿಲೋಚನಂಗಳ್ ಶುಭದಂ ॥ ೨೩ ॥

ಹರಿಣಿಯ ನವಿಲ ಕವುಂಜಿನ
ಕರಿಣಿಯ ಕೋಗಿಲೆಯ ಕೊಂಚೆಯುಂಚೆಯ ಕಣ್ಣಂ |
ತಿರೆ ನಿಬಿಡವಾಗಿ ತೋರ್ಪೊಡೆ
ತುರಗದ ನಯನಂಗಳುಚಿತಮಭಿನವಚಂದ್ರಾ ॥ ೨೪ ॥

ಉನ್ನತ ನಾಸಾರಂಧ್ರಂ
ಕನ್ನಡಿಯಂತಪ್ಪ ನೊಸಲನಿನ್ನುಪ್ರೋಥಂ |
ಭಿನ್ನಸರೋಜನಿಭಂ ಮಧು–
ರಂ ನಾಸಾಪುಟಯುಗಂ ಪರೀಕ್ಷಿಸೆ ಶುಭದಂ ॥ ೨೫ ॥

ವಳಿ ಶೃಂಗಿ ದಗ್ಧಚರ್ಮಂ–
ಗಳು ಮೊಂದುಮವಿಲ್ಲವೆನಿಸಿ ನಿರ್ಮಾಂಸದಿ ನು– |
ಜ್ಜ್ವಳಮೆನಿಪ ಸಿರಂ ಮೃದುಕುಂ
ತಳಕೇಶಂ ಸ್ನಿಗ್ಧಮಾಗಿ ತೋರ್ಪೊಡೆ ಶುಭದಂ ॥ ೨೬ ॥

ತೀವಿದ ಕೊರಳ್ ಮಯೂರ
ಗ್ರೀವಮನನುಕರಿಸಿ ತೋರ್ಪೊಡಿರ್ಕೆಲದೆಡೆಯೊಳ್ |
ಲೇವಿಸಿದಂತಿರೆ ತೆಕ್ಕನೆ
ತೀವಿದ ಮೃದು ಲಲಿತ ಕಂದಬಂಧುರಮುಚಿತಂ ॥ ೨೭ ॥

ತೆರೆಯಿಲ್ಲದೆ ನೆರೆಯಿಲ್ಲದೆ
ಸೆರೆಯಿಲ್ಲದೆ ಕಿಱಿದುಮಾಗಿ ತೆಳ್ಳಗೆ ಮೊನೆಯಾ– |
ಗಿರೆ ಕಿವಿಗಳೊಳಂ ನುಣ್ಪಾ–
ಗಿರೆ ಕಟಿಯುಂ ವಿಕಟಮಾಗದಿರೆ [ಹರಿ] ಶುಭದಂ ॥ ೨೮ ॥

ಕಂ॥ ತ್ರಿಕದೊಳ್ತೆತ್ತಿಸಿದಂತೆ–
ರಡುಂ ಕೆಲದ ಪಕ್ಕೆಗಳೆ ಸಲಿಗೆಯಂತುರಭರಮುಂ |
ಪ್ರಕಟಂ ಪೋಲ್ತಿರೆ ವಾಜಿ
ಪ್ರಕರಕ್ಕುರಮುಗಲಿತಾಗಿ ತೋರ್ಪೊಡೆ ಶುಭದಂ ॥ ೨೯ ॥

ಸಂಕುಚವಾಗಿರ್ಪ ಕುಕ್ಷಿಕೆಯುಂ
ಕೂರ್ಚೆಯುಮಾ ಮೂರ್ಧೆ ಜಾನುಕೆ ಮಂಜರಿಯೊಳ್ |
ನೇರ್ಪುಂಕಿಡದಾ ಜಾನುಗ–
ಳೊಪ್ಪಲ್ ಕೋಮಲದೆ ಕಿಱಿಯುವಾದೊಡೆ ಶುಭದಂ ॥ ೩೦ ॥

ಓರನ್ನವೊಂದೆ ಬಣ್ಣಂ–
ನೇರಿದುವೆನಿಸುವ ಖುರಂಗಳುಂ ಖುರದೊಳಗಾ– |
ಕ್ಷೀರಿಕೆ [ಯಾಪಾಂಡುತೆಯು] ಮು–
ನೋರಂತಿರೆ ಕುಱಿದು ನೇರಮಾಗಿರೆ ಶುಭದಂ ॥ ೩೧ ॥

ಕ್ರೋಡಂ ಕುಱಿದಿರೆ ಕಕ್ಷಂ
ನೋಡಲ್ ಮಾಂಸಭರಿತಮಾಗಿರೆ ಕರ್ಣಂ |
ಸ್ಥೂಲಂ ಖುಜು ಬಹುಜಾನುಕೆ
ಪೋಲಿಕೆಯೊಳಮರ್ಕೆವೆತ್ತ ತುರಗಂ ಶುಭದಂ ॥ ೩೨ ॥

ನಿಟ್ಟೆಲ್ಪಡಂಗಿ ಬಱಿಗಳ್
ಬಟ್ಟೆದುವಾಗಿರ್ದ ಪಶ್ಚಿಮಂ ಘಟೆಯುಗಮಿ– |
ಟ್ಟಂತೊಪ್ಪಿ ತೋಱೆ ತುರಗಂ
ಪುಟ್ಟಿದ ಕಟ್ಟಿದ ಗೃಹಕ್ಕೆ ಶುಭಮಂ ಮಾಳ್ಕುಂ ॥ ೩೩ ॥

ಕಿಱಿದಪ್ಪ ಪುಚ್ಛದಂಡಂ
ಮಿಱುಗುವ ಮೃದು ಸೂಕ್ಷ್ಮರೋಮಸಂಕುಲದಿಂದಂ |
ತುಱುಗಿ ಜಘನಾಂತರದೊಳೆ–
ತೆಱೆದಿಹ ಬಾಲಂ ವಿಶಾಲಮಾದೊಡೆ ಶುಭದಂ ॥ ೩೪ ॥

ಬಿಂಕಂ ಬೆತ್ತಿನಿಸಾನುಂ
ಕೊಂಕಿಂ ಕಿವಿ ತೆಳ್ಳಿತಾಗಿ ತೋಱಿರೆ ತೊಡೆಗಳ್ |
ಸೋಂಕದಿರೆ ಶುದ್ಧಪ್ರಖು–
ರಂಕುಷ್ಠಿಕೆ ಕೂರ್ಚೆ ಜಂಘೆಯುಂ ಪೆಳ್ಗತೆರಂ? ॥ ೩೫ ॥

ತಾಮಸಮಲ್ಲದೆ ಕರಮುತಿ
ಕೋಮಲ ಗಂಭೀರ ವೃತ್ತ ಗುದಮುಖಮುಂ ನಿ– |
ರ್ಲೋಮತನು ವಿಶಾಲಮುಚಿತ
ರೋಮಶಮಾದಂದು ಕಕ್ಷಮುಂ ತೆರೆದೆಡೆಯೊಳ್ ॥ ೩೬ ॥

ಕಂ|| ಆಯತಸಂಸ್ಥಾನಬೃಹ–
ತ್ಕಾಯದ ತೇಜಸ್ವಿ ಭದ್ರಮನನನಿಲಜವಂ |
ತೋಯಧರನಿಸ್ವನಂ ದೀ–
ರ್ಘಾಯುಷ್ಯಂ ರಾಜಪೂಜಿತಂ ಲಲಿತಹಯಂ || ೩೭ ||

ತುರಗಕ್ಕಂ ಗೋಱಿಗೆಗಂ
ಶರೀರಸಂಸ್ಥಾನಮಷ್ಟವಿಧ ಲಕ್ಷಣಮಂ |
ತೆರಡಕ್ಕಮೊಂದೆ ಭೇದಂ
ಪರಕಿಸೆ ಗೋಱಿಗೆಗೆ ಯೋನಿಯುಂ ಸ್ತನಯುಗಮುಂ || ೩೮ ||

ಸಮವೃತ್ತೋದರಕೋಶಂ
ವಿಮಲಂ ಮುತ್ತೂರಪುಷ್ಪವಿಕಸಿತಮುಗ್ರಂ |
ಸಮವೃತ್ತಮರುಣಚವಿಯುಂ
ಸಮನಿಸೆ ತಾಂ ತುರಗಿ ನೋಡಲುತ್ತಮಮಕ್ಕುಂ || ೩೯ ||

ವುರಮುಂ ನೊಸಲುಂ ಕಟಿಯುಂ
ಪಿರಿದಾಗಿರೆ ಯೋನಿ ನುಣ್ಣಿತಾಗಿರೆ ಕಾಲ್ಗಳ್ |
ಹರಿಯ ಚರಣಂಗಳಂತಿರೆ
ಕೊರಲಾಯತಮಾಗಿ ತೋರ್ಪ ಗೋಱಿಗೆ ಶುಭದಂ || ೪೦ ||

ಆಡಮೊಲೆಯಂತೆ ನೇಲ್ದ–
ಲ್ಲಾಡುವ ಮೊಲೆ ನೋಡೆ ಕುಱಿಯ ತೆರದಿರ್ಕೆಲದೊಳ್ |
ಮೂಡಿ ಬಿದಱಿರ್ದ ಮೊಲೆಗಳ್
ಮಾಡುಗು ಮನದಱಲ 1ನಶುಭಮಂ ದುಃಖಮುಮಂ || ೪೧ ||

ಮೊದಲಗಲಿತಾಗಿ ಮೊಲೆಗಳ
ತುದಿ ಬೆಟ್ಟಿದುವಾಗಿ ನುಣ್ಪುವೆತ್ತಿರಡುಂ ನೇ– |
ರಿದುವಾಗಿ ಪಾಲಧಾರೆಗ–
2ಳೊದವಿ ಝುಲುಮ್ಮೆಂದು ಪಾಯೆ ಗೋಱಿಗೆ ಶುಭದಂ || ೪೨ ||

ಇದು ಸರ್ವಾಂಗ ಪರೀಕ್ಷಾ–
ವಿದಿತಂ ಬುಧಜನಮನೋಹರಂ ಕೃತಿನಾಥಾ– |
ಭ್ಯುದಯಕರಂ ಪ್ರಥಮಾ–
ಧ್ಯಾಯವಿರಚನೆ ಚಂದ್ರಮತಮಿಳಾವಳಯಹಿತಂ || ೪೩ ||

ಇಂತು ಪ್ರಥಮಾಧ್ಯಾಯಂ

1 ಸಾವುಮಂ. 2 ಒೊದವಿರೆ ಝುಲ್ಲೆಂದು ಸುರಿಯೆ.

ದ್ವಿತೀಯಾಧ್ಯಾಯಂ

ನಾಲ್ಕುಂ ವರ್ಣಂಗಳ್

ಕಂ|| ಶ್ವೇತಾರುಣಪೀತಾಸಿತ
ಚಾತುರ್ವರ್ಣ್ಯಂ ಪ್ರಧಾನಮಲ್ಲಿ ಸುವರ್ಣೋ– |
ಪೇತಮೆನಲ್ ಪಡೆಗುಂ ತ–
ಜ್ಜೋತದಿ ನಾವಾಲಕೇಸರ ಪ್ರತತಿಗಳುಂ || ೧ ||

ಶಾರದನೀರದಮಂ ಗೋ–
ಕ್ಷೀರಮನಿಂದ್ರೇಭಮಂ ಹಿಮಾಚಲಸಿತಮಂ– |
ಕೇರುಹರುಚಿಯಂ ಪೋಲ್ವ ಶ–
ರೀರದಿನತಿಧವಳನಪ್ಪ ತುರಗಂ ಶ್ವೇತಂ || ೨ ||

ಬಂದುಗೆಯುರಲಂ ತೊಳಗುವ
ಸಿಂಧುರಮಂ ಪವಳಮಂ ಪ್ರಭಾತದೊಳುದಯ– |
ಕ್ಕಿಂದೀವರಮಿತ್ರನ ರುಚಿ–
ಯಂದಮನನುಕರಿಸಿ ತೋರ್ಪ ತುರಗಂ ಶೋಣಂ || ೩ ||

ಸಿರಿಸದ ಕೊಸಗಿನ ಪೊಂದಾ–
ವರೆಯುರಲಂ ಪೊನ್ನಬಣ್ಣಮಂ ಬಣ್ಣಂ ಪೋ |
ಲ್ತಿರೆ ಹರಿಯುಜ್ವಲ ನೀಲಾಂ–
ಬುರುಹದ ಮಧುಕರನ ಬಣ್ಣಮಾದೊಡೆ ಕೈರಂ || ೪ ||

ವರ್ಣಚತುಷ್ಟಯದೊಳ್ ವ್ಯಾ–
ವರ್ಣಿಸುವೆಂ ಶ್ವೇತರಕ್ತ ಪೀತಾಸಿತದೊಳ್ |
ನಿರ್ಣೀತಮಾಗೆ ಮಿಶ್ರಿತ
ವರ್ಣಂಗಳ್ ಬೇಱೆತೋಱೆ ಶುಭಮಂ ಮೂಱುಂ || ೫ ||

ಆನನ ಮುಷ್ಕಾಪಾನ
ಸ್ಥಾನಂ ಶ್ವೇತಂಗೆ ಕರಿಯುವಾದೊಡೆ ಕರ್ಕಂ |
ತಾನಕ್ಕುಂ ಮುಖ ಮುಷ್ಕಾ
ಪಾನಂ ಬಿಳಿದಾಗೆ ಕರ್ಕನೆಂಬರ್ ಕೆಲಬರ್ || ೬ ||

ಪರಕಲಿಸಿ ಕೊನಸೆವಾಯುಂ–
ತಿರೆ ಸೊಗಯಿಸಿ ತೋರ್ಪ ಕಪ್ಪುರಬೆಳ್ಪಿನ ಮೆಯ್ಯೊಳ್ |
ಪರೆದಿರೆ ಮುಷ್ಕಾಪಾನಮು
ಮರುಣಚ್ಛವಿಯಾಗೆ ಕುಕ್ಕುಟಾಖ್ಯಂ ತುರಗಂ || ೭ ||

ಕಂ|| ಬಿಳಿದಪ್ಪ ಬಂಣದಾ ಹರಿ
ಯೊಳಿ ಕಗ್ಗಿರ್ದ ಬಾಲವಸಿ(ಶಿ)ತವಕ್ಷಂ ತುರಗ- |
ಕ್ಕೊಳವಪ್ಪೊಡೆ ನೀಳ್ದ(ಳ)ನಂ-
ದಳವಡುಗುಂ ಪೆಸರದರ್ಕೆ ಸುಕರವಿಳಾಸಾ || ೮ ||

ಧವಳಾಂಗಮಪ್ಪ ತುರಗದ
ಕಿವಿಗಳ್ ಕೃಷ್ಣಂಗಳಾಗಿ ತೋರ್ಪೊಡಮರುಣ- |
ಚ್ಛವಿಯಾದೊಡಮಾಳ್ದಂಗು-
ದ್ಭವಮಕ್ಕುಂ ಶ್ಯಾಮವರ್ಣನನುಪಮವರ್ಣಂ || ೯ ||

ಬಿಳಿಯವು ಬಾಲದ ಮೊಳೆಗಳ್
ಬೆಳರ್ಗವಿಲಂ ಮೆಯ್ಯ ಬಣ್ಣಮಾದೊಡೆ ಚೀರಂ |
ಬೆಳರ್ಗವಿಲಂ ಮೆಯ್ ಬಾಲದ
[1]ಮೊಳೆಯುಂ ಜಂಘೆಗಳುಮಸಿತಮಾದೊಡೆ ತುರಗಂ || ೧೦ ||

ಉರವುಂ ಕಪೋಲಮುಂ ಕೇ-
ಸರಮುಂ ಮುಷ್ಕಪ್ರದೇಶಮುಂ ಲೋಚನಮುಂ |
ಖುರಮುಮಧರೋಷ್ಠಮುಂ ಕಡು
ಕರಿದಾಗಿರೆ ಧವಲವರ್ಣನಿಂದ್ರಾಹ್ವಹಯಂ || ೧೧ ||

ಆಳರಿಯೆಲೆಯಂತೆ ನೊಸಲೊಳ್
ತೊಳಗುವ ಬೆಳ್ಪಿಸೆದು ತೋರ್ಪೊಡಂತದು ತಿಲಕಂ |
ಥಳಥಳಿಸಿ ಪೊರೆದು ಮುಖದೊಳ್
ತೊಳಗುವ ಬೆಳ್ಪಿಸೆಯೆ [2]ಬೊಲ್ಲನಭಿನವಚಂದ್ರಾ || ೧೨ ||

ನವಪಾಟಳಸದೃಶಂ ಕುಂ-
ಕುಮ ಚೀರಂ ಬೆಳ್ಪು ಮಿಕ್ಕೊಡುಜ್ಜ್ವಳಚೀರಂ |
ಪವಳಾಂಗ ತನುಚ್ಛವಿ ಬೆ-
ಳ್ಪವಿರಳಮಾದಂದು ನೋಡೆ ಮಂಗಳಚೀರಂ || ೧೩ ||

*ತುರಗತನುಚ್ಛವಿ ನೀಲಾಂ
ಬುರುಹ ಮನನುಕರಿಸಿ ತೋಱೆ ನೀಲಂ ನೀಲಾಂ |
ಬುರುಹತನುಚ್ಛವಿಯಾಗಲ್
ನೆರೆ ಪರೆದಿರೆ ನೀಲಬೋರ ನಾಹಯಧೀರಂ || ೧೪ ||

1 ವಳೆಯುಂ. 2 ಬೋಟ.

*ಭೃಂಗಾಂಗವರ್ಣಮುಂ ಸ- | ರ್ವಾಂಗಮನನುಕರಿಸಿ ತೋರ್ಕುಮಪ್ಪೊಡೆ ಕೊಂಗಂ ||
ಕೊಂಗಂ ಜ್ವಲ ಬೋರಂ ಪಸವ- | ಳಂಗೆ ತನುಚ್ಛವಿಯಾದಂದು (ಕುದುರೆ) ಮಂಗಳ ಬೋರಂ || ೧೩ ||

ಕಂ|| ಕರಿದಪ್ಪ ಕಾ(ಕವಿ)ಲವರ್ಣಂ |
ಖುರಮುಂ ಜಂಘೆ ಕರಿದಾಗಿ ತೋರ್ಪೊಡೆ ಬಣ್ಣಂ |
ವಿರಾಜಿಸುತಿರ್ಪೊಡಂತಾ |
ತುರಂಗಮಂ ಕೈದ(ರ)ನೆಂದು ಪೇಳ್ವರ್ ಕೆಲಬರ್ || ೧೫ ||

ತಳ್ಪೊಯ್ಯೆ ಕರ್ಪು ನೇರ್ಪಿಂ |
ಬೆಳ್ಪಿನ ಮೆಯ್ಯೊಳ್ ತುರಂಗಮಂ ಕಾರಳಗಂ ||
ಬೆಳ್ಪಿನೊಳರುಣಚ್ಛವಿ ತಾಂ |
ತಳ್ಪೊಯ್ದೊಳಪೊಕ್ಕು ತೋರ್ಪೊಡದು ಕೇಸಳಗಂ || ೧೬ ||

ಶ್ವೇತಾಂಗದೊಳ್ ವಿರಾಜಿಸೆ |
ಪೀತಚ್ಛವಿ ನಿಬಿಡಮಾಗೆ ಹರಿ ಸಂಪಳಗಂ ||
ಶ್ವೇತದೊಳಂ ಪಾಟಲ ಪು |
ಷ್ಪಾತಿಶಯಚ್ಛವಿಗಳೆಸೆದೊಡದು ಬೋರಳಗಂ || ೧೭ ||

ವದನದೊಳಂ ನಾಲ್ಕುಂ ಪಾ |
ದದೊಳಂ ಬೆಳ್ಪಾಗೆ ಪಂಚಕಲ್ಯಾಣಂ ಬಾ ||
ಲದೊಳುರದೊಳ್ ತಾಂ ಕೇಸ |
ರದೊಳಮತಿಶಯ ಬೆಳ್ಪದಾಗೆ ಮಂಗ(ಕ)ಳನಕ್ಕುಂ || ೧೮ ||

ಖುರನಯನೋಷ್ಠಾನನ ಮಿವು |
ಕರಿಯವು ವಾಲಧಿಯು ಮಂಗರುಹಮುಂ [1]ನಾಸಾಂ ||
ತರಮುಂ ಪಾಂಡುರಮಾ |
ಗಿರೆ ತುರಗಂ [2]ಕೊಂಕಾಹ್ವನಕ್ಕುಮಭಿನವಚಂದ್ರಾ || ೧೯ ||

ಎರದ ತನಿವಣ್ಣ ಬಣ್ಣದ |
ತುರಗದ ನಿಟ್ಟೆಲ್ವುವಿಡಿದು ಬಾಲದವರೆಗಂ ||
ಕರಿದಕ್ಕೆ ಕೆಚ್ಚನ[3]ಕ್ಕೊಂ |
ದೆರೇಖೆ ನೀಳ್ದಿಸೆಯ ಶೋಭೆಯಟ್ಟಂ ತುರಗಂ || ೨೦ ||

ರಾಜಕಪೋತದ ಬಣ್ಣದ |
ವಾಜಿಗೆ ಪೆಸರುಂ ಕಪೋತನೆಂಬರ್ ಮತ್ತಾ ||
ವಾಜಿಗತಿಧವಳಮಂಡಲ |
ರಾಜಿ ವಿರಾಜಿಪೊಡೆ [4]ಯುಪಟಮೆಂಬಭಿಧಾನಂ || ೨೧ ||

1 ಕೇಶಾಂ. 2 ಗೊಕ್ಕಾಹ. 3 ಕ್ಕು ನೀಳ್ವರಮೊಂದೇರೇಖೆ ಕಣ್ಣ ಮಲ್ಲಿಯೆನಿಕ್ಕುಂ. 4 ಊಾಟವಂ ಪೆಸರಿಂದಂ.

ಕಂ|| ಬಾಲಮುಮೆರ್ದೆಯುಂ ಕಣ್ಣುಂ |
ಕಾಲುಂ ಕರ್ಪೆಸದು ತೋಱೆ ಬವರದ ಕಾಯಂ ||
ಪೋಲೆ ತನುಚ್ಛವಿ ಮೂಱುಂ |
ಮೇಲಾ ಸಾಲ್ಕೆಡೆಯರಕ್ತ ಕಾಮಾಂಕಿಯುಮಂ || ೨೨ ||

ಕಾರೆಳ್ಳ [1]ನಕ್ಕಿಯುಂ ಸಮ |
ಸಾರಿಕೆಯಿಂ ಬೆರೆಸಿದಂತೆ ಕರ್ಪುಂ ಬೆಳ್ಪುಂ |
ನೇರಿತ್ತಾಗಿರೆ ಬೆರಸಿ ತ |
ನೂರುಹ[2]ವೊರನೆತ್ತ ನೀಲನೆಂಬ ಪೆಸರಂ ಪಡೆಗುಂ || ೨೩ ||

ಖುರನಯನವಾಜ ಮುಖಕೇ |
ಸರವಾಳಧಿಕಕ್ಷವಕ್ಷದೊಳ್ ಪಾಂಡರಮಾ ||
ಗಿರೆ ಮೆಯ್ ಗಂಗೆಯ [ತೊಳಗುವ] |
ನೊರೆಯುಂ ಪೋಲ್ತೆಸೆಯೆ ಗಂಗವಾಣಿಯೆನಿಕ್ಕುಂ || ೨೪ ||

ಬಾಲಮುಮಂಗೋಪಾಂಗಂ |
ಕಾಲುಂ ಕರಿದಕ್ಕೆ ಪೀತರುಚಿಯುಪ್ಪೊಡಮು ||
ಕ್ಕಾಲಲಿತ ಹಂಸರುಚಿಯುಂ |
ಪೋಲೆ ತನುಚ್ಛಾಯೆ ಚಕ್ರವಾಕಂ ತುರಗಂ || ೨೫ ||

ಸಿಂಗದ ಕೇಸರಮಂ ಪೋ |
ಲ್ವಂಗರುಹಂ ಮಿಶ್ರಕೇಶವಾಲಧಿ ಮುಷ್ಕಾ ||
ಪಾಂಗಾಸ್ಯಮರುಣಮಾದ ತು |
ರಂಗಮುಮದು ಸಿಂಹಪೋತನಭಿನವಚಂದ್ರಾ || ೨೬ ||

ಅರುಣಂಗಳ್ ಮೇಣದು ಕರ |
ವಿಲಸಿತ ವರ್ಣನಕ್ಕಶೋಕೆಯ ರುಚಿ[3]ಯುಂದದೆ ಪಂ ||
ಕರುಹರುಚಿ[4]ಯುಂತೆ ಸಿತ ಕೇ |
ಸರಮಾಗಿರೆ [5]ಮುಂದೆ ನಿಲ್ಕೆ ಪುಣ್ಯದ ಪುಂಜಂ || ೨೭ ||

ತುರಗದ ಮೆಯ್ವರ್ಣಂ ಸಿತ |
ಸರುಷಪಮಂ ಪೋಲ್ತು ತೋಱೆ ಸಿದ್ಧಾರ್ಥಂ ಮ |
ತ್ತೆರಡು ಪೆಸರಾಗೆ ಪೂರ್ವಾ |
ಪರವರ್ಣಂ ಬೇಱೆ ತೋಱಲುತ್ತಮಮಕ್ಕುಂ || ೨೮ ||

---

1 ಮುತ್ತಿಯುಂ. 2 ಮಳವಟ್ಟು ತೋಱೆ ಮುದ್ದಂ ಮುರ್ದಂ, ತೋಱೆ ನೀಲಂ ಪೆಸರಿಂ. 3.4 ಯಕ್ಕೆ.
5 ಮುಂಜನಲ್ತೆ ಪುಣ್ಯದ.

ಕ|| ಇಂದಿರನಕ್ಕುಂ [1]ಮೂಷಕ |
ವೃಂದಚ್ಛಾಯಾ ವಿರಾಜಿತಂ ಕರ್ಗಲ್ಪ |
ಣ್ಣಂದದ ಕೇಸರಮಾ ನೊರೆ |
ಯಂದೆಮನನುಕರಿಸಿ ತೋರ್ಪೊಡದು ಪುನ್ನಾಹಂ || ೨೯ ||

ಪೆಸರಿಡಲೆಂತುಂಬಾರದ |
[2]ಕುಸುಮದ ವರ್ಣಂ ವಿರಾಜಿಸುತ್ತಿರೆ ವಿಹಗ- ||
ಪ್ರ(ಸ)ಕರದೊಳೊಂದೊಂದಱ ರುಚಿ |
ಯೆಸೆವ ಹರಿಗೆ ಮೃಗದ ಪೆಸರನಿಡುಗನುನಯದಿಂ || ೩೦ ||

ನಿರ್ಣೀತಮಾಗಿ ಪೇೞ್ದೀ |
ವರ್ಣಕದೊಳ್ ಶುಭಮನಶುಭಮುಂ ಪ್ರಕಟಂ ವ್ಯಾ ||
ವರ್ಣಿಸುವೆಂ ವಾಜಿಗೆ [3]ಸಿತ |
ವರ್ಣಮೆ ವರ್ಣಂಗಳೊಳ್ ಪ್ರಧಾನಂ ಶುಭದಂ || ೩೧ ||

ಶರದಭ್ರಂ ನಭದೊಳ್ ಹಿಮ |
ಕರನಿರುಳೊಳ್ ಬೆಳಗುವಂತೆ ನಾನಾವರ್ಣಂ ||
ಬೆರಸೆ ನಿಜದ್ಯುತಿಯುಂ ಪಾಂ |
ಡರ ಮಂಡಲ ವಾಜಿಗಳ್ಗೆ ವರ್ಣಾಂತರದೊಳ್ || ೩೨ ||

ಮಿಶ್ರಿತವರ್ಣಾದಿಗಳೊಳೆ ಸ |
ಮಶ್ರೀ(ಕ)ಯುಂ ಶ್ವೇತಮಂಡಲಂ ಪಿರಿದಾದಂ ||
ದಶ್ರೀಕಂ ಶ್ವೇತೇತರ |
ಮಿಶ್ರಿತವರ್ಣಂಗಳಾಗೆ ಮಿಗಿಲತಿಶುಭದಂ || ೩೩ ||

ಅಮಳಜಲಧರದ ಸಮುಸಂ |
ಕುಳಮಂ ಬಾಂದೊಱೆಯುಮಂ ರಜತಶೈಲಮುಮಂ ||
ಹಿಮಕರವಿಚಿತ್ರವರ್ಣದ |
ಪವಳದ ಗೃಹದಂದಮಾಗಿ ತೋರ್ಪೊಡೆ ಶುಭದಂ || ೩೪ ||

ತಲೆಯುಂ ಮೊಡಲುಂ ಪಾವಸೆ |
ಶಿಲೆಯುಂ ಬೇರ್ಕೊಳೆದು ಬಿಲ್ದ ಧಾತ್ರೀರುಹಮಂ ||
ಜಲಕಾನಲ ವರ್ಣದ ಸಂ |
ಕುಲಮುಮನನುಕರಿಸಿ ತೋರ್ಪ ಬೆಳ್ಪು ಕನಿಷ್ಠಂ || ೩೫ ||

---

1 ಪಾವಕ. 2 ಪಸುವಿನ, ಕುಸುರಿಯ. 3 ಸಿತವರ್ಣಂ ವರ್ಣಕ್ಕಮಂತತಿ ಶುಭದಂ.

ಕಂ|| ಬಳಿಗಣ್ಣಿಂಬರ್ ಪಾಱುಂ |
ಬಳಿಯುಂದದ ಬಿಳಿಯ ರೇಖೆ ಕಣ್ಣೊಳ್ ತೋಱಲ್ ||
ಬಳಸಿರೆ ಲೋಚನಯುಗಳಂ |
ಬಳಿಗಣ್ಣಾದಂದು ಶುಭದವೊಂದಱೊಳಶುಭಂ || ೩೬ ||

ನಯನಂಗಳ್ ತೊಳಗುವ ಬೆ |
ಳ್ಳಿಯ ಕಣ್ಣಂ ಪೋಲೆ ಮಲ್ಲಿಕಾಕ್ಷಂ ಶುಭವುಂ ||
ನಯನಕ್ಕೆ ಕರಿಯ ಬಳಿಗಳ್ |
ನಿಯತಂ [1]ನಿಲೆ ವಾಜಿ ಕೃಷ್ಣಮಾದೊಡೆ ಶುಭದಂ || ೩೭ ||

ಕಾಗೆ [2]ಶಿವೆ(ಲೆ) ಕಟಿತ್ತಿ ತೋಳಂ |
ಗೂಗೆ ಕಪೋತಂ ಸುಭಸ್ಮಧೂಮಚ್ಛವಿಯುಂ ||
ತಾಗಿರೆ ಹಯವರ್ಣಮಿವಂ |
ಬೇಗಂ ವರ್ಜಿಸುವುದಶುಭವರ್ಣಾದಿಗಳಂ || ೩೮ ||

ಕರಿಯುಶ್ವಸಂಕುಲಂಗಳೊ |
ಳರುಣಂ ಸಿತರೇಖೆ ತುರಗವಂಶಾಂತದೊಳಾ ||
ಗಿರೆ [3]ತತ್ಕ್ಷಣದಿಂದಂ ಪರಿ |
ಹರಿಸುವುದದನಾಳಲಾಗದಭಿನವಚಂದ್ರಾ || ೩೯ ||

ಶ್ವೇತಂ ತನು ತಲೆ ಕರಿದ |
ಪ್ಪಾತುರಗಂ ಕಾಕ (ಶ್ಯೇನ) ಶಿರನಪೂಜ್ಯಂ ತಾಜ್ಯಂ ||
[4]ಖ್ಯಾತಿಯೊಳೆ ತ್ಯಜಿಸಿ ಕಳೆವುದು |
ಶ್ವೇತಂ ಶಿರವಂಗಂ ಕರಿದು ಪರಿಹಾರ್ಯಂಗಳ್ || ೪೦ ||

ಕಾಗೆಯ ಮುಖದಂತಿರೆ ಕರಿ |
ದಾಗಿ ಬಹಿರ್ಮುಖ[5]ನ ಮುಖದವೋಲ್ ಕೆಂಪೆಸೆಯು ||
ಲ್ಕಾಗಳೆ ಪತಿಗೃಹಮುಂ |
ಬೇಗದೆ ಮಾಳ್ಕುಂ [6]ಸಿರಿಯುಂ ಬಹುವರ್ಣಂಗಳ್ || ೪೧ ||

ಖುರ ಮೇಢ್ರ ಮುಷ್ಕವಾಲಧಿ |
ಶಿರದೊಳೆ ಕರಿದಾಗಿ ತೋರ್ಪೊಡಂತದು ಕಷ್ಟಂ ||
ತುರಗಕ್ಕೆ ಪೇಳ್ದ ಯೆಡೆಯೊಳ |
ಗಿರೆ ಬೆಳ್ಪಂ ಶುಭದವೆಂದನಭಿನವಚಂದ್ರಂ || ೪೨ ||

---

1 ....ಶೆತ್ವವಾಜಿ ಕೃಷ್ಣತಾರಕನಶುಭಂ. 2 ಶಿವ. 3 ಪಾಪ ಲಕ್ಷಣಂ. 4 ಶ್ವೇತಶಿರನನ್ಯವರ್ಣ | ವ್ರಾತಾಂಗಮುಮಾದೊಡಂತೆ ಪರಿ. 5 ಮುಖಮವು ತದಾನನಮುಂ ನಿ| ರ್ವೇಗಂ ಪೂಱ್ಕುಂ ನಿಜಪತಿ| ಗಾಗಳು ಮುತ್ಸಾಹ ಹೇತು ಬಹುವರ್ಣಂಗಳ್. 6 ಸಮಿಪಂ.

ಕಂ|| ತುರಗದ ಕಾಲ್ಗಳೊಳಡ್ಡಂ |
ತರದಿಂ ಕರಿದಪ್ಪ ರೇಖೆಗಳ್ ಚಿತ್ರಿಸಿದಂ ||
ತಿರೆ ಪಾಪಲಕ್ಷಣಂ ಪರಿ |
ಹರಿಪುದು ಮಾರ್ಜಾಲಚರಣ ನಿರ್ಧನ ಕರಣಂ || ೪೩ ||

ಪಾದದ್ವಂದ್ವದೊಳಂತಾ |
ಪಾದಚತುಷ್ಟಯದೊಳಾದ ಬೆಳ್ಪಿಂದೆಂ ಸಂ ||
ಪಾದಿಸುಗುಪಸಮಪಾದದೊ |
ಳಾದೊಡೆ ಬೆಳ್ಪೊಳ್ಪನಱಿಗುನಭಿನವಚಂದ್ರಾ || ೪೪ ||

ಬಾಲಂ ಕವಲ್ತು ಮಿಳಿರ್ವುರಿ |
ಮಾಲೆ ಯೊ(ಲಿವೊ)ಳರೆ ಕೇಸರಂಗಳುಂ ಕಡುಗರ್ಪಂ ||
ಪಾಲಿಸಿದೊಡಂ ಕವಿಲ್ತೊಡ |
ಮಾಲಯಕಾ ದುಷ್ಟವಾಜಿ ಭಯಮುಂ ಮಾಳ್ಕುಂ || ೪೫ ||

ಬಾಲದ [1]ರುಚಿ ತನುರುಚಿಯುಂ |
ಪೋಲದೆ ಬೇಱೊಂದು ಬಣ್ಣಮಾದೊಡೆ ತನು ಶಾ ||
ದ್ವಾಲ ತನುರುಚಿಯುಮಾಗೆ ನಿ |
ಜಾಲಯದಿಂದಂ ಕಳೆದುಬಿಡುವುದತಿವೇಗದೊಳಂ || ೪೬ ||

ಹರಿಣರುಚಿಯಂತೆ ಮೆಯ್ ಕಡು |
ಕರಿದೊಳ್ದೊಡೆಗಳ್ ಬಸಿಱ್ ಕೊರಲ್ ಕ್ರೋಡಂ ಪೇ ||
ರುರವಿನಿತುಮವಿನ ಬಣ್ಣದೊ |
ಳಿರೆಯಕಲಂ ? ಮಶ್ವಜಾತಿಯತಿಕಷ್ಟತರಂ || ೪೭ ||

ಮಂಗಳಕಾರ್ಯಕ್ಕಂ ಸಮ |
ರಾಂಗಣಕಂ ವಾಜಿವಾಹನಂಗಳ್ ಶುಭವ ||
ರ್ಣಂಗಳ್ ಪೂಜ್ಯಂದುರ್ವ |
ರ್ಣಂಗಳಪೂಜ್ಯಂಗಳುಭಯಕಾರ್ಯಕ್ಕೆಂದುಂ || ೪೮ ||

ಧವಳಾಂಗನಪ್ಪ ತುರಗಂ |
ಕುವಳಯಬಾಂಧವನ ವಾಹನಂ ಕರ್ಕಶಮಾ ||
ಹವದೊಳ್ ನರನೇಱಲ್ಕತಿ |
ಜವದಿಂ ಜಯಮಾಗೆ [2]ಮಾಳ್ಕುಮಾ ಪರನೃಪರಂ || ೪೯ ||

ಅರಿಯಂ ಸಂಕ್ಷೇಪದೊಳಾಂ |
ತರಿಯಂ [3]ಗೆಲಿಸುಗುಮದಶ್ವಸಾಧನಪತಿ[4]ಯುಂ ||
ಭರದಿನದನೇಱೆ ಲಕ್ಷಣ |
ನಿರತಂ ಸುರಪತಿಯ ವಾಹನಂ ಕೇವಳಮೇ || ೫೦ ||

---

1 ತುದಿ. 2 ತೂಳ್ದುಗುಂಪರ. 3 ತೇಲಿಸುಗು. 4 ಸಂ | ಗರದೊಳದನೇಱೆ.

ಕಂ|| ಕ್ಷೀರರುಚಿಯಂ [1]ತನು ಪ್ರಭೆ |
ಯೋಱಂತಿರೆ ಶ್ವೇತನಾಗಲದನಾಳ್ದೊಡೆ ದಿ ||
ಗ್ವಾರಣ ಮರ್ಯಾದಾಂಬುಧಿ |
ಧಾರಿಣಿಯ ನನೂನ[2]ಮೊಂದೆ ಛತ್ರದಿನಾಳ್ಗುಂ || ೫೧ ||

ಭ್ರಮರಾರಿಷ್ಟಂ ರುಚಿರ |
ಭ್ರಮರಾಜಿತವಾಜಿ ಮಾೞ್ಕುಮುದಿತೋದಿತಮಂ ||
ಸಮರಾಂಗಣದೊಳ್ ನೃಪತಿಗೆ |
ಯಮುನಾಹವವಾಹಮಲ್ತೆ ಲಕ್ಷಣದಿಂದಂ || ೫೨ ||

ಅಱಿದಾಳರುಚಿಯನಾಳ್ದಂ |
ಗರುಹದ ಹರಿ ಹರಿಯ ವಾಹನಂ ಸೇತುಹಿಮಾಂ ||
ತರಧರಣಿತಳಮನಾಳ್ಗುಂ |
ನಿರಂತರಂ ದಿವ್ಯವಾಹಮದನಾಳ್ದಾತಂ || ೫೩ ||

ಬಾಲಮುರಂ ವದನಂ ಕ |
ಣ್ಣಾಲಿಯೆ ಧವಳಂಗಳಾಗೆ ಹರಿ ಜಯಮನಿಳಾ ||
ಪಾಲಂಗೆ ಮಾೞ್ಕುಮಾಹವ |
ಕಾಲದೊಳದು ಮೇಘವರ್ಣನೆನೆ ಪೆಸರ್ವಡೆಗುಂ || ೫೪ ||

ಶ್ವೇತ ತನುಚ್ಛಾಯಂ |
ಶ್ವೇತೇತರವರ್ಣಂಗಳಪ್ಪ ಕರ್ಣಂಗಳುಮಾ ||
ದಾ ತುರಗಮಾಳಿಕುಂ ಧಾ |
ತ್ರೀತಳಮಂ ಶ್ಯಾಮವರ್ಣನಾತ್ಮಾಧಿಪನಂ. || ೫೫ ||

ಶ್ವೇತಂ ಕೇಸರಮಾದ ಕ |
ಪೋತಕನುಂ ಸಿಂಹಪೋತನುಂ ಸಿದ್ಧಾರ್ಥೋ ||
ಪೇತನುಮಪ್ಪಾ ತುರಗ |
ವ್ರಾತಂ ನರಪತಿಗೆ ಘಾತಮಾಹವದೆಡೆಯೊಳ್ || ೫೬ ||

ಬೆ(ಚೆ)ೇರನುಮಂ ನೃಪನುಜ್ವಲ |
ಬೆ(ಬೊ)ೇರನುಮಂ ಧುರದೊಳೇಱೆ [3]ರಿಪುಕುಳನಾರೀ ||
ಘೋರಾಕ್ರಂದನಮುಂ ಸಮಂ |
ರಾರಂಭದೊಳಾಗಿಸಲ್ಕೆ ನೆಱೆಗುಂ ಮೆಱೆಗುಂ || ೫೭ ||

1 ಪ್ರಭವಾಜಿತ ಮಾರಿಯ ವಾಹನ ಬಳೀಶನದನಾಳ್ದೊಡೆ. 2 ಮೇಕ. 3 ರಿಪುಕುಳನಾರೀ || ದಾರನು ಮೆಂದನುಪಮ ಸಮ | ರಾರಂಭದಿಯೊದಗೆ ಗೇಱುಗಭಿನವಚಂದ್ರಾ ||

ಕಂ|| ಪಸರಿಸಿ ರೋ[1]ಮಾಂಕುರಮುಂ |
ಮುಸುರ್(ಕಿ)ರೆ ತುರಗಕ್ಕೆ ರೋಮಮುತ್ಸಾಹತೆಯಿಂ ||
ದೆಸೆಗು ಮದನಾಳ್ವನಾಳ್ಗುಂ |
ವಸುಮತಿಯಂ ಧುರದೊಳಿಱಿದು ರಿಪುಸಂತತಿಯಂ || ೫೮ ||

ಲಕ್ಷಣಯುಕ್ತಂ ಸರ್ವಭ |
ರಕ್ಷಮನೆನಿಸಿರ್ದ ಶೋಣಸಂಗ್ರಾಹವದೊಳ್ ||
ಭಕ್ಷಿಸುಗುಂ ರಿಪುವಂ ಪರಿ |
ರಕ್ಷಿಸುಗುಂ ಪತಿಯನೆಂದನಭಿನವಚಂದ್ರಾ || ೫೯ ||

ತುರಗದ ಬೆನ್ನೊಳ್ ಸತ್ತೊಡೆ |
ನರನೆಯ್ದುಗುಮೂರ್ಧ್ವಗತಿಯನುಗ್ರಾಹವದೊಳ್ ||
ಮರಣಂ ತುರಗಕ್ಕಾಗಲ್ |
ನರನೋಸರಿಸಿಡೊಡವನಧೋಗತಿಗಿೞಿವಂ || ೬೦ ||

ಮುನ್ನುಗ್ರಾಹವದೊಳ್ ಪಲ |
ರುಂ ನಿರುತಂ ಮಡಿದರೆಂದು ಹಯಮಂ ಮನುಜರ್ |
ಮನ್ನಿಸದೇಱಲ್ಕಾಗದು |
ತನ್ನಯ ಪತಿಗೞಿವ ಮಾೞ್ಪಿ ಬಂಡಂ ಭಂಡಂ || ೬೧ ||

ಬಡಬೆಯ ಬೆನ್ನೊಳ್ ನರನೞಿ |
ದೊಡಮಂತಾ ಬಡವೆ ಸಮರದೊಳ್ [2]ಶರಹತಿಯಿಂ ||
ಮಡಿವೊಡಮೆಂತುಂ ಸ್ವರ್ಗಂ |
ಬಡೆಗುಮೆ ತತ್ಕ್ಷಣದಿನವನಧೋಗತಿಗಿೞಿವಂ || ೬೨ ||

[3]ಕರ್ಣಾಟಕ ಕವಿಗಳ್ಗಿದು |
ಕರ್ಣಾಮೃತಮಪ್ಪ ಶಾಸ್ತ್ರ[4]ಮುಪ್ಪನ್ನಂ ವ್ಯಾ ||
ವರ್ಣಿಸಿ [5]ನಾನಾವಿಧಮಂ |
ವರ್ಣಾಧ್ಯಾಯಂ ದ್ವಿತೀಯೆ ಚಂದ್ರನಮತದಿಂ || ೬೩ ||

ಇಂತು ದ್ವಿತೀಯಾಧ್ಯಾಯಂ.

(ವರ್ಣಾಧ್ಯಾಯಂ)

---

1 ಮಂಖುರಮಂ. 2 ನಿಜಪತಿಯಂ ಕೆಡಹುವೊಡೆ. 3 ಕನ್ನಡ ಕವಿಗಳಿಗಿದು. 4 ಸಂಪನ್ನಂ. 5 ವಿಚಾರ ಸಹಮಿದು | ವರ್ಣಾಧ್ಯಾಯಂ ದ್ವಿತೀಯಮಿದು ಚಂದ್ರಮತಂ—ಉಭಯಂ ಅಧ್ಯಾಯಕ್ಕೆ ಪದಂ ೧೦೩ ಕ್ಕಂ ಮಂಗಳ ಮಹಾಶ್ರೀ ಶ್ರೀ—ಎಂದು ಒಂದು ಪ್ರತಿಯಲ್ಲಿದೆ.

ತೃತೀಯಾಧ್ಯಾಯಂ

ಪುಷ್ಪಪುಂಡ್ರಾದ್ಯಧ್ಯಾಯಂ

ಕಂ|| ವಾಜಿಗಳ ಮೇಢ್ರಪುಷ್ಪ ವಿ |
ರಾಜಿತಮಂ [1]ಗಂಧಹೇಷಿತಸ್ವನಗಳ ವಿ ||
ಭ್ರಾಜಿತಮಂ ಪೋಷಕಜನ |
ಪೂಜಿತಮಂ ವ್ಯಕ್ತವಾಗಲಭಿವರ್ಣಿಸುವೆಂ || ೧ ||

ಬೆಳ್ಪಿಲ್ಲದ ಬಣ್ಣಂಗಳೊ |
ಳೊಳ್ಪಳವಟ್ಟಿರೆ [2]ಉಪಾನದಿಂ ಸ್ರುವ(ಸ್ತುವೆ)ವರೆಗಂ ||
ನೀಳ್ಪುವಡೆದೆಸೆದು ತೋಱಿಯು |
ಮೊಳ್ಪಂ ಶುಭಪ್ರೋಥಜಾತಮೆನೆ ಪೆಸರ್ವಡೆಗುಂ || ೨ ||

ಆನನಮಲ್ಲದೆ ಧವಳ |
ಸ್ಥಾನಂ ತಾನಾದೊಡಕ್ಕುಮವಕಂಠಕೆಯುಂ ||
ಸ್ಥಾನದೊಳಂಗದೆ ವಿರ(ಮ)ಳ |
ಸ್ಥಾನಂ [3]ಪುಟ್ಟಿದೊಡೆ ಲಲಿತ ಪುಂಡ್ರಕನಾಮಂ || ೩ ||

ಖರದಂಡಾಂಕುಶ ಝಷ ಚಾ |
ಮರ ದರ್ಪಣ ಕಲಶಶಂಖ ಭೃಂಗಾರು ನಿಶಾ ||
ಕರ ಶಕ್ತಿ ಖಟ್ಗಿ ಮುಸಲೋ |
ತ್ಕರಮಂ ವಾಜಿಗಳ ಪುಂಡ್ರಮದನುಕರಿಸೆ ಶುಭಂ || ೪ ||

ಚಾಪಂ ಶ್ರೀವೃಕ್ಷಂ ಸ್ರುವೆ |
ಯೂಪಂ ಸ್ವಸ್ತಿಕ ಮುದಗ್ರವಜ್ರಮುಮೆಂದೀ ||
ರೂಪಕದ ಪುಂಡ್ರಲಕ್ಷ್ಮ ನಿ |
ರೂಪಕಮಾವಾಜಿ ಪೂಜ್ಯನಭಿನವಚಂದ್ರಾ || ೫ ||

ನೊಸಲೊಳ್ ಚತುರಸ್ರಂ ಬೆ |
ಳ್ಪಿಸೆದಿರೆ ಶುಭಮರಳಿಯೆಲೆಯ ತೆಱದಿಂದಂ ರಂ ||
ಜಿಸೆ ವರಲಲಾಟದೊಳ್ ಬೆ |
ಳ್ಪಿಸೆದಿರೆ ಸರ್ವಾರ್ಥಸಿದ್ಧಿ ಸೌಭಾಗ್ಯಕರಂ || ೬ ||

ಕಟಿ ಶಂಖಕರ್ಣ ಮಸ್ತಕ |
ನಿಟಿಲತಟೀ ಪುಟದೊಳ್ ಶಶಾಂಕದ್ಯುತಿಯಿಂ ||
ಘಟಿಯಿಸಿದ ಪುಂಡ್ರಮೊಳ್ಪಂ |
ಘಟಯಿಸುಗುಂ ಪಡೆವರಾರ್ ಸಿತಪ್ರಾವೃತಮಂ || ೭ ||

1 ಗದಹೇಷಿತ ವಜ್ಛವಿಗ. 2 ಪ್ರತಾನದಿಂತಾವರೆಗಂ. 3 ಪುಟ್ಟಪರಿಯ ಪುಂಡ್ರಾತ್ಪನುಮಂ.

(೧. ಪುಂಡ್ರಲಕ್ಷಣಂ)

ಕಂ|| ಆನನ ಶಿರಃಪ್ರದೇಶದೊ |
ಳೇನುಂ ಬೆಳ್ಪಿಲ್ಲದಿರ್ದ ಘೋಟಾನನ ಸು ||
ಸ್ಥಾನದೊಳೆ ಬೆಳ್ಪು ಪುಟ್ಟಿದೊ |
ಡೂನೈಸದೆಯಾಳಲಾಗದಭಿನವಚಂದ್ರಾ || ೮ ||

ಶಿರಿ ಮುರಿ(ರ)ಕನಾಗಿ ಸೈತಾ |
ಗಿರದುಱಗಂಬೋಗಿ ಬಿಟ್ಟಿ ಬಾಗಿ ಲಲಾಟಾಂ ||
ತರದೊಳೆಡೆವಱಿದು ಪುಂಡ್ರಮ |
ದಿರಲಾಗಳೆ ಹಾನಿಯಕ್ಕುಮಭಿನವಚಂದ್ರಾ || ೯ ||

*ಸುತರಂ ಪಡೆಗುಂ ಪುಂಡ್ರಂ |
ಸುತಪುಷ್ಪದ್ಯುತಿಯೆ ಪಲವುಮೊಗೆದೊಡಂ ಕೇಳ್ ||
ಸಿತವೊಂದು ಕೋಶದೊಳ್ ಪತಿ |
ಗತಿಸೌಖ್ಯಮನಿತ್ತು ಭಾಗ್ಯವಂತನೆನಿಕ್ಕುಂ || ೧೦ ||

(೨. ಪುಷ್ಪಲಕ್ಷಣಂ)

ಸೇನಾಪತಿತ್ವದ ಮಹಿ |
ಮಾನಂ ಪತಿಗಕ್ಕುಮಶ್ವ ಸಮಿತಿಯ [1]ನಾಭೀ ||
ಸ್ಥಾನದೊಳಂ ಪುಷ್ಪಂಗಳ |
ನೂನಂ ಬೆಳಗುವೊಡೆ ಕುಂದಕುಸುಮದ ತೆಱದಿಂ || ೧೧ ||

ತುರಗದ ಮೆಯ್ಯೊಳ್ ಪುಷ್ಪಂ |
ಕರಿದಾದಂದಶುಭಮಾವ ಬಣ್ಣದೊಳಂ ಪಾಂ ||
ಡರಮಾದೊಡೆ ಶುಭಮದನಾ |
ದರಿಪುದು ಪರಿಹರಿಪುದಸಿತಪುಷ್ಪಾದಿಗಳಂ || ೧೨ ||

ಗ್ರೀವಾ ಮನ್ಯುವಹಸ್ಥಾ |
ನಾವಿಳಸಿತಪುಷ್ಪ ಸಮಿತಿಶ(ಸ)ರಸಮಿತಿಗಳಿಂ ||
ನೋವಕ್ಕೆಂತು(ದು)ಂ ನಿಜಪತಿ |
ಗಾ ವಾಜಿಯನೇಱಲಾಗದುಗ್ರಾಹವದೊಳ್ || ೧೩ ||

§ಸಪ್ತಾಹಂಗಳೊಳಂ ಮಿಗೆ |
ಸಪ್ತಮ ಪಕ್ಷದೊಳಮಾಗು ಮೆಂತಾದೊಡೆಯುಂ ||
ಸಪ್ತಮಮಾಸದೊಳೆನಸುಂ |
ಸಪ್ತಾಬ್ದದೊಳೆಂತುಮಾಗು ಮಧಿಪಗೆ ಫಲಮಂ | || ೧೪ ||

1 ಯನಿಂಬೆಸ್ಥಾನಕದೊಳ್.
* ಸುತನುಂ ಪಡೆಗುಂ (ಪಟ್ಟ) ಪುಷ್ಯ। ಪ್ರತತಿಗಳಾದಂದು ಕೋಶದೊಳ್ ತಿಳಪುಷ್ಪಂ ॥
ಗತಮಾಗಿನಿಂದ ತುರಗಂ (ದ) । ಪತಿಗೆ (ಱಕ) ಕರಂ ಪಿರಿದುಮೊಂದು ಸೌಭಾಗ್ಯಕರಂ ॥ ೭೦ ॥
§ ಸಪ್ತಾಹದೊಳಗೆ ಪುಷ್ಪ । ಪ್ರಾಪ್ತಿ ಫಲಾಫಲಮನೀಗು ಮಂತೀಯದೊಡಂ॥

(೩. ಗಂಧಲಕ್ಷಣಂ)

ಕಂ|| ನೇತ್ರಂ ವದನಂ ಕರ್ಣಂ |
ಗಾತ್ರಂ ಘ್ರಾಣಂ ಗುದಂ ಪುರೀಷಂ ಸ್ವೇದಂ ||
ಮೂತ್ರಮಿವಱಿಂದೆ ಗಂಧಂ |
ಚಿತ್ರವಿಧಂ ಪುಟ್ಟುಗುಂ ಪರೀಕ್ಷಿ[1]ಕೆ ವಿಬುಧರ್ || ೧೫ ||

ಇಕ್ಷುರಸಂ ಪೊಸತುಪ್ಪಂ |
ಗೋಕ್ಷೀರಂ ಶಾಲಿತಂಡುಲಂ ಮಧುಮಧುರಂ ||
ದ್ರಾಕ್ಷಾ ಸಮಾನ ಗಂಧದ |
ಲಕ್ಷಣಯುಕ್ತಂಗಳಿನಿತುಮುತ್ತಮಗಂಧಂ || ೧೬ ||

ಅಂಬುರುಹದ ಕಣಿಗಿಲೆಯ ಕ |
ದಂಬದ ಕುವಲಯದ ಜಾತಿಯಲರ್ಗಳ ತಣ್ಗಂ ||
ಪೆಂಬಿನಿತಱ ಗಂಧಮನವ |
ಲಂಬಿಸಿದೊಡೆ ಹರಿ ಜಯಾವಲಂ[2]ಬಿಯುದಕ್ಕುಂ || ೧೭ ||

ಬಾಳಂ ಮಲಯರುಹಂ ಕ |
ಬ್ಬಾರ್ಳಂ ಕೋಷ್ಠಂ ಖಜೋರಮೇಲೆ ಲವಂಗಂ ||
ಕಾಳಾಗುರುಗಂಧಂಗ |
ಳ್ಗಾಳಯಮಾದಂದು ವಾಹಮುತ್ಸಾಹಕರಂ || ೧೮ ||

ಆಸವದಾಭ್ರದ ಫಣಿಯ ನಿ |
ವಾಸದ ನೆಲ್ಲರಳ ಬೆಲ್ಲವತ್ತ್ರದರಿಷ್ಟಾ ||
ಭಾಸದ ಮದ್ಯದ ಪಲಸಿನ |
ವಾಸನೆ ನಿಶ್ವಾಸಮೆನೆ ಹಯಂಗಳ್ ಶುಭದಂ || ೧೯ ||

ಅವಗಾಹದೊಳಂ ಮೆಯ್ಕ |
ರ್ಚುವೆಡೆಯೊಳಂ ನೋಡೆ(ಡಿ) [3]ನಾಡೆ ಮೆಯ್ಯಿಂದಂ ಪೊ ||
ಣ್ಮುವ ಗಂಧಂ ಪದ್ಮದಳ |
[4]ದವನವುಮಂ ಪೋಲೆ ಹಯಮದುತ್ತಮಮಕ್ಕುಂ || ೨೦ ||

ಸೂಕರದ ಗಜದ ಶರಭಾ |
ನೀಕದ ಪೋಂತಿನ ವಿಗಂಧ ಬಂಧುರ ವಿಣ್ಮೂ ||
ತ್ರಾಕಾರ ಗಂಧದ ಶ್ವಾ |
ನೀಕಂ ಭಯಹಾನಿಶೋಕರುಜ್ಮರಣಕರಂ || ೨೧ ||

1 ಸುಗೆ ಬುಧರ್. 2 ಬನಮಕ್ಕುಂ. 3 ನಾದಂ ನೆಲದೆಂದಂ ಪೊ || ಣ್ಮುವ ಗಂಧದಂತೆ ಕಣ್ಣಂ | ಪುವಾಜಿಯುಂ ಪೊಣ್ಮೆ ಚಕ್ರವರ್ತಿಗೆ ಯೋಗ್ಯಂ || 4 ದವಕಾರಂ.

ಕಂ|| ಬಿಸುನೆತ್ತರ ವಿಾಂಬೊಲಸಿನ |
ಮಸಕದ ಸುಂಡಿಲಿಯ ಕಱಿಯ ಗೋಚರ್ಮದ ಲೋ ||
ಯಿಸರದ ಮತ್ತರಿದಾಳದ |
ಬಸೆಯಂದದ ಗಂಧಮೆಸೆವೊಡಶುಭಂ ತುರಗಂ || ೨೨ ||

ತುರಗಕ್ಕೆ ಸುಸ್ವರಂ ದು |
ಸ್ಸ್ವರಮೆಂಬಿವನಱಿಯೆ ಪೇಟ್ವೆ[1]ನಾವಾಜಿಯನು ||
ದ್ಧರಿಕು ಹಯಪ್ರಾಣಂ ರೋ |
ಮರಾಜಿ ವಿಡಿದಡರೆ ಸಲ್ಗುಮುರದಿಂ ಕೊರಲಿಂ || ೨೩ ||

(೪. ಧ್ವನಿಲಕ್ಷಣಂ)

ಅದಱುಣ್ಮಿದ ನಯದಿಂದಂ |
ಹೃದಯಂ ವಕ್ಷಂ ಕೊರಲ್ ಶಿರಂ [2]ನಿರ್ಭರದಿಂ ||
ಬಿದಿರ್ದೊಡೆ ಕೇಸರ ಪೊಱಮಡೆ |
ಕುದಿರೆಗೆ [3]ಹೇಷಿತಮುಮಾಯ್ತು ಮುನಿ[4]ಭಾಷಿತದಿಂ || ೨೪ ||

ಘನಮಪ್ಪುದು ಗಂಭೀರ |
ಸ್ವನಮಪ್ಪುದು ತೇರಿತಪ್ಪುದುತ್ಸಾಹೊನ್ಮೀ ||
ಲನಮಪ್ಪುದು ಹೇಷಿತಮದು |
ಧನಕನಕಸಮೃದ್ಧಿ ಮಾಡಲಾರ್ಕುಂ ಜಯಮಂ || ೨೫ ||

ಮದಗಜದ ಮುಗಿಲ ಶಾರ್ದೂ |
ಲದ ಕೊಂಚೆಯ[5] ರವದ ಪಱೆಯ ಶಂಖದ ಪುಣ್ಯಾ ||
ಹದ ವೃಷಭದಿಭವಿರೋಧಿಯ |
ವಿದಿತ ಸ್ವರ ಸದೃಶ ನಾದಮಾದುದು ಶುಭದಂ || ೨೬ ||

ಸೂಕರದ ಖರದ ಕರಭಾ |
ನೀಕದ ಬಳ್ಳುವಿನ ನರಿಯ ಬೆಕ್ಕಿನ ಕಾಕೋ ||
ಲೂಕಂಗಳ ಶುನಕ ಸ್ವರ |
ದಾಕಾರದ ಸರದ ವಾಜಿಕರಮಶುಭಕರಂ || ೨೭ ||

ತನುಗತಿ ಶಿರಸೋದ್ಗತ ತ |
ಜ್ಜನಿತ ತನುಚ್ಛಿನ್ನ ಘೋರಕಠೋರ ||
ಸ್ವನಮಿವು ಕರಮಶುಭ |
ಸ್ವನಂ ಶುಭಸಹಿತಮಿವು ಶುಭದಹಿತಂ ಶುಭದಂ || ೨೮ ||

1 ನಾನಱಿದನಿತಂ || ಮುರಿವೊಡೆ ಮೊದಲೊಳ್ ರೋ | ಮರಾಜಿಗೆಳರುತರಮಾಗಿರಲ್ ಶುಭದಮಭಿನವ ಚಂಪ್ರಾ|| 2 ಪುರ್ಬುರದಿಂ. 3 ಪೆಂಮಿತ. 4 ಭಾವಿತ. 5 ಯಂಚೆಯ.

ಕಂ॥ ಪಸಿದಿರ್ದುದು ನೀರಡಸಿದು |
ದು ಸುಖಾತುರನೇಱುವಡೆದುದಧ್ವಾನದೊಳಂ ॥
ಬಸವಳಿವುದು ಬಾಳಂ ಕ್ಷೀ |
ಣಿಸಿದುದು ವೃದ್ಧಂ ಸಮಾನಲಕ್ಷಣರಹಿತಂ ॥ ೧೯ ॥

(೫. ಸತ್ವಗುಣಂ)1

ಶ್ರೇಷ್ಠಂ ಮಧ್ಯಮನಂತೆ ಕ |
ನಿಷ್ಠಂ ಸತ್ವಂಗಳಕ್ಕುಮಲ್ಲಿಯೆ ಮೇಣಾ ॥
ಶ್ರೇಷ್ಠಂ ಮಧ್ಯಮಮಾಱು ಕ |
ನಿಷ್ಠಂ ಮೂಱಿಂದು ಷೋಡಶಂ ಸತ್ವಗುಣಂ ॥ ೨೦ ॥

ಭೀತಮನಂ ಚಪಲಂ ಕಾ |
ಮಾತುರನತ್ಯಶನಕಾಂಕ್ಷಿತಂ ಖಗಸತ್ವಂ ॥
ಭೀತಂ ಕ್ಷುಧಾರ್ದಿತಂ ತೃ |
ಷ್ಣಾತುರನತಿದೈನ್ಯರೂಪಿ ಪಶುಸತ್ವ ಹಯಂ ॥ ೨೧ ॥

ಭೀರು ಚಲಪ್ರಕೃತಿ ಜಲಾ |
ಹಾರಂ ಪ್ರಿಯವಾದಿ 2ಮರ್ತ್ಯಸತ್ವಂ ನಿದ್ರಾ ॥
ಪೂರಿತ ನಯನಾಲಸ್ಯಂ |
ಭೂರಿಧ್ಯಾನಸ್ಥನಾಗೆ ಭೈರವಸತ್ವಂ* ॥ ೨೨ ॥

(೬. ಗತಿಲಕ್ಷಣಂ)

ಗತಿಲಕ್ಷಣಮೆಂಬುದು ಕರ |
ಮತಿಶಯಮುಮದಱೊಳ್ ಶುಭಾಶುಭಂಗಳಾನತ ॥
ಗತಿಯಿಂದಮಕ್ಕು ಮದಱಾ |
ಕೃತಿಯನತಿವ್ಯಕ್ತಮಾಗಲಭಿವರ್ಣಿಸುವೆಂ ॥ ೨೩ ॥

ಬೆರಸದ ಖುರಮೊಂದಱೊಳೋ |
ಸರಿಸದ ಕಾಲಳಿದ ಬೆನ್ನಡಂಗಿದ ಜಘನಂ ॥
ತರದೊಳುಡುಗಿರ್ದ 3ಬಾಲಂ |
ಕೊರಲುನ್ನತವಕ್ಷಮೆಸೆವ ಲಯಗತಿ ಶುಭದಂ ॥ ೨೪ ॥

ಆನೆ ಕರಭಂ ನವಿಲ್ ಪುಲಿ |
ಧೇನು ವೃಷಂ ಹಂಸಿ ಚಕ್ರವಾಕಂ ಸಿಂಹಂ ॥
ವಾನರಮೆಂಬಿನಿತಱ ಗ |
ತ್ಯಾನೂನ ತುರಗದ ಗತಿಯೊಳಂತತಿ ಶುಭದಂ ॥ ೨೫ ॥

1 ಗತಿ ಲಕ್ಷಣಂ—ಎಂದು ಒಂದು ಪ್ರತಿಯಲ್ಲಿದೆ. 2 ಮತ್ಸ್ಯ, ವತ್ಸ್ಯ. 3 ಬಾಲದ.

* ಇಲ್ಲಿಗೆ ಪದ್ಯ ಸಂಖ್ಯೆ ೬೩ ಎಂದಿದ್ದು, ಮುಂದೆ ೧ ರಿಂದ ಶ್ಲೋಕ ಸಂಖ್ಯೆ ಗುರ್ತಿಸಲ್ಪಟ್ಟಿದೆ.

ಕಂ॥ ಕೆತ್ತುವೊಡಂ ಮುಖಮುಂ ಕರ |
ಮೆತ್ತುವೊಡಂ ಬಲಿದು ನಲಿದು ಬಿಡದೆಡಹುತ್ತುಂ ॥
ಕುತ್ತುವಿಡುವೊಡಮಾಗತಿ |
ವಿತ್ತಹರಂ ಭ್ರಷ್ಟವಂಗನತಿಕರ ಕಷ್ಟಂ ॥ ೨೬ ॥

ಪದಿನಾಱುಮಾತ್ರೆ ಯೆಯ್ದುವ |
ಪದದೊಳ್ ಪರಿದುಂದ ನಶ್ವತಾವದಿಯುಂ? ಮ ॥
ತ್ತದನಂತೆ ಮಗುಳ್ದು ಮತಿಮೆ |
ನದತ್ಯುತ್ತಮ ಜವದ ತುರಗ ಮಭಿನವಚಂದ್ರಾ ॥ ೨೭ ॥

ಇಪ್ಪತ್ತುನಾಲ್ಕು ಮಾತ್ರೆಗೆ |
ಬರ್ಪುದು ಮಧ್ಯಮಜವಂ ತದಷ್ಟಾಧಿಕದಿಂ ॥
ಬರ್ಪುದು ಕನಿಷ್ಠ ಜವಮೆಂ |
1ಬರ್ ಪೂರ್ವಾಚಾರ್ಯರ ನುಡಿಗಳ್ ತಪ್ಪುಗುಮೇ ॥ ೨೮ ॥

ಕರದಿಂ ಪ್ರದಕ್ಷಿಣಂ ಬಲ |
ವರಿಕುಂ ಮೊಱಕಾಲನಲ್ಲದಂದು ಸಮಾನಾ ॥
ಕ್ಷರಮೊಂದಂ ಮನದಿಂದು |
ಚ್ಚರಿಸಿದೊಡದು ಮಾತ್ರೆಯೆಂಬ ಪೆಸರಂ ಪಡೆಗುಂ ॥ ೨೯ ॥

ಸತ್ವಯುತಂ ಸ್ನಿಗ್ಧಾ ಗುರು |
ಹತ್ವಂ ಗ(ದಿ)ತಿ ಶಾಲಿ ಬುದ್ಧಿವಂತಂ ಶಬ್ದಾಂ ॥
ಕ ತ್ವರಿತನ ನಿಗ್ರಹ ನತಿ |
ಸತ್ವ ನರತ್ರಾಸಿಕಂ ಹಯಂ ಭದ್ರಾಕ್ಷಂ ॥ ೩೦ ॥

ರೋಮಾಜಿನ ಕುಷ್ಠಿಕೆಗಳ್ |
ಕೋಮಲವತಿರಭಸ[ವೇಗಮಾನ] ವಿಲಾಸೋ ॥
ದ್ದಾಮಂ ದಂಡನಿರಕ್ಷಣ |
ರಾಮಸಸಂ ವಿಷಮಮಾನ ನಯನೋತ್ಥಾನಂ ॥ ೩೧ ॥

ಪ್ರಾಜನ ಶಬ್ದಾಕಾಶನ |
ಯೋಜನೆಯೊಳ್ ಸೂಕ್ಷ್ಮವೇದಿ ಭೀತಂ ತೀವ್ರಂ ॥
ತೇಜಸ್ವಿ ಹರಿಣ ಜಂಘಾ |
ರಾಜಿತಮೆನಿಸುವ ತುರಂಗಮಂ ತೀಕ್ಷ್ಣ ಹಯಂ ॥ ೩೨ ॥

1 ಮೆಂ। ಬೆಪ್ಪಾಧ್ಯಾಚಾರ್ಯನುದಿರ ಮಪ್ಪುಗುಮೇ.

ಕಂ|| ವೃಗ ಜಂಘೆ ವೃಗ ವಿಲೋಚನ |
ವೃಗಸೌಷ್ಠವ ವೃಗಸಮಾನಲಂಘನದಿಂದ ||
ದ್ರಿಗಳ ನಡೆಪಾಗಿ ಜಂಘೆಯ |
ಮಿಗೆ ತೀಕ್ಷ್ಣಂ ವಿಷಮರಸಮೆನಿಪ್ಪುದು ತುರಗಂ || ೪೩ ||

ಸ್ಥೂಲಾಜಿನ ಕುಷ್ಠಿಕೆ ರೋ |
ಮಾಳಿಗಳಂ ಸ್ಥೂಲದೇಹನತ್ರಾಣ ಜಡಂ ||
ವ್ಯಾಳಗಮನಂ ವಿನಿಗ್ರಹ |
ವಾಳಜನೆನೆ ವಾಜಿ ಮನ್ನನಭಿನವಚಂದ್ರಾ || || ೪೪ ||

(೭. ಛಾಯಾಲಕ್ಷಣಂ)

ಲಕ್ಷಣ ಮೆನಿತನಿತಱಿಕೊಳುಪ |
ಲಕ್ಷಿಸಿ ವಿವಿಧಪ್ರಕಾರದಿಂದಂ ಛಾಯಾ ||
ಲಕ್ಷಣಮನಱಿದು ನೋಡಿಯ |
ಪೇಕ್ಷಿಸುವುದು ಪಂಚವಿಧದಿನಭಿನವಚಂದ್ರಾ || ೪೫ ||

ತೋಯಂ [1]ವಸುಂಧರಾಗ್ನಿ |
ಚ್ಛಾಯಾತ್ರಿತಯಂಗಳುತ್ತಮಂ ಪವನನಭ ||
ಚ್ಛಾಯೆಗಳೆಂದುಂ ವಾಜಿಗ |
ಸಾಯುಷ್ಯಕರಂ[ಕರಂ] ಮಹಾದೋಷಕರಂ || ೪೬ ||

ನಾನಾವರ್ಣದೊಳವಿಚ್ಛಿ |
ನ್ನಾನನದಸ್ನಿಗ್ಧ ಬಹುಳರುಚಿ ಭಾವಿಪೊಡಂ ||
ತಾನಧಿಕವಾಗಿ ದೇಹ |
ಸ್ಥಾನಕದೊಳ್ ನೆಗಱೆ ಧಾರಿಣೀಚ್ಛಾಯ ಹಯಂ || ೪೭ ||

[2]ತಿಳಿಗೊಳನ ಬಿಳಿಯ ತಾವರೆ |
ಯಲರ್ಗಳ ಗೊಂದಣಿ(ಳಿ)ಪ ಕಾರ್ಮುಗಿಲ್ಗಳ ರುಚಿಯಂ ||
ತಳೆದು ಥಳಥಳಿಸಿ ತೊಳಿತೊಳ |
ತೊಳಗುತ್ತಿರ್ಪಂದು ಧಾರಿಣೀಚ್ಛಾಯಿ ಹಯಂ || ೪೮ ||

ಪವಳದ ಕಾಂಚನದುದಯಿಪ |
ರವಿಬಿಂಬದ ಪದ್ಮರಾಗದರನೇಱಲ ಬ ||
ಣ್ಣವ ನಿಲಿ(ಲಿ)ಸಿ ದೀಪ್ತ ಮಂದ |
ಚ್ಛವಿ ಮಿಱುಮಿಱುಮಿಱುಗೆ ಪಾವಕಚ್ಛಾಯ ಹಯಂ || ೪೯ ||

1 ಯ ವಿಷದ ಸೌಂರಾಗ್ನಿ. 2 ೧೫–೧೬ ಈ ಎರಡರಲ್ಲೂ ಧಾರಣೀಚ್ಛಾಯೆಯ ಹಯಲಕ್ಷಣ ಹೇಳಿದೆ, ಉಳಿದ ಛಾಯೆಗಳ ಲಕ್ಷಣವು ಒಂದೊಂದು ಕಂದದಲ್ಲಿ ಮಾತ್ರ ಹೇಳಿದೆ.

ಕಂ|| ರೋಮಮೊಡೆಗು ಕರಂ ಕಡು |
ರೋಮಂಗಕ್ಕುಂ ತಳಚ್ಛವಿಪ್ರಕಟನದಿಂ ||
ತಾಮಸ ಹರಿಸಮ ನೋಡುಗು |
ಮಾಮಾರುತರುಚಿ ಹಯಂಗಳೊಳ್ ಕರಮಶುಭಂ || ೫೦ ||

ಅವ್ಯಕ್ತ ಚಪಲ ತನುರೂ |
ಕ್ಷ ವ್ಯಾಪಕದಿಂ ಶರೀರದೊಳ್ ವಿಚ್ಛವಿಗಳ್ ||
ಸುವ್ಯಕ್ತಮಾಗಿ ತೋಱುವೊ |
ಡಾವ್ಯೋಮಚ್ಛಾಯೆ ಹರಿ ಕನಿಷ್ಠಮನಿಷ್ಟಂ || ೫೧ ||

ತುರಗನಿವಹಕ್ಕೆ ನೊಸಲೊಳ್ |
ನಿರುತಮಲಂಕರಿಸೆ ಮೂಱುಸುೞಿ ನೀಳದೊಳಾ ||
ಗಿರೆ ನಿಶ್ರೇಣಿಕ ಮೆಂಬುದು |
ಕರಮುಸುಖಂ ವಾಜಿ ಪೂಜ್ಯನಭಿನವಚಂದ್ರಾ || ೫೨ ||

ಸ್ಥಾನಂ ಭಾವಿಸೆ ಸುಪ್ತ |
ಸ್ಥಾನಂ [1]ವ್ಯಕ್ತಾವಸಾನವೆಂಬೀ ನಾಲ್ಕುಂ ||
ಸ್ಥಾನದೊಳುಪಲಕ್ಷಿಸುಗುಮ |
ನೂನ ಶುಭಾಶುಭ ಫಲಪ್ರದಚ್ಛಾಯೆಗಳುಂ || ೫೩ ||

ಖರ ಕಿರಣಾದಿಗಳಂ(ಳಿಂ) ಜಲ |
ಧರ ಪಟಲಂ ಮುಚ್ಚುವಂತೆ ಲಕ್ಷಣನಿಚಯ ||
ಸ್ಫುರಣೆಗಳಂ ಪ್ರಚ್ಛಾದಿಸಿ |
ತುರಗಚ್ಛಾಯೆಗಳೆ ಬೆಳಗುಗುಂ ನಿಜಗುಣಮಂ || ೫೪ ||

ಇದು ಪುಂಡ್ರ ಪುಷ್ಪ ಗಂಧಾ |
ದ್ಯುದಾತ್ತ ಹೇಷಿತ ಗತಿಪ್ರಭಾವ ವರ್ಣಮನಿತ್ತುಂ ||
ಮುದನುಂ ಬುಧಸಮಿತಿಗೆ ಮಾ |
ಱ್ಪುದು ಚಂದ್ರನ ಮತದೆ ತತ್ತೃತೀಯಾಧ್ಯಾಯಂ || ೫೫ ||

ಇಂತು ತೃತೀಯಾಧ್ಯಾಯಂ.

---

1 ವ್ಯತ್ಯಾವಸಾನ, ವ್ಯಕ್ತಾಸಾನ.

ಚತುರ್ಥಾಧ್ಯಾಯಂ

ಆವರ್ತಾಧ್ಯಾಯಂ

(ಸುೞಿಗಳ ಭೇದಲಕ್ಷಣಂಗಳ್)

ಕಂ॥ ಧ್ರುವಮನ್ಯಂ ಶುಭಮೆಂದ |
ಪ್ಪುವು ಸುೞಿಗಳ್ ನೂಱು ಭೇದದಿಂದಂ ತುರಗ ॥
ಕ್ಕವಯವದಿಂದಂದೊಳವ |
ಪ್ಪುವುಮಷ್ಟವಿಧಂ ಸ್ಥಾನಕಮವರ್ಕೆ ನೂಱಱಕ್ಕುಂ ॥ ೧ ॥

ಪತ್ತಾವರ್ತಂ ಧ್ರುವಮೆ |
ಟ್ಟಿತ್ತೞಾವರ್ತಮಶುಭಮಾವರ್ತಂ ॥
ಮತ್ತೇೞು ಶುಭಂ ನೂಱಿ |
ಪ್ಪತ್ತಱವು ರೋಮಜವಜ್ರಂಗಳೆನಿಕ್ಕುಂ ॥ ೨ ॥

ಉರದೊಳ್ ಶಿರದೊಳ್ ರಂಧ್ರೋ |
ಪರಂಧ್ರದೊಳ್ ಸುೞಿಗಳಕ್ಕು ಮೆರಡೆರಡೊಂದೊಂ ॥
ದೆರಡೆಡೆಯೊಳಮಂತಕ್ಕುಂ |
ತುರಗದ ನೊಸನೊಳ್ ಪ್ರಪಾನ ಸಂಸ್ಥಾನಕದೊಳ್ ॥ ೩ ॥

ಧನಮಂ ನಾನಾವಿಧ ಭೋ |
ಜನಮಂ ನಿಜಪತಿಗೆ ಮಾಡುಗುಂ ಸ್ವಕ್ಕಿಣಿಯೊಳ್ ॥
ಜನಿಯಿಸಿ ದಾವರ್ತದ ತುರ |
ಗನಿಕಾಯಂ ಪತಿಹಿತಂಗಳಭಿನಚಂದ್ರಾ ॥ ೪ ॥

ನೊಸಲೊಳ್ ಪ್ರದಕ್ಷಿಣಂ ರಂ |
ಜಿಸುವಾವರ್ತ ದ್ವಯಂಗಳುಳ್ಳೊಡೆ ತುರಗಂ ॥
ವಿಸಸನದೊಳಹಿತರಂ ಮ |
ರ್ದಿಸುಗುಂ ನಿಜಪ[1]ತಿಗೆ ಜಯಮನನುಬಂಧಿಸುಗುಂ ॥ ೫ ॥

ನೊಸಲೊಳ್ ನಾಲ್ಕಾವರ್ತಂ |
ಪಸರಿಸಿ ಚತುರಸ್ರವಾಗಿ ನಾಲ್ಕೆಡೆಯೊಳ್ ರಂ ॥
ಜಿಸಿ ಸಮನಾಗಿರೆ ಲೋಕ |
ಪ್ರಸಿದ್ಧನಂ ಸುಜನಸುತನನಧಿಪತಿ ಪಡೆಗುಂ ॥ ೬ ॥

1 ತಿಗಂ.

ಕಂ॥ ಸಂತೋಷಕರಂಗಳ್ ಮಿಗೆ |
ಶಾಂತದ ಸುೞಿಗಳ್ ಹಯಕ್ಕೆ ಹಸುಕಂಠಸ್ಥಾ ॥
ನಾಂತರದಾವರ್ತಂ ರಿಪು |
ಸಂತತಿಯಂ ತವಿಸಿ ಪತಿಗೆ ಜಯಮಂ ಮಾೞ್ಕುಂ ॥ ೭ ॥

ಉರದೊಳ್ ನಾಲ್ಕಾವರ್ತಂ |
ಸುರವಕ್ಕವಮೂರ್ಧ್ವರೋಮದಿಂದಂ ಸ್ಥಿತಾ ॥
ಗಿರೆ ಜಯಮಲ್ಲಿಯೆ ನಾಲ್ಕಾ |
ಗಿರೆ ನಾಲ್ಕುಂದೆಸೆಗೆ ಜಸಮನವು ಪಸರಿಸುಗುಂ ॥ ೮ ॥

ಅಂತಾ ನಾಲ್ಕಾವರ್ತದೆ |
ಮುಂತೆಸೆದಿರೆ ರೋ(ಲೋ)ಚಮಾನಮುದಱಂ ಶ್ರೀ ವೃ ॥
ಕ್ಷಂ ತುರಗದ ಪೆಸರದನಾ |
ಳ್ದಂ ತಾಳ್ದುಗುಮಖಿಲಲಕ್ಷ್ಮಿಯಂ ನಿಶ್ಚಯದಿಂ ॥ ೯ ॥

ಅಂಗವಿದೆಯೆಂಬ ಪೆಸರ ತು |
ರಂಗದ ಬಾಹುಗಳೊಳಾದ ಸುೞಿ[1]ಗಳನಿತ್ತುಂ ॥
ಮಂಗಲವಸ್ತ್ರಾಭರಣಚ |
ಯಂಗಳನಧಿಪತಿಗೆ ಮಾೞ್ಕುಮಭಿನವಚಂದ್ರಾ ॥ ೧೦ ॥

ಉಪರಂಧ್ರಾವರ್ತಂಗಳೊ |
ಳುಪರಿಸ್ಥಿತವಾಗಿ ತೋರ್ಪ ಸುೞಿ ಮೇಖಲೆಯಂ ॥
ತುಪಲಕ್ಷಿಸಲದು ಮಾೞ್ಪುದು |
ವಿಪುಳಶ್ರೀಕರಣಮೆಂಬುದಭಿನವಚಂದ್ರಾ ॥ ೧೧ ॥

ಉರದೆಡೆಯೊಳಂ ಲಲಾಟಾಂ |
ತರದೊಳಮೊಂದೊಂದೆ ಸುೞಿಗಳಾದಂದು ಮನೋ ॥
ಹರಕಾರ್ಯಸಿದ್ಧಿಯಕ್ಕುಂ |
ತುರಗಮನದನಾಳ್ವುದೆಂದನಭಿನವಚಂದ್ರಾ ॥ ೧೨ ॥

ತುರಗಕ್ಕೆ ಶುಭಾವರ್ತೋ |
ತ್ಕರಮೆನೆ ಪತ್ತೞು ಪುಟ್ಟುಗುಂ ಪತ್ತುದಿಶಾಂ ॥
ತರದೊಳ್ ಪತ್ತುಂ ಕ್ಷೇತ್ರಾಂ |
ತರದೊಳನುಕ್ರಮದೆ ಪೇೞ್ದನಭಿನವಚಂದ್ರಂ ॥ ೧೩ ॥

1 ಸುೞಿಗಳಕ್ಕುಂ.

A—4

ಕಂ|| ಮರಣಂ ಜನನಿಗೆ [1]ಹಯದು |
ತ್ತರೋಷ್ಠದೊಳ್ ಸುೞಿಗಳ್ಗೆ ತಂದೆಗೆ ಮರಣಂ ||
ದೊರೆಕೊಳ್ಗುಮಾ ಪ್ರಪಾಣೋ |
ಪರಿಯೊಳ್ ದಕ್ಷಿಣದೊಳಾದೊಡಾವರ್ತಂಗಳ್ || ೧೪ ||

ವಾಮಪ್ರದೇಶದೊಳ್ ಭ್ರಾಂ |
ತೇ ಮರಣ ಮನ್ಯದೇಶದೊಳ್ ಪತಿಗೞಿವಂ ||
ಸ್ವಾಮಿಗೆ ಕುಲನಾಶನಮಂ |
ರೋಮರುಹಂ ಪ್ರೋಥದಲ್ಲಿಯಾದೊಡೆ ಮಾೞ್ಕುಂ || ೧೫ ||

ನಾಸಾಪುಟದೊಳ್ ವಿತ್ತವಿ |
ನಾಶನಮಂ ಕದಪಿನೆಡೆಗಳೊಳ್ ಪತಿಗೞಿವಂ ||
ನಾಸಾವಂಶದೊಳಂತಕ |
ವಾಸಮನಾ ಪತಿಗೆ ಮಾೞ್ಕುಮಾವರ್ತಂಗಳ್ || ೧೬ ||

ಮೂಗೞಲಂದುಃಖಮನಿರ |
ದಾಗಿಸುಗುಂ ತುರಗದಶ್ರುಪಾತದ ಸುೞಿ ವೈ ||
ರಾಗಂ ಬಂಧುಪ್ರೀತಿ ವಿ |
ಯೋಗಂ ಭೂಜಾತರೋಮ[2]ರಾಜಿಯಿನಕ್ಕುಂ || ೧೭ ||

ಹನುಮಧ್ಯದೊಳಾಕಕ್ಷಾ |
ಸನಮಸ್ತಕಸಂಧಿ ಕೂರ್ಜೆ ಕಟಿ ಸಂಕುಲದೊಳ್ ||
ಜನಿಯಿಸಿದಾವರ್ತಂ ಪತಿ |
ಗನವರತಂ ಹಾನಿಶೋಕಭಯಮುಮಂ ಮಾೞ್ಕುಂ || ೧೮ ||

ಕರ್ಣಂಗಳ ತುದಿಯೊಳ್ ಸುೞಿ |
ನಿರ್ಣೀತಂ ತೋಱೆ ಪತಿಗೆ [3]ಮಂತ್ರಿಗಮಾರ ||
ಭ್ಯರ್ಣದೊಳಕ್ಕುಂ ಮರಣಂ |
ಸ್ವರ್ಣದ ಕರ್ಬುನದ [4]ಮಂದಸಂ ಪುಗಿಸಿದೊಡಂ || ೧೯ ||

ಉದಯಿಸೆ ಸುೞಿಗಳ್ ತುರಗದ |
ಬಿದು ಸಂಸ್ಥಾನಕದೊಳರ್ಥಹಾನಿಯನವು ಮಾ ||
ಡದೆ ಮಾಣವು ತದ್ದಳಮ |
ಧ್ಯದ ಸುೞಿಗಳ್ ಕ್ಷುಧೆಯೊಳಧಿಪನಂ ಮಱುಗಿಸುಗುಂ || ೨೦ ||

1 ಪಾಯಡತ್ತ. 2 ರಾಜದಿನಕ್ಕುಂ. 3 ಮಂತ್ರಂಗಾರ. 4 ಮಂದಮುಂಸಂಪುಗಿ.

ಕಂ|| ಹೃದಯದೊಳಂ ಕ್ರೋಡದೊಳಂ |
ಕುದಿರೆಗೆ ಸುೞಿಯಾಗೆ ಕೊಲ್ಗು(ಳ್ಗು)ಮಧಿಪತಿಯಂ ಧು ||
ರ್ಯದ ನಡುವಣ ಸುೞಿಗಳ್ ಕೊ |
ಲ್ಲದೆ ಮಾಣ್ಗುಮೆ ಪತಿಯನವನ ಸುತಸಂತತಿಯಂ || ೨೧ ||

ಆವುದಱಿಂ ಕುದಿರೆಗೆ ಕಕು |
ದಾವರ್ತಂ ತೋಱಿದಂದು ಮಹದೋಷಕರಂ ||
ಭಾವಿಪೊಡನ್ವಯಸಹಿತಂ |
ಸಾವಕ್ಕುಂ ಸತಿಗೆ ಪತಿಗೆ ನಿಶ್ಚಯದಿಂದಂ || ೨೨ ||

ಮಣಿಮೊದಲಾಗಿರೆ ವಾಹನ |
ಗಣಮಂ ಮನೆಯೊಳಗೆ ನಾಂಟಲಣಮೀಯದು ಧಾ ||
ರಿಣಿಯಂ ಪಾೞ(ಲಿ)ಕ್ಕುಂ ದಾ |
ರಿಣಿಪತಿಯಂ ಕೆಡಿಸಲಾರ್ಕುಮಾ ರೌದ್ರಹಯಂ || ೨೩ ||

ನೋಡಿದೊಡಿಳಾಧಿಪತಿಯಂ |
ನೋಡುಗುಮುಸವಸದೆ ಮುಟ್ಟಲಣಮೀಯದು ತಾಂ ||
ನೋಡದೆ ಮುಟ್ಟದೆ ಜಗದೀ |
ದಾಡುಗುಮಾ ಧೂಮಕೇತುನಾಮಂ ತುರಗಂ || ೨೪ ||

ದ್ವಿಜರ್ಗೀವುದು ಮೇಣರಿಭೂ |
ಭುಜವಿಷಯಕ್ಕಟ್ಟ ಕಳೆವುದವನೀಹೇಮ ||
ವ್ರಜಮಂ ದಾನಂಗೊಟ್ಟಾ |
ದ್ವಿಜರಿಂ ಗೆಯ್ಯಿಸುಗೆ ಹೋಮಮಂ ಶಾಂತಿಕಮಂ || ೨೫ ||

ಕಾಕಸಿಯೆಡೆಯೊಳ್ ಸುೞಿ ತೋ |
ರ್ಪಾ ಕುದಿರೆಯನಾಳಲಾಗದಾಳ್ದೊಡೆ ರಣದೊಳ್ ||
ಕಾಕೋಲೂಕಗ್ರೀವ (ಶ್ಯೇನ) ಬ |
ಲಾಕಂಗಳ ಚಂಚುಪುಟಕೆ ಸೇವಿತನಕ್ಕುಂ || ೨೬ ||

ಉದರದ ಕೋಷ್ಠದ ಜಾನು |
ಪ್ರದೇಶದೊಳ್ ಸುೞಿಗಳಾದೊಡದನಾಳ್ದಾತಂ ||
ಕದನದೊಳೞಿಗುಂ ಸೆಱೆಯೊಳ್ |
ಕುದಿಗುಂ ಜಂಘೆಗಳೊಳಾದ ರೋಮಜದಿಂದಂ || ೨೭ ||

ತುರಗದ ಕುಷ್ಠಿಕೆಗಳೊಳಂ |
ಗರುಹ(ದೊಳಂ)ಗಳ್ ತೋಱೆ ಸಮರದೊಳ್ ಪತಿಗಕ್ಕುಂ ||
ಮರಣಭಯಂ ಸುೞಿ ನಾಭಿಯೊ |
ಳಿರೆ ತುರಗಂ ಮಾಡುಗುಂ ರುಜಾಬಾಧೆಗಳಂ || ೨೮ ||

ಕಂ|| ಆವರ್ತಂ ಸಲೆ ಕಕ್ಷದೊ |
ಳಾವರ್ತಿಸೆ ಪತಿಗೆ ಸಮರದೊಳ್ ಶರಹತಿಯಿಂ ||
ಸಾವಕ್ಕುಂ ಪತಿಪತ್ನಿಗೆ |
ಸಾವಕ್ಕುಂ ಹಯದ ಮೂತ್ರಕೋಶದ ಸುೞಿಯಿಂ || ೨೯ ||

ಗುದದೊಳ್ ವೃಷಣದೊಳಂ ಬಾ |
ಲದ ಮೊದಲೊಳ್ ತ್ರಿಕದೊಳುರದೊಳಂ ಶಿವನಿಯೊಳಂ ||
ಕುದಿರೆಗೆ ಸುೞಿಯಾದೊಡೆ ಕೊ |
ಲ್ಲದೆ ಮಾಣ್ಗುಮೆ ರಣದೊಳಧಿಪನಂ ಮಾರ್ಗಣದೊಳ್ || ೩೦ ||

ತುರಗಕ್ಕೆ ಪಾಂಡುಪಿಂಡ |
ಸ್ತುರ ರೋಹಿಣಿ ಸಂಧಿ ಲಂಡ ವಾತಸ್ಥಾನಾಂ ||
ತರದೊಳ್ ಸುೞಿಯಾದೊಡದಂ |
ಪರಿಹರಿಸುವುದೇೞಲಾಗದುಗ್ರಾಹವದೊಳ್ || ೩೧ ||

ತುರಗಕ್ಕೆ ಶುಭಾಶುಭಮೆಂ |
ಬೆರಡುಂ ಸ್ಥಾನಂಗಳೆಡೆಗಳೊಳ್ ಸುೞಿ ಸಲೆ ಸಂ ||
ವರಿಸೆ ಸಮೀಪಸ್ಥಾನಾಂ |
ತರದೊಳ್ ಭರದಿಂ ಶುಭಾಶುಭಂಗಳನೀಗುಂ || ೩೨ ||

ಆಶ್ರಿತಮಪ್ಪ ಶಿರೋರುಹ |
ದ ಶ್ರೇಣಿಗಳುತ್ತಮಾಂಗದೊಳ್ ಪುಟ್ಟಿದೊಡಂ ||
ತು ಶ್ರೀಕರಮೆನಿಸಿಯೆ ತೋರ್ಕುಂ |
ನಿಶ್ಶ್ರೇಣಿಕಮುಳ್ಳೊಡೆ ಶುಭಮಂ ಗೆಲಲಾರ್ಕುಂ || ೩೩ ||

ತುರಗಕ್ಕೆ ಪೂರ್ವಭಾಗಾಂ |
ತರದೊಳ್ ಶುಭರಹಿತಮಪ್ಪ(ಮಾದ) ಸುೞಿಗಳ್ ಪಲವಾ ||
ಗಿರೆ ರೋ(ಲೋ)ಚಮಾನಮುಳ್ಳೊಡೆ |
ಪರಿಹರಿಸುಗುಮದಱ ದೋಷಮಭಿನವಚಂದ್ರಾ || ೩೪ ||

ವಿಪರೀತಾವರ್ತೋತ್ಕರ |
ಮಪರಾರ್ಧದೆ ತಾಮಮಪ್ಪೊಡಂ ಸೇಖಲೆಯಂ ||
ತಪಹಂಸುಗುಮಾವುದಱೊಳ |
ಮಪಹರಿಪುದು ದೋಷಮೊಂದೆ ಕಕುದಾವರ್ತಂ || ೩೫ ||

ವಳಿದಗ್ಧ ಚರ್ಮಮಿವು ಕುಂ |
ಡಳರಹಿತಂ ಮಸ್ತಕಸ್ತುವಾಂಕ ಲಲಾಟಂ ||
ಗಳೊಳಪ್ಪೊಡವಂ ಬೇಗಂ |
ಕಳೆವುದು ನೀಂ ಕಟ್ಟವೇಡ ಸುಕರವಿಳಾಸಾ || ೩೬ ||

ಕಂ|| ಅಂ(ಲಿಂ)ಗದ ಮಂ(ಮೂ)ತ್ರಮುಮಪಾಗಿ ತು |
ರಂಗದ ಮಸ್ತಕದೊಳೆೞಲ್ವ ಕೀಲೋಟ್ಟಂಕೋ ||
ತ್ತುಂಗದೊಳೆ ತೋರ್ಪೊಡಮ ಮಶು |
ಭಂಗಳ್ಮಾೞ್ಕುಳ್ಗುಮೆಯ್ದೆ ದೇಶವಿನಾಶಂ || ೩೭ ||

ತುರಗಕ್ಕೆ ಮೂತ್ರಕೋಶಾಂ |
ತರದೊಳ್ ತ(ಕ)ಲೆಯಾದೊಡಶುಭಮೆತ್ತಾನುಂ ಪ ||
ಲ್ವೆರಸು ಮಱು ಗರ್ಭದಿಂದವ |
ತರಿಸಿದೊಡೆ ಮಹಾವಿರುದ್ಧಮಭಿನವಚಂದ್ರಾ || ೩೮ ||

ತುರಗದ ಬಾಲದ ಮೊಳೆಯಂ |
ಕುರಕೇಸರವಾಳಸದೃಶಮಾಗಿ ಗೊ(ಯೊ)ೞಂಟಾ ||
ಗಿರೆ ಪರಿಹರಿಸುಗೆ ಮತ್ತಂ |
ತುರಗಕ್ಕೆ ಕಿರಣಗಳೊಡನೆ ಪುಟ್ಟಿದೊಡಶುಭಂ || ೩೯ ||

ಒಂದೊಂದಾದೊಡ ಮಲ್ಲಿ |
ರ್ಪಂದದೆ ರೋಮಂಗಳಾದೊಡಂ ಸಿದ್ದಗೆಯುಂ ||
ತಂದಿಟ್ಟಪೊರ್ಂದರುಣ...............
ದೊಂದುಂ ಪುಟ್ಟಿದೊಡಮಶುಭಮಾಮುಷ್ಕಂಗಳ್ || ೪೦ ||

ಒಂದೊಂದು ಪಱಯ ಕಿಱಿದಾ |
ದಂದಶುಭಂ ಶುಭದಮಕ್ಕು ಮುಷ್ಕದ್ವಂದ್ವಂ ||
ಕುಂದಿ ಕುಸಿದಸಿಯನಾಗೆ ಕ |
ರಂ ದೋಷಂ ವಾಜಿಗಳ್ಗೆ ಕಪಿಮುಷ್ಕಂಗಳ್ || ೪೧ ||

ದಿನಜಾತ್ಯಾಕೃತಿ ಗಾತ್ರ |
ಸ್ಪನ ನಾಸಾದರ್ಬುಗುಜ್ಜ ಸಂಕ್ಷಿಪ್ತಕ ದು ||
ರ್ವನ ಮಷ್ಟ ಜಲಸು ಮೆದಸ |
ನೆನೆ......? ಸೆತ್ತಮಾಲ್ಕೆ ವೇಡ ಸುಕರವಿಳಾಸಾ || ೪೨ ||

ಕಕುದಿಯುಮವಯ ಮಹೀನಾ |
ಧಿಕನುರಸ್ತನಿಯುಂ ತ್ರಿಕರ್ಣಿಯುಂ ದ್ವಿಮುಖನುಮಂ ||
ಧಕನುಂ ಗದೆಸಮುಷ್ಕ |
ಸಕಮಂದೋಷಕನುಂ ಭೃಂಗಿ ಕುಲನಾಶಕರಂ || ೪೩ ||

ಕಾಕವ್ಯಾಘ್ರಾಜಿನ ಮಂ |
ಡೂಕೋರಗ ಕೃಷ್ಣ ರಸನ ತಾಲುಕಶಿರನುಂ ||
ಕಾಕಮುಖನಂ......
ಅಂತಾಕಸ್ಮಿಕ ಶೋಕದುಃಖನುಂ ಮರಣಕರಂ || ೪೪ ||

ಕುದುರೆಗಳ ಹೇಷಿತಾದಿ ಶಕುನಂ

ಕಂ|| ಬೆಳಗಪ್ಪ ಜಾವದೊಳ್ ಮಂ |
ಗಳ ಪಾಠಕ ಮೃದು ಮೃದಂಗ ಶಂಖಧ್ವಾನಂ ||
ಗಳನಾಲಿಸಿ ಸೌಷ್ಠವದಿಂ |
ಕಿಳಿಱೆ ಹಯಂ ಪತಿಗೆ ವಿಜಯಮಂ ಸೂಚಿಸಿಗುಂ *|| ೪೫ ||

ಧ್ವಜಮಂ ಬೆಳ್ಗೊಡೆಯಂ ಮದ |
ಗಜಮಂ ಮುಗಿಲಂ ದಿನೇಶನಂ ಕನ್ನಿಕೆಯಂ ||
ನಿಜವರ್ಣಪಾತ್ರ ಸುಮನೋ |
ವ್ರಜಮಂ ಕಂಡೊಸೆದು ಕಿಳಿಱೆ ಜಯದಾಯಿ ಹಯಂ || ೪೬ ||

ಮೇಯುತ್ತುಂ ತೀವಿದ ಪುಲ್ |
ಬಾಯೊಳಗಿರೆ ಕಿಳಿಱೆ ಜಯಕರಂ.........ಶಶಿ ||
ವಿದ್ಯುತ್ಪ್ರಭೆ ಹಸಿತದೊಳಂ |
ಬಾಯಿಂದಂ ಪೊಣ್ಮೆ ಶುಭದಮದು ಹಯಹಸಿತಂ || ೪೭ ||

ಗಮನದೊಳೆಡದೊಳ್ ಪುನರಾ |
ಗಮನಂಗೆಯ್ವಲ್ಲಿ ಬಲದೊಳಧಿಪತಿಗೆ ತುರಂ ||
ಗಮಮೊಸೆದು ಕಿಳಿಱೆ ಧನಲಾ |
ಭಮಂ ಮುದಿತೋದಿಮಮಕ್ಕುಮಭಿನವಚಂದ್ರಾ || ೪೮ ||

ದೆಸೆಗಳ ನಾಲಿಸಿ ಮೂಡಣ |
ದೆಸೆಯಂ ನಡೆ ನೋಡಿ ದಿನಕರೋದಯದೊಳ್ ಗ ||
ರ್ಜಿಸಿ ಕಿಳಿಱೆ ವಾಜಿ ಸೈನ್ಯದೊ |
ಳೊಸೆದಾಗಳೆ ಪಯಣಮಕ್ಕುಮಭಿನವಚಂದ್ರಾ || ೪೯ ||

ಒಂದನೆಯ ಜಾವದೊಳ್ ತುರ |
ಗಂ ದಹನಾ(ಶಾ)ಭಿಮುಖದೊಳೆಬ್ಬುತ್ಸಾಹಂ ||
ಗುಂದದೆ ಕಿಳಿಱುತ್ತಿರೆ ಶಿಖಿ |
ಯಿಂದಂ ಭಯಮಕ್ಕುಮೆಂದನಭಿನವಚಂದ್ರಂ || ೫೦ ||

ಎರಡನೆಯ ಜಾವದೊಳ್ ಜ |
ರ್ಝರರವದಿಂ ದಕ್ಷಿಣಾಭಿಮುಖದೊಳ್ ಕಿಳಿಱು ||
ತ್ತಿರೆ ಸತಿಸುತಂಗೆ ಮೃತ್ಯುಂ |
ನರಪನ ಪೆರ್ಗಡೆಗೆ ಮರಣಮಂ ಪ್ರಕಟಿಸುಗುಂ || ೫೧ ||

* ಪದ್ಯ ಸಂಖ್ಯೆ ಇಲ್ಲಿಂದ – ೧ ಎಂದು ಒಂದು ಪ್ರತಿಯಲ್ಲಿ ಆರಂಭವಾಗಿ, ಅಧ್ಯಾಯದ ಕೊನೆಯಲ್ಲಿ ೩೨– ಎಂದು ಮುಗಿದಿದೆ.

ಕಂ|| ನೋಡಿ ಹಯ ನೈಋತಿಯಂ |
ನೀಡುಂ ಕಿಳಿಱುತ್ತುಮಿರ್ಪೊಡಪರಾಹ್ಣದೊಳಂ ||
ಮಾಡುಗುಮಪಾರಭಯಮಂ |
ಮಾಡುಗುಮಧಿಪತಿಗೆ ತುರಗಮಭಿನವಚಂದ್ರಾ || ೫೨ ||

ತುರಗಂ ವಾಯುವ್ಯದಿಶಾಂ |
ತರದೊಳ್ ಘನರವದಿಂ ಪಲವು ಸೂಳ್ ಕಿಳಿಱು ||
ತ್ತಿರೆ ಪೂರ್ವರಾತ್ರಿಯೊಳ್ ತ |
ನ್ನರಸನ ಪೆರ್ಗಡೆಗೆ ಮರಣಮಂ ಪ್ರಕಟಿಸುಗುಂ || ೫೩ ||

ಬಡಗ ಮುಖಮಿರ್ದು ತುರಗಂ |
ನ(ಕ)ಡುವಿರುಳತಿರಭಸದಿಂದೆ ಕಿಳಿಱುತ್ತಿರಲಾ ||
ಕಡುಕೂರ್ಪು ತನ್ನ ಸಖನೊಳ್ |
ತಡಮಿಲ್ಲದೆ ಪೋಗಿ ನೆರೆವುದಂ ಪ್ರಕಟಿಸುಗುಂ || ೫೪ ||

ತಿನುತುಂ ಕಾಷ್ಠಾದಿಗಳಂ |
ತಿನುತುಂ ನಿಸ್ಸಾರಮಪ್ಪ ಕೊಳೆವುಲ್ಲಂ ದು ||
ರ್ಮನನಾಗಿ ಕೆದಱೆ ಬಾಲಮ |
ನನವರತಂ ಕಿಳಿಱೆ ಪತಿಗೆ ಜಯಮಂ ಮಾಳ್ಕುಂ || ೫೫ ||

ಅನುನಯದಿಂ ಪೂರ್ವಾಹ್ಣದೊ |
ಳನಿಲದಿಶಾಂತರಮನೀಕ್ಷಿಸುತ್ತುಂ ಹರಿ ದು |
ರ್ಮನನಾಗಿ ಕೆದಱೆ [1]ಬಾಲಮ |
ನನವರತಂ ಕಿಳಿಱೆ ಪತಿಗೆ ಭಯಮಂ ಮಾಳ್ಕುಂ || ೫೬ ||

ಎರಡುಂಸಂಜೆಯೊಳಂ ಹರಿ |
ಹರುಸಂಗೆಟ್ಟಶ್ರುಬಿಂದು ವಿಣ್ಮೂತ್ರಂಗಳ್ ||
ಸುರಿಯೆ ಕಿಳಿಱುವೊಡೆ ಮಾಡುಗು |
ಮರಸಂಗಂ ಪಿರಿದು ಭಯಮನಭಿನವಚಂದ್ರಾ || ೫೭ ||

ಚಿಂತಿಸಿ ಮೋಹಂ ಬಿಸುಟು |
ದ್ಭ್ರಾಂತಿಸುತುಂ ಹೀನ ದೀನ ದೀರ್ಘ[2]ಸ್ವನದಿಂ ||
ದಂತೆ ಕಿಳಿಱುತ್ತೆ ಮಿಗೆ ಮಾ ||
ಳ್ಕುಂ ತಡೆಯದೆ ಪತಿಗೆ ಭಯಮನತಿದುರ್ನಯದಿಂ || ೫೮ ||

1 ಬೊಮ್ಮನ. 2 ಶ್ವನ.

ಕಂ|| ತುರಗಂ ಬಾಲಂ ಕೆದಱು |
ತ್ತಿರೆ ವಾಳಪ್ರಕರದಿಂದೆ ತಾಂ ಪೇೞ್ಗುಂ ತ ||
ನ್ನರಸಂಗೆ ಶುಭಾಶುಭಮು |
ನೆರಡುಂ ತೆಱದಿಂದಮಪ್ಪುದಂ ಪ್ರಕಟಿಸುಗುಂ || ೫೯ ||

ಕೆದಱುತ್ತುಂ ವಾಲಧಿಯಂ |
ಬಿದಿಱುತ್ತುಂ ಮೆಯ್ಯ ನೆರಡುಕಾಲೊಳ್ ನೆಲನಂ ||
ಬೆದಕುತ್ತುಂ ನಿಲೆ ತಳ್ಪಳಿಯು |
ಲ್ಲದೆ ಮಾಡುಗು [1]ಮಾಹಯಂ ಪ್ರವಾಸಂಗಳುಮಂ || ೬೦ ||

ತುರಂಗಂ ಧರೆಯಂ ದಕ್ಷಿಣ |
ಚರಣದಿನಿಱಿದಿಱಿದು ಕೆದಱೆ ದಕ್ಷಿಣವಾಲೋ ||
ತ್ಕರಮನತಿಸುಮನಸನಾಗು |
ತ್ತಿರೆ ವಿಜಯಮನಾತ್ಮಪತಿಗೆ [2]ಸೂಚಿಸುತಿರ್ಕುಂ || ೬೧ ||

ವಾಮಂ ಪ್ರಕೀರ್ಣಮಾದೊಡೆ |
ಸಮಾನ್ಯಂ ಲಾಭಪಯಣಮಾಗಳೆ ಮಗುೞ್ಗುಂ ||
ವಾಮಂ ದಕ್ಷಿಣಮೆರಡುಂ |
ಸಾಮಾನ್ಯಂ ಕೆದಱೆ ಪಯಣಮಕ್ಕುಂ ದೂರಂ || ೬೨ ||

ಅತಿಶಯಮಾಗಿರೆ ಭದ್ರಾ |
ಕೃತಿಯಿಂ ವಾಲಂ ಪ್ರಕೀರ್ಣಮಾದೊಡೆ ವಿಜಯೋ ||
ನ್ನತಿಯಕ್ಕುಂ ಶಬ್ದವಿನಿ |
ರ್ಗತ ವಾಲಪ್ರಕೀರ್ಣಮಾಗೆ ಭಯಮಂ ಮಾೞ್ಕುಂ || ೬೩ ||

ಸ್ಥಾನಾಂತರದೆಡೆಯೊಳ್ ವಾ |
ಳಾನಿವಹಂ [3]ಕೆದಱೆ ಸುಮನನಲ್ಲದೆ ತುರಗಂ ||
ಧ್ಯಾನಿಸುತಿರ್ಪೊಡೆ ದೂರ |
ಧ್ಯಾನದಿನಾಗಮನಸಂಶಯಂ ಪ್ರಕಟಿಸುಗುಂ || ೬೪ ||

ಉ(ವು)ರಿ ಲಕ್ಷಣಂ*

ತುರಗಾನೀಕದ ಮೆಯ್ಯೊಳ
ಗುರಿ ಯಕ್ಕುಳ್ಕಂಗಳಕ್ಕೆ [ಕಿಡಿಯಕ್ಕೆ] ಸಕೃ ||
ದ್ವಿರಚಿತಮಪ್ಪೊಡೆ ಶೋಭನ |
ಕರ ಮಂಗ ವಿಶೇಷದಿಂದಮಭಿನವಚಂದ್ರಾ || ೬೫ ||

1 ಮಾಯಾಸಂ ಪ್ರಯಾಸಂ, ಮಾಯಾದಂ ಪ್ರ. 2 ಸೂಚನೆಯಂ. 3 ಕೆದರಿಸುವುದು ಮವನಲ್ಲದೆ.

* ಇಲ್ಲಿಂದ ಪದ್ಯ ಸಂಖ್ಯೆ ೧—ಎಂದು ಆರಂಭವಾಗಿದೆ.

ಕಂ|| ತುರಗಕ್ಕೆ ಪೂರ್ವಭಾಗದೊ |
ಳುರಿಯುಳ್ಕಂ ಕಿಡಿಗಳೆಂಬಿವಾದಂದು ವಸುಂ ||
ಧರೆ ಕಿಡುಗುಂ ಮತ್ತದು ತಾಂ |
ಕರದೊಳ್ ಪುಟ್ಟದೊಡೆ ಪತಿಗೆ ಭಯಮಂ ಮಾೞ್ಕುಂ || ೬೫ ||

ಶಿರದೊಳುರಿ ನೆಗೆದೊಡೞಿಗುಂ |
ಪಿರಿಯಮಗಂ ಸ್ಕಂಧದುರಿಯೊಳೞಿಗುಂ ಪತಿಯಂ ||
ತುರಿ ನೆಗೆದೊಡೇಱುವಾತಂ |
ಮರಣಭಯಪ್ರಾಪ್ತನಕ್ಕುಮಭಿನವಚಂದ್ರಾ || ೬೬ ||

ಉ(ವು)ರಿಕೋಶದೊಳುದಿಯಿಸಿದೊಡೆ
ಕರಗುಗುಮುಳ್ಳರ್ಥಮೆಲ್ಲಮೆರಡುಂ ರಂಧ್ರಾಂ ||
ತರಮುರಿದೊಡಾಳ್ದನಂ ಪರಿ |
ಹರಿಸುಗುಮಾತುರಗರತ್ನಮಭಿನವಚಂದ್ರಾ || ೬೭ ||

ಉರಿಯೆ ಜಘನಾಂತರಾಳಂ |
ಮರಣಂ ಪುತ್ರಂಗೆ ಕೋಶಮೋಹನಮುಷ್ಕಾಂ ||
ಕುರಮುರಿದಂದು ಕುಲಸ್ತ್ರೀ |
ಮರಣಭಯಪ್ರಾಪ್ತಿಯಕ್ಕುಮಭಿನವಚಂದ್ರಾ || ೬೮ ||

ವಾಳಧಿಯಿಂದುರಿ ನೆಗೆದೊಡೆ |
ಕಾಳೆಗಮುಂ ಪಿರಿದು ಭಯಮುಮಧಿಪತಿಗಕ್ಕುಂ ||
ವಾಳಾದಾನಮುಮಂತಾ |
ವಾಳಧಿಯುಂ ಜ್ವಲಿತಮಾಗಲಪಜಯಮಕ್ಕುಂ *|| ೬೯ ||

ಭ್ರಾಂತೇಂ ವಾಜಿಗಳ ಶರೀ |
ರಾಂತರದೊಳಗನಲರಶ್ಮಿ ಬೆಳಗುತ್ತಿರೆ ಸಾ ||
ಮಂತಾಂತಃಪುರಪರಿವಾ |
ರಂ ತಡೆಯದೆ [1]ನಾಶಮಕ್ಕುಮಭಿನವಚಂದ್ರಾ || ೭೦ ||

ಕರವಾಳ್ ಕಡಿತಲೆ ಕೊಂತಂ |
[2]ಶರಸಂಕುಲಮಂಗರಕ್ಷೆ ಸೀಸಕಮಿವಱಿಂ ||
ದುರಿ ನೆಗೆದೊಡೆ ಕೇಡಕ್ಕು |
ರ್ವರಶ್ಮಿಯಿಂ ಬೆಳಗೆ ಜಯಮುಹೋತ್ಸಾಹಕರಂ || ೭೧ ||

1 ನಾಶನಮು ಮಕ್ಕು. 2 ಸರಸಂಕುಲ.

* ೬೦ನೆಯ ಪದ್ಯ ಗಳಿತವಾಗಿದೆ.

ಕಂ|| ಉರಿಯುಂ ಮೇಣ್ ಕಣ್ಗಳ |
ತೆರಳ್ಕೆಯುಂ ಪೋಲ್ವ ರಶ್ಮಿ ತುರಗಂ ಕಿಳಿಱು ||
ತ್ತಿರೆ ಬಾಯ(ಯಿ)ಂ ಪೊಱಮಟ್ಟೊಡೆ |
ದೊರೆಕೊಳ್ಗುಂ ವಿಜಯಲಕ್ಷ್ಮಿ ಪತಿಗಪ್ರತಿಮಂ || ೭೨ ||

ಉರ(ಯು)ನಯನಾಂಬುಜವದನಮು |
ನೊರಸುತ್ತಂ ಜಾನುದೇಶ(ಹ)ದೊಳ್ ಖುರದೊಳ್ ಗ ||
ಹ್ವರಿಯನಿಱಿದಾ ತುರಂಗಂ |
ಭರದಿಂದಂ ಶೋಕದುಃಖಮಂ ನೆಱೆ ಮಾಳ್ಕುಂ || ೭೩ ||

ಗಮನಕ್ಕೆ ನಿಜನಿವಾಸಾ |
ಗಮನಕ್ಕುಗ್ರಾಹವಕ್ಕೆ ನಡೆವ ಭಟಂ (ಭುಜಂ) ||
ಗಮದುಗ್ರಾಕೃತಿಯಂ ಭೀ |
ತಮನಂ ಪಡೆ ಮೂತ್ರಮಿಕ್ಕೆ ಹಯ(ರಿ)ಜಯರಹಿತಂ || ೭೪ ||

ಆವರ್ತಮಹಾದೋಷಮು |
ನಾವೊಂ ತುರಗಕ್ಕೆ ಕಂಡೊಡಂ ವೇದವಿದ ||
ರ್ಗೀವುದು ಹಸ್ತೋದಕ ಸ |
ದ್ಭಾವದೆ ರಾವುತ್ತರಂ ಸುವರ್ಣಸಮೇತಂ || ೭೫ ||

ಆವರ್ತೋದ್ಭಾವಕ ದೋ |
ಷಾವಲಿ ವಾಳಪ್ರಕೀರ್ಣಮಂ ಮತಿವಂತರ್ ||
ಭಾವಿಸುಗಭಿನವಚಂದ್ರಮ |
ದೇವನ ಮತದಿಂದಮಿದುವೆ ಚತುರಧ್ಯಾಯಂ *|| ೭೬ ||

ಇಂತು ಚತುರ್ಥಾಧ್ಯಾಯಂ.

---

* ಇಲ್ಲಿ ಸಂಖ್ಯೆ ೭೨ ಇದೆ.

ಪಂಚಮಾಧ್ಯಾಯಂ

ತುರಗಾಯುಃಪರಿಮಾಣ ನಿರ್ಣಯಂ

ಕಂ|| ಎರಡುಂ ತೆಱದಿಂದಾಯುವ |
ನೆರೆಯೆ ಪರಿಕಿಸುವುದು ಬಾಹ್ಯಮಾಭ್ಯಂತರಮೆಂ ||
ಬೆರಡಱೊಳಂ ತನುವಿಂ ಬಾ |
ಹಿರಮಂ ದಶನಂಗಳಿಂದಮಾಭ್ಯಂತರಮಂ || ೧ ||

ಸ್ವರದಿಂದಮಜಿನದಿಂದಂ |
ಖುರದಿಂದಂ ಚೇಷ್ಟೆಯಿಂದಮಾದಶನಾಗ್ರಾಂ ||
ತರದಿಂದಮೊಗದವುಲ್ಕಾ |
ತೆರದಿಂದಂ ಪೇೞ್ವೆ ಹಯವಯೋಲಕ್ಷಣಮಂ || ೨ ||

ಇನಿತಾನುಂ ಸಂದಂಶಂ |
ಜನಿಯಿಸುಗುಂ ಕೇಸರುಂಗಳುಂ ಖುರಜೆಗಳುಂ ||
ತನುವುಮತಿಮೃದುಳಮಕ್ಕುಂ |
ಜನಿಯಿಸಿದಶ್ವಕ್ಕೆ ನೋಡುವೊಡೆ ಮಾಸೈಕಂ || ೩ ||

ಸಂದಂಶಮತಿವ್ಯಕ್ತಂ |
ಬಂಧುರಖುರಂ ಮೆಲ್ಪು(ಳ್ಪು)ವಡೆದತಿವ್ಯಾಲತೆಯಿಂ ||
ದೊಂದಿ ನಲಿವರಿದು ಬಲವ |
ರ್ಪಂದಾಮುಱಿಗೆರಡು ತಿಂಗಳಭಿನವಚಂದ್ರಾ || ೪ ||

ತುರಗಕ್ಕೆ ಮಧ್ಯದಶನೋ |
ತ್ಕರಮುದಯಿಸುಗುಂ ವಿಭಕ್ತಪದನಕ್ಕುಂ ಸು ||
ಸ್ವರದಿಂ ಹೇಷಿಸುಗುಂ ಸೌಂ |
ದರ ತನುವಕ್ಕುಂ ತ್ರಿಮಾಸಪರಿವರ್ತನದೊಳ್ || ೫ ||

ಸಂದಂಶಂ ಸಮನಾಗಿರೆ |
ಬಂದಿರ್ಕುಂ ಮಧ್ಯಮಂ ರತಿಪ್ರಿಯನಕ್ಕುಂ ||
ಸೌಂದರತನು ಮೇಯಲ್ಕಾ |
ರ್ಪಂದು ಚತುರ್ಮಾಸಮೆಂದನಭಿನವಚಂದ್ರಾ || ೬ ||

ಇನಿತಿನಿತುಪಾರಿಪಕ್ಷಂ (ಕ್ಷ್ವಂ) |
ಜನಿಯಿಸುಗುಮಿದಯ್ದು ತಿಂಗಳಂತಾಪಲ್ಗಳ್ ||
ಘನಘಟಿತಮಾಗಿತೋರ್ಪಂ |
ದಿನ ದೆವಸದೊಳಾಱುತಿಂಗಳಭಿವಚಂದ್ರಾ || ೭ ||

ಕಂ|| ನೇರಿದುವು ದಂತಪಂಙ್ತಿ ಶ |
ರೀರಂ ಪಿರಿದಕ್ಕುಮದೞ ಸಂದಂಶಂಗಳ್ ||
ಕ್ಷೀರರುಚಿ ಯಾದೊಡದನವ |
ಧರಿಸುಗೆ ಕಿಶೋರಕಂಗೆ ಸಪ್ತಮಮಾಸಂ || ೮ ||

ತುರಗದ ಮೆಯ್ಯ ನವಿರ್ಗಳ್ ನೀ |
ಳ್ದಿರೆ ತನು ನಿರ್ಮಳಿನಮಾಪ್ರದೇಶಂಗಳ್ ಸುಂ ||
ದರಮಾಗಿರೆ ಸವಮಾಗು |
ತ್ತಿರೆ ದಶನಮುದರ್ಕ್ಕೆ ನೆರೆದುದಷ್ಟಮಮಾಸಂ || ೯ ||

ನವಮಾಸದೊಳಗೆ ಮಧ್ಯಂ |
ಧವಲಚ್ಛವಿಯಾಗೆ ಮಧ್ಯಮೋತ್ತಮುಮೆರಡುಂ |
ಧವಲಂಗಳಾಗೆ ಕುಷ್ಠಿಕೆ |
ಯವು ನಿಡಿಯವು ಕೂರ್ಚರೋಮದಿಂ ದಶಮಾಸಂ || ೧೦ ||

ಉರಮುಂ ಲಲಾಟಪಟ್ಟಾಂ |
ತರಮುಂ ವಿಸ್ತೀರ್ಣಮಾಗೆ ಕೆಳಗಣ ಕಡೆವ ||
ಲ್ಲೆರಡುಮತಿಧವಳಮಾಗು |
ತ್ತಿರೆ ಪನ್ನೊಂದನೆಯ ತಿಂಗಳಭಿನವಚಂದ್ರಾ || ೧೧ ||

ಸ್ಫುರಿತಮೃದು ದೀರ್ಘಬಹುಳಾಂ |
ಗರುಹಂ ಸಂಪೂರ್ಣಮೆನಿಪ ಕೇಸರ ರೋಮೋ ||
ತ್ಕರಪಾರಿಪಕ್ಷ (ಕ್ವ) ಮತಿಪಾಂ |
ಡುರಮಾದಂದೊಂದುವರ್ಷಮಭಿನವಚಂದ್ರಾ || ೧೨ ||

ಅಂಗರುಹಕೇಶವಾಲಚ |
ಯಂಗಳ್ ನಿಡಿಯವು ಕಷಾಯವರ್ಣಂಗಳ್ ದಂ ||
ತಂಗಳ್ಗೆ ಬವರಿಸುವದಂ |
ತಂಗಳ್ ಮಲಿನಂಗಳಾಗೆ ವರ್ಷದ್ವಿತಯಂ || ೧೩ ||

ಕ್ಷೀರ ಕಷಾಯಚ್ಛಾಯಾ |
ಧಾ (ಪಾ) ರಂಗಳ್ ಸ್ನಿಗ್ಧವೃತ್ತ ಘನತದ್ವಂಶಾ ||
ಕಾರಂಗಳ್ ಕಿಱಿಯವು ಸುಕು |
ಮಾರಂಗಳ್ ಪ್ರಥಮದವನಮಭಿನವಚಂದ್ರ || ೧೪ ||

ಕೂರಿದುವು ಪಲ್ಲ ತುದಿಗಳ್ |
ನೇರಿದುವಲ್ಲದು ಸ(ಂ)ಬದ್ಧ ಮೂಲಂಗಳ್ ರೇ ||
ಖಾರಚಿತಂಗಳ್ ವ್ಯಂಜನ |
ವಾರಿಗಳವು ಪೋಗಿ ಬಂದ ದಶನಾವಳಿಗಳ್ || ೧೫ ||

ಕಂ|| ಎರಡುವರೆ ವರ್ಷಮಾದೊಡೆ |
ಭಂಗಂ ಸಂದಶಮಾಕಿಶೋರದ ಸಾರಾಂ ||
ಗರುಹಂ ನುಣ್ಪಿದಯಿಸುಗುಂ |
ಸರಿಸಂ ಪಸರಿಸುಗುಮಲ್ತೆ ತನುರೋಮಂಗಳ್ || ೧೬ ||

ಪತಿತೋತ್ಥಿತ (ದ್ಗತ) ಸಂದಂಶ |
ದ್ವಿತಯಂ ಸುಸ್ನಿಗ್ಧಬಹುಲರೋಮಂ ಸಂಪೂ ||
ರ್ಣತನು ದೃಢಮಾಂಸನುದಿತೋ |
ದಿತಸತ್ವಂ ಮೂಱುಬರಿಸಮಾದಂದಕ್ಕುಂ || ೧೭ ||

ಬರೆಗುಂ ಮಧ್ಯಮದಶನಂ |
ಸ್ಫುರಿಯಿಸುಗುಂ ನುಣ್ಪವೆತ್ತ ತನುರೋಮಂಗಳ್ ||
ತುರಗಕ್ಕೆ ಮೂಱುಬರಿಸಮು |
ಮರೆಯಾಗಲ್ಕಿಂದ್ರಿಯಪ್ರಸನ್ನತೆಯಕ್ಕುಂ || ೧೮ ||

ಸಂಪೂರ್ಣಮಧ್ಯಮಂ ದಶ |
ನಂ ಪೊರ್ದುವುದೊಂದುತೇಜದಿಂದಂ ರೂಪಿಂ ||
ದಂ ಪೆರ್ಚಿ ಬರೆ ಪರಾಕ್ರಮ |
ಮಂ ಪಡೆದೊಡೆ ನಾಲ್ಕುವರ್ಷಮಭಿನವಚಂದ್ರಾ || ೧೯ ||

ತುರಗಕ್ಕೆ ನಾಲ್ಕುವರ್ಷಮು |
ಮರೆಯೊಳ್ ಗತಪಾರಿಪಕ್ಷ (ಕ್ವ) ಮಕ್ಕುಂ ತುದಿಯೊಳ್ ||
ಕರಮೆ ಕುಟಿಯಾಗಿ ಪಂಚಮ ||
ಬರಿಸಕ್ಕುದಯಿಸುಗುಮಲ್ತೆ ತದ್ದಂತಂಗಳ್ || ೨೦ ||

ಪ್ರಾಯಮುಮಂ ಶಾಸ್ತ್ರಾಭಿ |
ಪ್ರಾಯಮುಮನಾರಯ್ದು ಪೇೞ ವಿಸ್ತಾರಣೆಯಿಂ ||
ದಾಯತಮಕ್ಕುಂ ದೇಹದೊ |
ಳಾಯುಷ್ಯಮುಮುತ್ಸೇಧಬಹುಳಪರಿಣಾಮಂಗಳ್ || ೨೧ ||

ಪೊಂಗಿ ಬಿಗಿದೊಗೆದ ಕಣ್ ಮಧು |
ಪಿಂಗಂಗಳ್ ವದನಮುಂ ಶಿರೋರುಹಮುಂ ದೀ ||
ರ್ಘಂಗಳ್ ಜಘನಮುಮುರಮುಂ |
ತುಂಗಂ ಪೃಥುಲಂಗಳಾಗೆ ಚಿರಜೀವಿ ಹಯಂ || ೨೨ ||

[1]ಪರುಷರವದಿಂದೆ ಸುಟಿಗುಂ |
ಚರಣಂ ದೀರ್ಘಂ ಸುಸಂಗತಾಂಗಂ ಸುಸಿರಾಂ ||
ತರಮೆಲ್ಲಂ ಪಿರಿಯವು ತನು |
ಪಿರಿದೆನಿಸಿದ ವಾಜಿ ದೀರ್ಘಜೀವಿತನಕ್ಕುಂ || ೨೩ ||

---

1 ಪುರುಷರುವಲುಷರವ.

ಕಂ|| ಕಿವಿಯುಃಂ ಮೇಃಹನಮುಂ ಕಿಱ |
ಯುವು ನಾದಂ ಪಿರಿದು ಮಾಸವರ್ಧನದಿಂದೊ ||
ವ್ಪುವ ತನುಗ್ರಾಸಪರಂ |
ಪವನಜವಂ ವಾಜಿ ದೀರ್ಘಜೀವಿತನಕ್ಕುಂ || ೧೪ ||

ತುರಗದ ಕಿವಿಯಂ ಪಾಳಿಸಿ |
ಸುರಗೋಪಚ್ಛಾಯೆಯಿಂದಮರುಣಜಲಂ ಪಾ ||
ಯ್ತುರುತಿರೆ ದೀರ್ಘಜೀವಿ ನೆತ್ತರ್ |
ಸುರಿಯದ ಕಿವಿಯಿಂದಮಲ್ಪಜೀವಿತನಕ್ಕುಂ || ೧೫ ||

ತುರಗದಕೂರ್ಚಸ್ಥಾನಾಂ |
ತರದ ಕಿಣಂ ವ್ಯಕ್ತವಾಗೆ ನಾಲ್ಕುಂ ನೊಸಲುಂ ||
ಸಿರವುಮತಿರುಂದ್ರಮಾದೊಡೆ |
ಪರಮಾಯುವನೆಯ್ದಿ ಬಾಳ್ಗುಮಭಿನವಚಂದ್ರಾ || ೧೬ ||

ಅಲಸದೆ ಪಿರಿದುಂ ಮೇಯ್ಗುಂ |
ಜಲದೊಳಗೆ ಮುಸುಂಡನಿಟ್ಟು ನೀರಂ ಕುಡಿಗುಂ ||
ನೆಲದೊಳ್ ಮೆಯ್ಯಿಕ್ಕುವೊಡೆಡ |
ಗೆಲದೊಳ್ ಪಡುಗುಂ ಚಿರಾಯುವಪ್ಪುದು ತುರಗಂ || ೧೭ ||

ಖರಕರನಂನೋಡಿ ನಭಂ |
ದೊರೆದೆಂತುಂ ನೋಡುತಿರ್ಪೊಡಂ ಶುಭ ಕಂಶೋ ||
ತ್ಕರಮುಣ್ಮುವೊಡಂ ಕಾಮಾ |
ತುರನಪ್ಪೊಡಮಾಹಯಂ ಚಿರಂಜೀವಿಕರಂ || ೧೮ ||

ಮಱಪುಟ್ಟಿದ ಘುಳಿಗೆ

ಮೂವತ್ತುಗಳಿಗೆ ವಿಗಳಿಗೆ (ಯೊ) |
ಯಾ(ಳಾ)ವುದು ಮಱ ಪುಟ್ಟಿತದಱ ಗಳಿಗೆಯೆ ವರಿಸಂ ||
ಭಾವಿಸೆ ಮೊದಲಿಂದೆಣಿಸುವು |
ದಾವಿಷ್ಟಿಯ ಗಳಿಗೆಯನಿತೆ ಮಱಗಾಯುಷ್ಯಂ || ೧೯ ||

ಆರ್ಯ್ಯಜನ ಪ್ರಭರೇಖಾ |
ನಿರ್ಯಾಣಮನಸೆಯೆ ಶಾಲಿಹೋತ್ರಮುನೀಂದ್ರಂ ||
ಪ್ರಾಯಕ್ಕೆ ಪೇಳ್ದುದಂ ತಾಂ |
ಪರ್ಯಾಯದಿನಱಿಯೆಪೇಳ್ದನಭಿನವಚಂದ್ರಂ || ೨೦ ||

(ಆಯೂರೇಖೆ)

ಕಂ|| ನರಠಾಯುರೇಖೆ ಯಕ್ಕುಂ |
ಕರತಳದೊಳ್ ತುರಗದಾಯುರೇಖೆಯ ಪವಣಂ ||
ಪರಿಕಿಸುವುದು ಪ್ರೋಥದೊ(ಳಗೂ)ಳೂ |
ರ್ಧ್ವರೇಖೆಯಂ ಶಾಳಿಹೋತ್ರಮುನಿ ಭಾಷಿತಮಂ || ೧ ||

ಅತಿಗೂಢಮತಿರಹಸ್ಯಮಿ |
ದತಿಶಯಮಿದನಾರ್ಗಮಿಾಯಲಾಗದು ಶಿಷ್ಯಂ ||
ಸುತರಿವರ್ಗಂ ಕುಡುವುದು |
ಕೃತಕೃತ್ಯಪರೀಕ್ಷೆಯಿಂದಮಭಿನವಚಂದ್ರಾ || ೨ ||

ಒಂದು ಮೊದಲಾಗನುಕ್ರಮು |
ದಿಂದಬ್ದಂ ಮೂವತ್ತೆರಡುವರೆಗಂ ವಾಹಾ ||
ಸಂದೋಹಕಾಯುರೇಖೆಗ |
ಳಿಂದಾಯುಷ್ಯಗಳಂ ಕರಂ ವಿರಚಿಸುವೆಂ || ೩ ||

ಒಂದೆ ಬೆರಲೆನಿತನಿತೆ ನೀ |
ಳ್ದೊಂದಳವಿಗಳೂರ್ಧ್ವರೇಖೆ ತೋರ್ಪೊಡಂ ಮಱಗಂ ||
1ತೊಂದುವರಿಸದೊಳೆ ಮುಖರೋ |
ಗಂ ದೂಸಿಸೆ ಮರಣಮಕ್ಕುಮಭಿನವಚಂದ್ರಾ || ೪ ||

ಎರಡಸಿಯರೇಖೆ ನೀಳ್ದಿರೆ |
ಬೆರಲಳವಿಗಳೆಸೆದುತೋಱೆ ಜಂಹಾ(ಹ್ವಾ)ಸ್ಥಂಭಂ ||
ಪರಿಭವಿಸೆ ವಾಜಿಗಕ್ಕುಂ |
ಮರಣಭಯ2ಪ್ರಾಪ್ತಿ ಯೆರಡುವತ್ಸರದೊಳಗಂ || ೫ ||

ಎರಡನೆಯರೇಖೆ ಯಡ್ಡಂ |
ಮುರಿದಿರ್ದೆರಲಳವಿಯೊಳ್ ವಿರಾಜಿಸಿ ತೋ(ಱಲ್)ರ್ಕುಂ ||
ಮರಣಂ ತೃತೀಯವರ್ಷಾಂ |
ತರದೆ ಗಳಗ್ರಹವಿಕಾರಕಾರಣದಿಂದಂ | || ೬ ||

ಎ(ದೆ)ಡದ ದೆಸೆಯತ್ತ ಮಿಱುಗಿ |
ರ್ಪೊಡೆ ರೇಖಾದ್ವಿತಯಮವಿದಿತಂ ಪಂಚತ್ವ ||
ಕ್ಕೊಡರಿಸೆ ಗಳಗ್ರಹಂ ಪಿಡಿ |
ದೊಡೆ ಮಡಿಗುಂ ನಾಲ್ಕುವರ್ಷದೊಳ್ ಹಯರಾಜಂ || ೭ ||

1 ತೊರಂದು. 2 ಪ್ರಾಪ್ತನ:ರ.

ಕಂ|| ಎರಡನೆಯುವಪ್ಪ ರೇಖೆಗ |
ಳಿರೆ ವಾಮಕ್ಕೊಱಗಿದಗ್ರದಿಂ ಪ್ರೋಥದೊಳಾ ||
ವರಿಸೆ ಮೃಗಜೃಂಭದಿಂದಂ |
ಮರಣಭಯಂ ವಾಜಿಗಯ್ದುವರಿಸದೊಳಕ್ಕುಂ || ೮ ||

ಎರಡಂಗುಲಪ್ರಮಾಣಿನೊ(ದೊ) |
ಳಿರೆ [ಮತ್ತಾ] ಪ್ರೋ[1]ಥಮಧ್ಯದೊಳ್ ರೇಖೆಗಳಾ ||
ತುರಗಮುದಾತಂಕರುಜಾ |
ಮರಣಭಯಪ್ರಾಪ್ತನಾಱುವರ್ಷದೊಳಕ್ಕುಂ || ೯ ||

ಎರಡು ಬೆರಲ್ನೀಳಂ(ಳಂ) ನಳಿ |
ದಿರೆ(ಡೆ)ರೇಖಾಮಧ್ಯಮೇಲುಂಬರಿಸಂ ತಾಂ ||
ತುರಗಮುದಾತಂಕರುಜಾ |
ಮರಣಭಯಪ್ರಾಪ್ತನಕ್ಕುಮಭಿನವಚಂದ್ರಾ || ೧೦ ||

ಎರಡೂರ್ಧ್ವರೇಖೆಗಳ್ ಮೂ |
ವೆರಲಶ್ವ(ಳಸ್ವ)ಪ್ರೋಥಮಧ್ಯದೊಳ್ ತೋಱೆ ಮಹಾ ||
ಜ್ವರಪರಿತಾಪದೊಳಷ್ಟಮ |
ವರಿಸಕ್ಕಾವಾಜಿಗೆಯ್ದುಗುಂ ಮರಣಭಯಂ || ೧೧ ||

ತೋರಿದುವಾಗಿರೆ ನಡುಗಳ್ |
ನೇರಿದುವಪ್ಪೆರಡು ರೇಖೆಗಳ್ ತಾಂ ಮೊದಲಾ ||
ಕಾರದೊಳಿರೆ ನವವರುಷ |
ಪ್ರಾರಂಭದೆ ವಾಜಿ ರಾಜಶೂಲೆಗೆ ಬೀಡುಂ || ೧೨ ||

ಅಂತಪ್ಪ ರೇಖೆಗಳ್ ಪ್ರೋ |
ಥಾಂತಂಬರಮೆಸೆದು ತೋಱೆ ಪರಲೋಕಪ್ರಾ ||
ಪ್ತಂ ತುರಗಂ ದಶವರ್ಷಾ |
ಭ್ಯಂತರದೊಳ್ ಪೀಡೆಗೆಯ್ದಿಮನ್ಯ(ನ್ಯಾ)ಸ್ತಂಭಂ || ೧೩ ||

ಆರೇಖೆಗಳೆನಿತಾನುಂ |
ತೋರಿದುವಾಪ್ರೋಥಮಧ್ಯದೊಳ್ ತಮ್ಮೆರಡುಂ ||
ನೇರಿದುವಾಗಿರೆ ಶೂಲೆಯು |
ಕಾರಣಮೇಕಾದಶಾಬ್ದದೊಳ್ ಮರ್ದಿಸುಗುಂ || ೧೪ ||

ಎರಡುಬೆರಲ್ನೀಳದೊಳೆಸೆ |
ದಿರೆ ವಾಹಪ್ರೋಥಮಧ್ಯದೊಳ್ ರೇಖೆಗಳಾ ||
ತುರಗಂ ಮಡಿಗುಂ ದ್ವಾದಶ |
ವರುಷದೊಳತಿವೃತ್ತಮಾಗೆ ರೂಕ್ಷಾವರ್ತಂ || ೧೫ ||

ಕಂ|| ನೇರಿದ ರೇಖಾಗ್ರಂಗಳ್ |
ತೋಱಿದೊಡಂ ಪ್ರೋಥಮಧ್ಯದೊಳ್ ನೀಳ್ದಿರೆ ಸಂ ||
ಧ್ಯಾರುಣಮೂರ್ಧ್ವಶ್ವಾಸವಿ |
ಕಾರದೊಳಕ್ಕುಂ ತ್ರಯೋದಶಾಬ್ದಾಂತರದೊಳ್ || ೧೬ ||

ಎರಡೂರ್ಧ್ವರೇಖೆಯುಂ ಪಾ |
ಯ್ದಿರಡಡ್ಡಂರೇಖೆ ಕಾಕಪದಮಂ ಪೋಲ್ತ(ಲ್ತ)ಂ ||
ಕಿರೆ ಭೂತಪೀಡೆಯಿಂದಂ |
ಮರಣಂ ಪದಿನಾಲ್ಕುವರುಷದೊಳ್ [ಹಯಕಕ್ಕುಂ] || ೧೭ ||

ಎರಡೂರ್ಧ್ವರೇಖೆ ಸೈತಾ |
ಗಿರೆ ವಾಹಪ್ರೋಥಮಧ್ಯದೊಳ್ ತಿಲಮಾತ್ರಂ ||
ತರಮಗ್ರಂಗಳ್ ನುಣ್ಣಾ |
ಗಿರೆ ಪತಿಗಾಯುಃಪ್ರವರ್ಧಮಾನಂ ತುರಗಂ || ೧೮ ||

ಕುಲವೃದ್ಧಿ ಧಾನ್ಯಧನಸಂ |
ಕುಲವೃದ್ಧಿ ನೃಪಪ್ರಸಾದ ಮಧಿಪತಿಗಕ್ಕುಂ ||
ನೆಲನಂ ಪೆರ್ಚಿಸಿ ಲಕ್ಷ್ಮೀ |
ಲಲನಾಪ್ರಾಮೋದನಕ್ಕುಮದನಾಳ್ವಾತಂ || ೧೯ ||

ಆರೋಹಕನಿಂ ಮರಣಮು |
ದಾರಂ ಹಯಕಕ್ಕುಮಾಯುರೇಖೆಯೆ ಗೌರೋ ||
ದಾರಂಗಳಾಗೆ ವಾತವಿ |
ಕಾರದೆ ಪದಿನಯ್ದುವರ್ಷದೊಳ್ ಮರಣಭಯಂ || ೨೦ ||

ಅಂತಪ್ಪ ರೇಖೆಗಳ್ ಕ |
ರ್ಪಂ ತಳೆದಾ ಪ್ರೋಥಮಧ್ಯದೊಳ್ ತೋರ್ಪೊಡೆ ಬಾ ||
ಲ್ಗುಂ ತುರಗಂ ಷೋಡಶವ |
ರ್ಷಾಂತರಮಂ ಮೂತ್ರಕೃಚ್ಛ್ರಯಿಂದಂ ಮಡಿಗುಂ || ೨೧ ||

ಅಂತಪ್ಪ ರೇಖೆಗಳ್ ಪ್ರೋ |
ಥಾಂತರದೊಳ್ ತೋಱೆ ದಂತಪೀಡೆಯೊಳಕ್ಕ ||
ತ್ಯಂತಮುದಾತಂಕದೊಳ |
ಕ್ಕೆಂತುಂ ಪದಿನೇೞುವರ್ಷದೊಳ್ ಗತಮಕ್ಕುಂ || ೨೨ ||

ತುರಗಕ್ಕಂ ಗೋಲಿಗೆಗಂ |
ಪರಿಕಿಸೆ ಬೇಱಿಲ್ಲದೂರ್ಧ್ವರೇಖೆಗಳೆರಡಿ ||
ಬ್ಬೆರಲಾಗಿ ರಂಜಿಸುತ್ತಿರೆ |
ತುರಗಂ ಪದಿನಯ್ದುವರ್ಷದೊಳ್ ಗತಮಕ್ಕುಂ || ೨೩ ||

ಕಂ॥ ಹರಿಚಕ್ರಮನಕ್ಕೆ ಪುರಂ |
ದರವಜ್ರಮನಕ್ಕೆ ರೇಖೆಗಳ್ ತಾಂ ಪೋಲು ||
ತ್ತಿರೆ ತುರುಗಪ್ರೋಥದೊಳಾ |
ತುರಂಗವುಂ ಮೂವತೊಂದು ಬರಿಸಂ ಬಾೞ್ಗುಂ || ೩೮ ||

ಅರಸನದನೇೞಲುರದೊಳ್ |
ಪರನೃಪರಂ ಗೆಲ್ದು ರಿಪುವುಹೀತಳಮುಂ ಸಂ ||
ವರಿಸಿ ಸುಖದಿಂದಮಾಳ್ವುದ |
ನಱೀವುದು ಪಲಕಾಲಮೆಂದನಭಿನವಚಂದ್ರಂ || ೩೯ ||

ದಿನಕರನನರ್ಧಚಂದ್ರನ |
ನನುಕರಿಸಿದ ಪ್ರೋಥರೇಖೆಯಿಂದಂ ರಿಪುವು ||
ರ್ದನನಾಗಿ ಬಾೞ್ಗುಮದನಾ |
ಳ್ವ ನೃಪಂ ಹರಿ ಮೂವತೆರಡುವರ್ಷಂ ಬಾೞ್ಗುಂ || ೪೦ ||

.... |
ಮಾಡಿದೊಡಮತಿರೂಕ್ಷ ಮಾಡೊಡಂ ಫಲಮಲ್ಪಂ ||
ಕಡು........................ |
......................................ರೇಖೆಯೆ ಶುಭದಂಗಳ್ || ೪೧ ||

ಇದುಚಂದ್ರ................ |
..................ಪ್ರೋಥರೇಖಾನಿರ್ಯಾಣಾದಿ ||
ಮೊದಲಿನ ಮೂವತ್ತೆರಡ |
ಬ್ದದ.. || ೪೨ ||

ಇಂತು ಪಂಚಮಾಧ್ಯಾಯಂ

ಷಷ್ಠಾಧ್ಯಾಯಂ

ಶರೀರದಂಗಭೇದದಿಂ ಆಯುಷ್ಯದ ಪವಣಂತಿಳಿವುದು

ಕಂ|| ಮೊದಲೊಳ್ ರೇಖಾ................ |
..................ಕುದಿರೆಗೆ ಶರೀರದಿಂ ಪೇ ||
ೞ್ವುದುಮೂವತ್ತೆರಡಬ್ದದ |
.... || ೧ ||

ದುರ್ಗಂಧ ನಾಭಿಯಿಂದಂ |
ದುರ್ಗಂಧಂ.................................. ||
.... |
ದುರ್ಗುಣಮಱೀ ಕಱೀವುದೊಂದು ಸಂವತ್ಸರದೊಳ್ || ೨ ||

.... |
..............ಮೋಪ್ಮಂಗಳಕ್ಷಿವರ್ತಂಗಳ ||
.... |
..................ದ್ವಿತೀಯವರುಷಂ ಬಾೞ್ಗುಂ || ೩ ||

ನಳಿಯ........................ |
........ಕ್ಷಿ ಕೂಟೆ ದುರ್ಗಂಧಂಗಳ್ ||
ಕೊಳೆನಾರ್ಪೊಡೆ........... |
........ಬಾೞ್ವುದು ಮೂಱು ಸಂವತ್ಸರಮಂ || ೪ ||

........................ಮಧಿ |
ಕವಲ್ಪ ಮಲಮುಪ್ಪೊಡಂತು ನೊಸಲಸಿದಾ ||
ಗುವುದುಮದು ಕಳೆಯಲಾಗದು |
ಜವಹೀನಂ ವಾಜಿ ನಾಲ್ಕು ಸಂವತ್ಸರಮಂ || ೫ ||

ನೇೞದುವಲ್ಲವು[1]ರೂಕ್ಷಾ |
ಕಾರದೆ ಹೀನಾಧಿಕಂಗಳಾಗಿರೆ ಪಲ್ಗಳ್ ||
ಈರಯ್ದುಂ ಧ್ರುವೆಗಳ್ ಸ್ಥಾ |
ನಾರುಹಮಲ್ಲದೊಡಮಯ್ದು ವರ್ಷದೊಳೞೀಗುಂ || ೬ ||

ಹೀನಧ್ರುವನುಂ ಪ್ರೋಥ |
ಸ್ಥಾನ ವಳಿತ್ರಯನುಮಳಿಪನುಂ ಪಡಪೆಯು ಮ ||
ತ್ಯಾನತ ಸಿರನುಂ[2] ಲಂಡ |
ಸ್ಥಾನಾವರ್ತನು ಮದಃಱು ವರ್ಷದೊಳೞೀಗುಂ || ೭ ||

---

1 ಕಕ್ಷಂಹೇರೆದೆ 2 ಮಂಡಲ

ಕಂ|| ಹೃದಯಾವರ್ತಂ ಮಾರ್ಜಾ |
ಲದ ಕಣ್ಣಂ ಪೋಲ್ವಕಣ್ಗಳುನ್ಮೀ(ಣ್ಮ)ಲಿತನೇ ||
ತ್ರದ[1]ಲಂಡನಾತಿ ಯಪ್ಪಾ |
ಕುದಿರೆಯದು ಗತಾಯುವಕ್ಕುಮೇೞಬ್ದದೊಳಂ || ೮ ||

ಮು(ಳ)ಱದಟ್ಟೆ ತಿಂಬವೋಲ್ ಕ |
ಣ್ಗಳನಳ್ಕುರೆಬಿಟ್ಟೆ ಲರ್ಚಿಮೋಹನಮಂ ಪೊ ||
ರ್ಕುಟನೆತ್ತಿಕುಟ್ಟೆ ರಂಧ್ರಂ |
ಗಳನಕ್ಕುಳಿಸಿರ್ದೊಡೆಂಟುವರ್ಷದೊಳೞಗುಂ || ೯ ||

ಹಯದುತ್ತರೋಷ್ಠಮೂಲಾ(ಲ) |
ಶ್ರ(ಪ್ರಿ)ಯಮಾಗಿರ್ಕುಂ ಪ್ರಪಾದದಾವರ್ತಂ ಸಂ ||
ದೆಯಮಿಲ್ಲದೆ ತಿರುಗುವ ವಾ |
ಜಿಯ ಬೆನ್ನೊಳಗಯ್ದೆ ಮರಣ ನವವರ್ಷದೊಳಂ || ೧೦ ||

ಬಿಳಿದುಂ ಕರಿದುಂ [2]ಬಿಸದಂ |
ಕೊಳುಗುಗಳೆವೆಯಿಕ್ಕದಕ್ಷಿಗಳ್ ವಿಭ್ರಾಂತಾ ||
ಕುಲಚಿತ್ತಮಡಂಗಿದ ಗುದ |
ವಲಯದಿನಾ ವಾಜಿ ಪತ್ತುವರ್ಷಂ ಬಾೞ್ಗುಂ || ೧೧ ||

ಕಡುರೋಮದ ವಿಚ್ಛಾಯದ |
ಕಡುಮುಳಿಸಿನ ಚಪಳವೃತ್ತಿಯತಿಲೋಲುಪದಾ ||
ಜಡಭಾವದ ಹರಿಗಕ್ಕುಂ |
ತಡೆಯದೆ ಪನ್ನೊಂದುವರ್ಷ[3]ದೊಳ್ ಮರಣಭಯಂ || ೧೨ ||

ನಳಿದಿರ್ಪ[4]ಕೂರ್ಮಮುಖದಿಂ |
ತೊಳಗುವ ಮೆಯ್ಮವಿರ್ಗಳಿಂ ಮಹಾಬಾಹುಗಳಿಂ ||
ಬಳೆದಿರ್ದ ಶೃಂಗಿಯಿಂದಂ |
ಕಳೆಯದು ಪನ್ನೆರಡುವರ್ಷ[5]ಮಂ ಹರಿ(ಯ)ಶಾಖಂ || ೧೩ ||

ಕ(ಖ)ರಭಾಕ್ಷಂ ಮೃದ್ವಂಗಂ |
ಖರ[6]ಖುರನಾರಕ್ತರಸನ ತಾಲ್ವೋಷ್ಠಂ ಭಾ ||
ಸುರರೋಮದ ತುರಗಂ ಪ |
ನ್ನೆರಡುಂ ಮೇಣೊಂದುವರ್ಷದೊಳ್ ಗತಮಕ್ಕುಂ || ೧೪ ||

1 ಲಂಡತಿಯೆನಿಪ್ಪ 2 ಬೆರಸಿಹ ಬಿಸದ 3 ಕಳ್ಕುಂ ಪುರಣಂ 4 ರೋಮ 5 ದಿಂಹಯ ಮುಜುಗುಂ 6 ಖರವಾಲಕಳುದ ರಸನೆ

ಕಂ|| ಜಾನುಹನುಕೇಸರಂ ತ್ರಿ |
ಸ್ಥಾನಕಮುಂ ಸ್ಥೂಲಮಂತೆ ಸುಚ್ಛವಿ ನಿರ್ಮಾಂ ||
ಸಾನತಘೋಣಂ ಸೂಕ್ಷ್ಮ ಸ |
ಮಾನಖುರದ ಹರಿ ಚತುರ್ದಶಾಬ್ದದೊಳೞಗುಂ || ೧೫ ||

ಪಿರಿಯೆಲು ಮೇಢ್ರ[1]ಖುರಂ ಕಾ |
ಲ್ಕೊರಲುಂ ನಿಡಿಯವು [2]ದಿಶಾವಲೋಕನದಿಂದಂ ||
ಸ್ಫುರಯಿಪ ವಿಲೋಚನಂಗಳ |
ತುರಗಂ ಪದಿನಯ್ದು ವರ್ಷದೊಳ್ ಗತಮಕ್ಕುಂ || ೧೬ ||

ಆಯತಸಂಸ್ಥಾನಬೃಹ |
ತ್ಕಾಯಂ ವಿಸ್ತೀರ್ಣಜಘನಜಠರನುಂ ವೈ ||
ಡೂರ್ಯಚ್ಛವಿಲೋಚನ[3]ನದ |
ಕ್ಕಾಯುಷ್ಯಂ ಷೋಡಶಾಬ್ದನಭಿನವಚಂದ್ರಾ || ೧೭ ||

ನಿಡಿದಪ್ಪಕೊರಲ ನಾಳಂ |
ಬಡೆದತಿಗಂಭೀರದೀರ್ಘಸ್ವರದೊಳ್ ತಾಂ ||
ಪೊಡರಿಪ ಮಹೋದರಾಶ್ವಂ |
ಪಡೆಗುಂ ಪದಿನೇೞುವರ್ಷಮಾಯುವ ಪವಣಂ || ೧೮ ||

ನೇರಿದುವು ಖುರಗಳತಿಸುಕು |
ಮಾರಂಗಳ್ ವಜ್ರದಂಷ್ಟ್ರನಂಭೋಧರಗಂ ||
ಭೀರಸ್ವನ ಪರದನನಂ |
ದಾರಿಗೆ ಪದಿನೆಂಟುವರ್ಷದೊಳ್ ಮರಣಭಯಂ || ೧೯ ||

[4]ಲಂಬನವೃಷಣಸಮಾಯು |
ಕ್ತಂ ಬಡ(ಡೆ)ದಾಯತಶರೀರಜಠರಂ ನುಣ್ಪಿಂ ||
ದಂ ಬೆಳಗುವ [5]ಸುಚ್ಛವಿಯ ಹ |
ಯಂ ಬಾೞ್ಗುಂ ವರ್ಷಸಂಖ್ಯೆಪತ್ತೊಂಬತ್ತುಂ || ೨೦ ||

ಕಿವಿಗಳ್ ಕಿಱಿಯವು ನಿಜತನು |
ಛವಿಗಳ್ ನುಣ್ಣಿದುವು ಸಾದಮಾದಂ ಪಿರಿದೊ ||
ಪ್ಪುವ ರೂಪು ಬೃಹಜ್ಜಠರಂ |
ಜವಯುಕ್ತಂ ವಾಜಿಗಾಯು ವಿಂಶತಿವರ್ಷಂ || ೨೧ ||

1 ಗುದಂ 2 ವಿಶಾಲ 3 ಚನಾಶ್ವಕ್ಕು 4 ಅಂಬರ 5 ಸುಧಾಬ್ಧಿಯ

ಕಂ|| *ಪಿರಿದಪ್ಪ ಕರ್ಣನಾಸಾಂ |
ತರ[1]ನಥರವಿಷಾಣಜಾನುದೇಶಂಗಳನಾ ||
ವರಿಸಿದ ತುರಗಕ್ಕಿರ್ಪ್ಪ |
ತ್ತೆರಡಬ್ದಂ[2]ನೆಱೆ[5]ಯೆ ತೋಱುಗುಂ ಮರಣಭಯಂ || ೨೨ ||

ವಳಿಗಳನೆಂಟಂ ಪೊರ್ೞ್ವದೊ |
ಳಳವಡಿಕುಂ ಗುಣಗಣಾಳಿರಾಜಿತತೇಜೋ ||
ನಿಳಯಂ ಗಂಭೀರ[3]ರವಂ |
ಕಳೆಗುವದಿರ್ಪತ್ತುಮೂಱುವರ್ಷ[4]ಮನೆನಿಸುಂ || ೨೩ ||

ನವರಂಧ್ರಾಂತರಮುಂ ಪಿರಿ |
ಯವು[5] ವೃಷಣಂ ಸೂಕ್ಷ್ಮಮಗ್ನದಶನಂ ಕಣ್ಣೊ ||
ಪ್ಪುವ ಮಧುಪಿಂಗಾಕ್ಷಂಗಾ |
ಯುವು ಮಿರ್ಪತ್ತುನಾಲ್ಕುವರ್ಷಮಮೋಘಂ || ೨೪ ||

ಗುಣವಂತಂ ಸತ್ವಗುಣಾ |
ಗಣಿತಂ ನಿರ್ಮಳಿನದಶನನಾಯುಷ್ಯಂ ಬ ||
ಲ್ಕಣೆಯಿರ್ಪ್ಪತ್ತಯ್ದುಬ್ದದೆ |
ಕ್ಷಣ ಮಾತ್ರಕ್ಕಳಿವುದೆಂದನಭಿನವಚಂದ್ರಂ || ೨೫ ||

ನೊಸಲಾವರ್ತಂ ವಾಮದ |
ದೆಸೆಯಂ ಪೊಂದಿರ್ಕುಮಪ್ಪೊಡಂ ಮಸ್ತಕಮಱಂ ||
ಬಿಸಮಾಗಿ ತೋರ್ಪೊಡಂ ಭಾ |
ವಿಸುಗಿರ್ಪತ್ತಾಱುವರ್ಷದೊಳ್ ಮರಣಭಯಂ || ೨೬ ||

ನಿಡಿದಪ್ಪ ಗುದಮುಖಂ ನೀ |
ರ್ಗುಡಿವೊಡೆ ನಾಸಾಪುಟಂಗಳಿಂದೆ ನೀರಂ ||
ಕುಡಿಗುಂ ಲಕ್ಷಣಯುಕ್ತಂ |
ಮಡಿಗುಂ ಹಯಮಿರ್ಪತೇೞುಸಂವತ್ಸರದೊಳ್ || ೨೭ ||

ಹರುಷರವದಿಂದೆ ಸುೞಗುಂ |
ಚರಣಂಗಳ್ ನಿಡಿಯವಂತೆ ಕರ್ಣಂ ಶ್ರೋತ್ರಂ ||
ಪಿರಿಯವೆನೆ ಲಕ್ಷಣಂಗಳ್ |
ಪರಮಾಯುವನಿರ್ಪತೆಂಟುವರ್ಷಂ ಬಾಳ್ಗುಂ || ೨೮ ||

---

1 ಸುದರ 2 ಬಾೞ್ಗುಮೆಂದನಭಿನವಚಂದ್ರಂ 3 ನಿನಾದಂ, ನಿನದಂ, ನಾದಂ 4 ಮನಿರುತಂ
5 ಪೃಷ್ಠಂಕಿಱಿದು

*ಇಪ್ಪತ್ತೊಂಬನೆವರ್ಷದಲಕ್ಷಣವು ಎಲ್ಲಾ ಗ್ರಂಥಗಳಲ್ಲೂ ಗಳಿತವಾಗಿದೆ.

ಕಂ|| ನೀೞ್ದಿರೆ ಕರ್ಣಯುಗಂಗಳ್ |
ನೀೞ್ದಿರೆ ಮುಷ್ಕದ್ವಯಂಗಳುಂ ಕಕ್ಷೆಗಳುಂ ||
ನೇೞ್ದಿರೆ ತನುವುಂ ಪ್ರಾಣಂ |
ನೀೞ್ದಿರ್ಕುಂ ವಾಜಿಗಳ್ಗೆ ನವವಿಂಶತಿಯೊಳ್ || ೨೯ ||

ಕಿಱಿದಪ್ಪ ಬೆನ್ನುಮೇಢ್ರಂ |
ಕಿಱಿದಕ್ಕುಂ ಶ್ಯಾಮಕರ್ಣನಾದಂ ಕಿಱಿದ ||
ಲ್ಲದ ನಾಸಾಪುಟ ಮೆಱೆ[5]ವೊಡ |
ಮಱ ಹಯನಂ [1]ಮೂವತಬ್ದದೊಳ್ ಮರಣಭಯಂ || ೩೦ ||

ಕೊರಲೊಳ್ ಗಂಗೆಯ ದೊವಲುಂ |
ನೆಗೞ್ದಿರೆ ತಾಂ ಗಂಗೆ ವಾರಿಯೆಂಬುದಱಿಂದೇಕೋ ||
ತ್ತರ ತ್ರಿಂಶತಿಯೊಳ್ ವಾಜಿಗೆ |
ಮರಣಭಯಂ ತೋರ್ಕುಮೆಂದನಭಿನವಚಂದ್ರಂ || ೩೧ ||

ದುಂದುಭಿಗಭೀರನಿನದಂ |
ಸುಂದರವೃಷಭವಿನೂತಪುಣ್ಯಾಹದ ಘೋ ||
ರೆಂದೆಸೆವ ರವದೆ ಪರಮಾ |
ನಂದದೆ ಹರಿ ಮೂವತೆರಡುವರ್ಷಂ ಬಾೞ್ಗುಂ || ೩೨ ||

ಇದು ಚಂದ್ರವರ್ಮ ನಿರ್ಮಿತ |
ವಿದಿತಾಯುಜ್ಞಾನದೊಳಗೆ ಮೂವತ್ತೆರಡ ||
ಬ್ದದ ಜೀವಿತಾಬ್ದವನೆ ಪೇ |
ೞ್ವುದು ವಾಜಿಯ ತನುವಿನಿಂ ಪರೀಕ್ಷಿಸಿ ವಿಬುಧರ್ || ೩೩ ||

‡ಸ್ವಸ್ಥಾರಿಷ್ಟಂ

ಸ್ವಸ್ಥಾರಿಷ್ಟಂ ಮುನ್ನ |
ಸ್ವಸ್ಥಾರಿಷ್ಟಂ ಬೞಿಕ್ಕೆ ಪೂರ್ವಾಚಾರ್ಯರ್ ||
ವಿಸ್ತಾರಿಸಿದ ರಹಸ್ಯಮ |
ನಾಸ್ಥಿತಿಯೊಳ್ ನೆಗೞೆ ಪೇೞ್ದನಭಿನವಚಂದ್ರಂ || ೩೪ ||

ನೆಟಿಲೊಳ್ ತಲೆಗಾಣದೊಡಂ |
ನೆಟಿಲೊಳ್ ರೌ(ಛಿ)ದ್ರಂಗಳಾಗಿ ತೋಱುವೊಡಂ ಮಾ ||
ಹಳವಲ್ಲದೆ ಕುಂದುವೊಡಂ |
ಕಟಾಯೆ ಕರಂ ರೂಪುಗೆಟ್ಟಿರಲ್ ಮರಣಭಯಂ || ೩೫ ||

---

1 ದಱಂತ್ರಿಂಶದಬ್ದದೊಳ್

‡ಇಲ್ಲಿಂದ ಪದ್ಯಸಂಖ್ಯೆ ೧, ೨, ಎಂದಿದೆ, ಪ್ರಾಯಶಃ ಪ್ರತಿಯೊಂದು ವಿಷಯಕ್ಕೂ ಪದ್ಯಸಂಖೆಯನ್ನು ಮಾರ್ಪಡಿಸಿರುವಂತೆ ತೋರುವುದು, ಮತ್ತು ಇಲ್ಲಿಗೆ ಆಱನೆಯ ಅಧ್ಯಾಯವು ಮುಗಿದಂತೆಯೂ ತೋಱುವುದು.

ಕಂ|| ಶೀಲಾಚಾರಮು ಸತ್ವಮು |
ಶೀಲಮನಾಚಾರಮಲ್ಪಸತ್ವಂ ವೈದ್ಯಂ ||
ಪಾಲಿಸದೆ ಮೇಯದಶ್ವಂ |
ಕಾಲಮುಖಪ್ರಾಪ್ತನೆಂದನಭಿನವಚಂದ್ರಂ || ೩೬ ||

ತೀವಿದ ಮೆಯ್ ಬತ್ತುವೊಡಂ |
ತೀವಿರ್ಪೊಡಮಶ್ರುಬಿಂದು ಚಕ್ಷುರ್ದ್ವಯದೊಳ್ ||
ಭಾವಿಸಿ ಕೃತೇಂದ್ರಿಯಂಗಳು |
[1]ಮಾವರಿಸಿರೆ ಬಱಬಱಾಗಿ ಬಾಯ್ ಬತ್ತುವೊಡಂ || ೩೭ ||

ತನುಶೋಫಮೇಱೆ ಮೆಯ್ ಝು |
ಮ್ಮನೆ [2]ನವಿರೊಗೆತರೆ ಪುರೀಷಮೂತ್ರಂಗಳ್ ಭೋ ||
ರೆನೆ ಪರಿಯೆ ಪೊಳೆಯೆ ಮ[3]ಲಮುಂ |
ಜನಿಯಿಸೆ ದುರ್ಗಂಧಮಾಗೆ ಸಾಯ್ಗುಂ ತುರಗಂ || ೩೮ ||

ಪಡಲಂ ಕವಿದೊಳಪುಗೆ ಕ |
[4]ಣ್ಗಿಡುವೊಡೆ ನೀರ್ ಸುರಿಯೆ ಪಕ್ಕುಮೆತ್ತಿರೆ[5]ಮುಷ್ಕಂ ||
ಸಡಿಲಿರೆ ತುರಗಕೆ ಮರಣಂ |
ತಡೆಯದೆ ಸಮನಿಸುಗುಮೆಂದನಭಿನವಚಂದ್ರಂ || ೩೯ ||

ಒತ್ತಿದೊಡೆ ಮುಷ್ಕಕೋಷ್ಠಮು |
ನೆತ್ತಿದವೋಲ್ ಮೆಲ್ಪುಗೆಟ್ಟು ಬಲಿದಿರೆ ಮೆಯ್ ಕಣ್||
ಪತ್ತೆ ಕರಿದಾಗೆ ನಾಲಗೆ |
ಸತ್ತಪುದಾ ವಾಜಿಯೆಂದನಭಿನವಚಂದ್ರಂ || ೪೦ ||

ಬಹ್ವಾಶಿಯಪ್ಪ ತುರಗಂ |
ವಿಹ್ವಲನಾಗಿರ್ದು ಮೇಯದಿರ್ದೊಡಮೆಂತುಂ ||
ಬಹ್ವಾಶಿಯಲ್ಲದಶ್ವಂ |
ಬಹ್ವಾಹಾರಕೆ ಪಡೆದೊಡಂ ಮರಣಭಯಂ || ೪೧ ||

ಬಾಡಿದ ಬಹಿರ್ಮುಖಂ ನೀ |
ರೋಡಿದ ಬಾಯ್ ಪ್ರಕೃತಿವಿಕೃತಿಯಾದೊಡೆ ತುರಗಂ ||
ನೋಡೆರಡುತಿಂಗ[6]ಳಿಂಗಡು |
ಪೋಪುವುದಾ ಜವನ ಭವನಮುಂ ಮುಟ್ಟುವಿನಂ || ೪೨ ||

1 ಮೇಪಿಕ್ಕಿ ಬರ್ಪೊಡೆ ಲೇಸಿಲ್ಲದು ಸಪ್ತರಾತ್ರಿಯೊಳ್ ಮರಣಭಯಂ 2 ಮ್ಮನೆಪೋಗೆ ಪುರೀಷವಾತ ಮೂತ್ರಂಗಳ್ 3 ಮಲೆ 4 ಣ್ಮಿಡುಗದೆ 5 ಮುಖಂ 6 ಳಂದಿಂಗೋ

ಕಂ|| ಬೆಸೆವೊಡಮಂಗೋಪಾಂಗಂ |
ಮುಸುಱುವೊಡಂ ಮಕ್ಷಿಕವ್ರಜಂ ಮೆಯ್ಯಂ ವ ||
ರ್ಜಿಸುಗುಂ ಸ್ವಸ್ಥಂ ಪ್ರಾಣಮು |
ನಸಂಶಯಂ ತಿಂಗಳೊಳಗೆ ಸುಕರವಿಲಾಸಾ || ೪೩ ||

ನೊಸಲೊಳ್ ಪುಟ್ಟಿದ ಶೋಫಂ |
ಪಸರಿಸಿ ತಲೆ ಬಾತು ಸುಯ್ವೊಡಂ ಗುದಮುಖದೊಳ್ ||
ಪಸರಿಸಿದ ಬಾಹು ಬಾಲದೊ |
ಳೆಸೆವೊಡಮಾವಾಜಿ ವಿಗತಜೀವಿತನಕ್ಕುಂ || ೪೪ ||

ಪಿರಿದುಂ[1]ವೇಗುಂ ಮುಖದಿಂ |
ನೊರೆವೆರಸಿದ ಲೋಳೆ ಸುರಿಗು ದುಃಖಿತನಕ್ಕುಂ ||
ಬರೆ ಮೂತ್ರಪುರೀಷದ ಪಿ |
ಲ್ಕಿರೆ[2]ಬೀೞ್ಗುಂ ವಾಜಿ ವಿಗತಜೀವಿತನಕ್ಕುಂ || ೪೫ ||

ಎವೆಯಿಕ್ಕವು ಕಣ್ಗಳ್ [3]ಖಾ |
ಣಮನೊಲ್ಲದು ಲದ್ದಿಗತ್ತವಾತಂಗಳನ ||
ಶ್ರಮದಿಂ ಕಳೆಯದು ಮೇಯದು |
[4]ವಿಮೋಹಿತಂ [5]ವಾಜಿಗಕ್ಕು ಗತಜೀವಿತನಂ || ೪೬ ||

ಕೇಸರಮೆಣ್ಣೆಯ ನೆಸೆದಿರೆ |
ಪೂಸಿದವೋಲ್ತೊಡಗಿ ಪಿಡಿದು ತೆಗೆವೊಡೆ ಕೆಯ್ಯೊಳ್ ||
ಕೇಸರಮೆ ಕಿೞ್ತುಬರ್ಪೊಡೆ |
ಲೇಸಲ್ಲದು ಸಪ್ತರಾತ್ರಿಯೊಳ್ ಮರಣಭಯಂ || ೪೭ ||

ನಾಲಗೆ ವಿವರ್ಣಮಾಗೆ ವಿ |
ಶಾಲತೆಗೆಟ್ಟುಡುಗಿ ಕಠಿನಮಾದೊಡೆ ಬೆನ್ನುಂ ||
[6]ಲೀಲೆಗಿಡೆ ಬಲಿಯೆ ಮುಳಿಸಂ |
ಪಾಲಿಸೆ ಹರಿಮರಣಚಿಹ್ನವಭಿನವಚಂದ್ರಾ || ೪೮ ||

ತಿಳಿದಿರ್ದ ನೀರೊಳಶ್ವಂ |
ನೆೞಲಂ ಕಾಣದೊಡಮಲ್ಲಿ ಮುೞುಗಿದೊಡಂ ಕೆ ||
ಯ್ಗೞಿಯೆ ವಿಪರೀತ ಚೇಷ್ಟೆಗ |
ಳಳವಟ್ಟೊಡಮೊಂದೆ ಪಕ್ಷದೊಳ್ ಮರಣಭಯಂ || ೪೯ ||

1 ಮೆಯ್ಯುಂ 2 ಬರ್ಕುಂ 3 ತಾಣ, ಕಾಣ 4 ಕ್ರಮುಮಿರೆ ತಾಂವಾಜಿಮರಣತಪ್ಪದಮೋಘಂ 5 ಗಳ್ಗೆಗತಜೀವಂಗಳ್ 6 ಕೀಲಿಸಿದಂತಿರೆ

ಕಂ|| ಸ್ವಸ್ಥಾರಿಷ್ಟಮಿದಂ ಬಹು |
ವಿಸ್ತರದಿಂ ತಿಳಿಯೆ ಮುಂದೆ ಪೇಲ್ದಪೆನಿನ್ನ ||
ಸ್ವಸ್ಥಾರಿಷ್ಟಮನದನಂ |
[1]ತಾ ಸ್ಥಿತಿಯೊಳ್ ತಿಳಿವುದೆಂದನಭಿನವಚಂದ್ರಂ || ೫೦ ||

[2]ಕೊರಲುಱುಗೆಡದೆಸೆಯೊಳ್ ನೆ |
ತ್ತರ ಧಾರೆಗಳುಣ್ಮೆಪೊಣ್ಮೆ ವಾಜಿಗೆ ತೋರ್ಕುಂ ||
ಮರಣಭಯಮೊಂದೆ ತಿಂಗ |
ಳ್ವರೆಗಂ ನಿರ್ವಹಿಸದೆಂದನಭಿನವಚಂದ್ರಂ || ೫೧ ||

ತನು[3]ಶೋಫಮೇಱೆ ಮೆಯ್ಯ್ ರಘು |
ಮ್ಮನೆ ಬೆಮರುತ್ತಿರ್ಕುಮಪ್ಪೊಡಂ ಕಾಗೆಯ ಗೂ |
ಡಿನ ಗಂಧಂ ನಾಱುವೊಡಂ |
ಮನವಿಕ್ಕುವೊಡಂ ಹಯಕ್ಕೆ ತಪ್ಪದು ಮರಣಂ || ೫೨ ||

ಬಿದಿರದು ಶಿರೋಜಮಂ ಬೀ |
ಸದು ಬಾಲಮನೆತ್ತದಡಿಯನಲ್ಲೆಮೇವ(ಹ)ಂ ಮೇ ||
ವು(ಯ)ದು ಪಲ್ದಿಂಬುವ ಜಾನಿಪ |
ಕುದುರೆ ಗತಾಯುಷ್ಯ[4]ನೆಂದನಭಿನವಚಂದ್ರಂ || ೫೩ ||

ಬಾಲಂಬೀಸದು ನುಡಿಗಳ |
ನಾಲಿಸದಾಹಾರಚಿಂತೆಗೆಯ್ಯದು ಕಿವಿಗಳ್ ||
ಕೀಲಿಸಿ ಕಂಪಿಸೆ ಜಾನಿಸೆ |
ಕಾಲಮುಖಪ್ರಾಪ್ತನಕ್ಕುಮಭಿನವಚಂದ್ರಾ || ೫೪ ||

ಸುರಿಯುತ್ತಿರೆ ಬಾಯಿಂ ಬೆ |
ಳ್ನೊರೆ ಗಂಧಂ ಪೊಲ್ಲದಾಗೆ ವಿಣ್ಮೂ[5]ತ್ರಂ ನೆ ||
ತ್ತರ ಬಣ್ಣಮಾಗೆ ಮೇ(ಹ)ಸಂ |
ಪರಿಹರಿಸಿರೆ ವಾಜಿ ವಿಗತಜೀವಿತನಕ್ಕುಂ || ೫೫ ||

ಪಡುವೊಡೆ [6]ಕಟಮೊಡೆವಿನೆಗಂ |
ಕೆಡವೊಡೆಮಱೆಮೇ[7]ವು(ಹು)ವೆರಸು ಬಾಯೊಳ್ ಪು(ನೆ)ಲ್ಲಂ ||
ಮಡಗಿದೊಡಂ ಜಡಿದೊಡೆ ಬಡಿ |
ದೊಡೆ ಶಂಕಿಸದಿರ್ಪುದಪ್ಪೊಡಂ ಮರಣಭಯಂ || ೫೬ ||

1 ಸ್ವಸ್ತಿಯೊಳಂ ಪೇಳ್ದು ಮೆಚ್ಚಿಸಂ ಭೂಜನರಂ 2 ಕೊರಲುರುಗಿಲೋಳೆ ಬಾಯೊಳ್ ನೆ 3 ಸೊಬಗ ಮರೆಯೆ 4 ಮೆಂದು ಪರಿಹರಿಸುವುದದಂ 5 ತ್ರಂಪೊಲ್ಗೆನೆಸೆ 6 ಕೆಡವೆಂದಡವಿನೆಗಂ 7 ಮೇವುನೋಮಾಡಂ

ಕಂ|| ಸ್ವಸ್ಥಂ ತೊಟ್ಟನೆ ಭ[ರ]ದಿನ |
ವಸ್ಥೆಯ ನೆಯ್ದುವೊಡಮಾತ್ಮ ಸಂ(ಸ್ವ)ಸ್ಥಾನಕದಿಂ ||
ದುಸ್ಸ್ಥಿತನಪ್ಪೊಡನುದು ಮರ |
ಣಸ್ಥಿತಿ ದಂಡಪ್ರಹಾರಮಂ ಬಗೆಯದೊಡಂ || ೫೭ ||

ನೀರನವಗಲಿಯ [1]ನುಂಡು ಶ |
ರೀರಂ ಬಡವಾಗೆ ತಲೆಯನೆತ್ತದೆ ವದನಂ ||
ನೀರೋಡಿ ಬಾಡೆ ಮರಣಮ |
ನಾರಾಧಿಸಿ ತನಗೆ ತಂದುದೆಂದಱಿವುದದಂ || ೫೮ ||

ಘೋರೆನೆ ಬಸಿಱುಬ್ಬೆ ಕರಂ |
ಪೂರಿಸುಗುಮಪಾನವಾಯು ಜಠರಮನದನಂ ||
ತಾರಯಿದ್ದಂ ಕಡೆಗಣ್ಣಿಂ |
ನೀರಂ ಬೆಂಬಲಿದು ತೋರ್ಪೊಡಂ [2]ಮರಣಭಯಂ || ೫೯ ||

ಬಸಿಱಿತ್ತಿ ಕಟ್ಟಿ [3]ಕಜ್ಜರಿ |
ಬೆಸೆದಿರೆ ಪಲ್ಲಂ ತಿನುತ್ತುಮಿರೆ ಕಾಲಂ ಘ ||
ಟ್ಟಿಸುತುಮಿರೆ ಬಿಲ್ದು ನೆಲದೊಳ್ |
ಬಸವಳಿದಲ್ಲಿಮೇಹುಮೇಯೆ ಬಾಳದು ತುರಗಂ || ೬೦ ||

ನೆತ್ತರ್ ಬಾಯಿಂ ಮೂಗಿಂ |
ಮ್ಮ(ಕು)ತ್ತಿಗೆಯಿಂ ಕೋಶದೇಶದಿಂ ಗಳಗಳ ಸೋ ||
ರುತ್ತಿರೆ ಯೆರಡಳ್ಳೆಯೆ ಪೊ |
ಯ್ಯುತ್ತಿರೆ ವಾಜಿ ವಿಗತಜೀವಿತನಕ್ಕುಂ || ೬೧ ||

ಕೆಚ್ಚಗಿರೆ ಕಣ್ಣಪೊಟ್ಟೆಯು |
ಮಚ್ಚಿಗಳುಂ ತಾಲುದೇಶಮುಂ ಗುದಮುಖಮುಂ ||
ಮುಚ್ಚಂಬೋಗಿ ಮನಂ ಕ |
ಣ್ಮುಚ್ಚಿರೆ ದಕ್ಕಾಲಿ ವೀಲ್ದಿ ಬಾಳದು ತುರಗಂ || ೬೨ ||

ಅರುಣಾಂ(ಗಂ)ಕ್ಷಂ ತೊಟ್ಟನೆ ಪಾಂ |
ಡರ ಮಾದೊ[4]ಡೆ ಮುತ್ತುಪೋಲ್ತ ಧವಲಾಕ್ಷಂಗಳ್ ||
ಕರಿದಾಗಿ ತೋರ್ಪೊಡಂ ಪರಿ |
[5]ಹರಿಸದು ತುರುಗಕ್ಕೆ ಮರಣಮಭಿನವಚಂದ್ರಾ || ೬೩ ||

1 ನೀಂಟಿ 2 ತದುಮರಣಂ 3 ಕರ್ಚಿರೆ 4 ಡಮುಂತುವಲ್ತು 5 ಹರಿಪುದು

ಕಂ|| ತುರಗದ ಕಣ್ಣಿಂಡಂ ನೆ |
ತ್ತರ ಪನಿಗಳ್ ಬೀೞೆ ಗಜವಿಲೋಚನದಂತಾ ||
ಗರೆಮುಚ್ಚಿ ಜಾನಿಸುತ್ತಿರೆ |
ಮರಣಭಯಾಕುಲಿತನೆಂದನಭಿನವಚಂದ್ರಂ || ೬೪ ||

ಬಿದಿರದು ಮೆಯ್ಯ[1]ನಣಂ ಪೊರ |
ಳದು [2]ಕೋಷ್ಠಂ ಕಾಷ್ಠಮಪ್ರತಿಷ್ಠಿತಚರಣಂ ||
ಪದದೊಳ್ ಮೇಯದು ಬೆಂಬೀ |
ೞ್ವುದು ಕುಷ್ಠಿಕೆ[3]ಯುರಲದಿರ್ದೊಡಂ ಮರಣಭಯಂ || ೬೫ ||

ಅಡಿಗಡಿಗೆ ಮೆಯ್ಯನಿಕ್ಕುಗು|
ಮೆಡಗೆಲದೊಳ್ ಕಂದಿಕುಂದುಗುಂ ಮುಖಮೋಷ್ಠಂ ||
ಕಿಡುಗುಂ ಮುಂದಣ ಪುಲ್ಲಂ |
ತುಡುಕದು ತದ್ವಾಜಿ ವಿಗತ ಜೀವಿತನಕ್ಕುಂ || ೬೬ ||

(ಶ್ರೋತ್ರ ಲಕ್ಷಣಂ)

ಲೋಗ(ಯಿ)ಸರದೆಲೆಯರಸದಂ |
ತಾಗಿರೆ ಕಿಸುಳಗು[4]ದ ನೀರ ತೆಱದಿಂ ಬೆಳರ್ಗೆಂ ||
ಪಾಗಿರೆ ಕರ್ಣಂ ಧ್ರುವರುಚಿ(ಧಿ) |
ರಾಗಮು ಮಾವಾಜಿಗಾಯ್ತು ವಿಂಶತಿವರ್ಷಂ || ೬೭ ||

ಅರನೇಱಲ ಪಣ್ಣಂತಿರೆ |
ಕರಿದಾಗಿರೆ ಕಿವಿಯನೆತ್ತರಾ ಹಯಕಕ್ಕುಂ ||
ಮರಣಂ ಷೋಡಶವರ್ಷಾಂ |
ತರದೊಳ್ ತಪ್ಪಿಲ್ಲದೆಂದನಭಿನವಚಂದ್ರಂ || ೬೮ ||

ಒತ್ತಿದೊಡೆ ನೀಲವರ್ಣದ |
ನೆತ್ತರ್ ಕಿವಿಯಗ್ರದಲ್ಲಿ ರೂಕ್ಷಚ್ಛವಿಯೊಳ್ ||
ಪತ್ತಿರ್ದ‍ರೂಕ್ಷಮಾದೊಡೆ |
ಸತ್ತಪು[5]ದೆಂದಱಗೆ ನಾಲ್ಕು ಸಂವತ್ಸರದೊಳ್ || ೬೯ ||

[6]ದಾಸಾಳದಲರ ಕುಂಕುಮ |
ಕೇಸರದ ಬೆಳರ್ತ ಬಣ್ಣದಂತಿರೆ ರಕ್ತಂ ||
ಸೂಸಿ ತುದಿಗಿವಿಯ ನೊತ್ತಿದೊ |
ಡಾ ಸಿಸು ಪದಿನೆಂಟುವರ್ಷಮಂ ನೆಱೆ ಬಾೞ್ಗುಂ || ೭೦ ||

---

1 ಬಣಂತಾಂ 2 ತಾಂ ಮುಷ್ಕಕಾಷ್ಠಮೆತ್ತಿದ 8 ತಾಂಬಲಿವುತಿರ್ದೊಡಂ 4 ನಾಡ 5 ದೆಂಟನೆಯ ವರ್ಷಕೆಂದಱುವುದದಂ 6 ದಾಸಳದಲರಂ

ಕಂ|| ಒತ್ತಿದೊಡೆ ತುದಿಯ ಕಿವಿಯೊಳ |
ಗೆತ್ತಂ ಮಸಿಯಂತುಟಪ್ಪ ನೀರೊಱೆದೊಱೆದೊಗೆ ||
ಯುತ್ತಿರ್ಪೊಡ ಮಿಲ್ಲದೊಡಂ |
ಮತ್ತಮಹೋರಾತ್ರದೊಳಗೆ ತಪ್ಪದು ಮಾರಣಂ || ೭೧ ||

ಸೂಸಾಕ್ಷಿಕೂಟಮುಭಯ |
ಸ್ಥಾನಕಮು ಮಗಂಧಮುಂ ತ್ರ(ಪ್ರ)ಯೋದ[1]ಶಕಧಿಕಂ ||
ಹೀನಮೆನಿಸಿರ್ದೊಡಂ ತದು(ದ) |
ಹೀನ[2]ವಿಯಚ್ಛಾಯೆಯುಪ್ಪೊಡಲ್ಪಾಯುಷ್ಯಂ || ೭೨ ||

ಚಲನಂ ಪ್ರೋಥಂ ತಾಲುಗೆ |
ಮಲಿನಂ ದುರ್ಗಂಧನಧ್ರುವಂ ವಿಷಮಾಂಗ ||
ಸ್ಖಲಿತನತಿರಾಗಿ ಲೋಲುಪ |
ನಿಳಯಂ ಚಿರಜೀವಿಯಲ್ತು ಸುಕರವಿಲಾಸಾ || ೭೩ ||

ಅಂಗರುಹ ಕೇಶವಾಳ ಚ |
ಯಂಗಳು ಮಾದಂತಪಙ್ಕ್ತಿಗಳ್ ರೂಕ್ಷಸ್ಥೂ ||
ಲಂಗಳ್ ನಱದುಡಿದೊಡೆದ ಖು |
ರಂಗಳ್ ಕುಬ್ಜಂಗಳಾದೊಡಲ್ಪಾಯುಷ್ಯಂ || ೭೪ ||

ಕುದಿರೆ ಹುಟ್ಟಿದ ಕ್ಷೇತ್ರಭೇದಂ

ತುರಗೋತ್ಪತ್ತಿಕ್ಷೇತ್ರಾಂ |
ತರಂಗಳಯ್ವತ್ತುನಾಲ್ಕು ನರ್ಮದೆಯಿಂದು ||
ತ್ತರದೊಳ್ ಕುಲಬಲ ತೇಜಃ |
ಸ್ವರೂಪದೆ ಜವಪ್ರಮಾಣಪರಿಪೂರ್ಣಂಗಳ್ || ೭೫ ||

ಬಿಸಕಾಂಭೋಜಕ ಬಾಹ್ಲೀ |
ಕಸೈಂಧವಾರಟ್ಟ[3]ತೈತಿಲಂವಾನೇಯಂ ||
ಪೆಸರ ಕ್ಷೇತ್ರದ ಹಯಕಾ |
[4]ಪೆಸರೆ ಪೆಸರ್ ಜಾತಿಗಳ್ ಗುಣಾಧಾರಂಗಳ್ || ೭೬ ||

*ಖರಗಂದರ್ವ ಕವುರ್ ಖರೋಷ್ಠ ವಿಭವಂ ಕಾಂಭೋಜ ಜಾಳಂಧರಂ |
ತುರಗಂ ಮೂಡಣ ಕೊಂಗ ಕೋಶಲ ವರಾಳಂ ಬರ್ಬರಂ ತೈತಿಲಂ ||
[5]ದುರಭಾನೀಕರಹಾಟ ಮಾಗದ ಕಳಿಂಗಂ [6]ಸಿಂಧು ಕೊಲ್ಲಾಪುರಂ |
ತುರಗಂ ಸೇಹುಣಮಾದಿಯಾಗಲಿನಿತುಂ ಕ್ಷೇತ್ರಂಗಳೊಳ್ ಪುಟ್ಟುಗುಂ || ೭೭ ||

---

1 ಪ್ರಯೋಧಿಕನಧಿಕಂ 2 ವೀರ್ಯ 3 ತೈತಿಲಂ ವಾನೆ(ಪೇ)ಯಂ, ತೈತಿಲಂನಾಪೇಯಂ, ಕೈಕೆಯುಂ ಲಂಕಾದತಿಯುಂ 4 ಪೆಸರೆ ಪೆಸರೆಂದು ಪೇೞುಗುಣನಾಮಂಗಳ್ 5 ದುರಂಜಾಶೀ 6 ಕೇರಳಂ ಸಿಂಧು ಜೋಪುರಲಸೆಯುಗೋರಕ್ತಮಾಗಲಿನಿತುಂ ಕ್ಷೇತ್ರಂಗಳಶ್ವಂಗಳಾ ॥

*ಈಪದ್ಯವು ಎಲ್ಲಾ ಪ್ರತಿಗಳಲ್ಲೂ ಮುಂದೆ ಇದೆ

ಕಂ|| ವಾಯಕಸಂಚತ ನವುಲಜ |
ನೇಯತವಮಂ ನಾಳಿ[1]ದಿರ ಸವಿುನಿಯಾಯಿಕ ||
ವಿನೀಯಕ ವಾದಿಯಾಗಿ ರ |
ಲಾಯತವಯ್ವತ್ತು ನಾಲ್ಕು ಜಾತಿ ತುರಂಗಂ || ೭೮ ||

ವಿದಿತಂ ಕ್ಷೇತ್ರಂಗಳ್ ನ |
ರ್ಮದೆಯಿಂದಂ ತೆಂಕ(ನೋಡೆ)ತೊಂಭತ್ತ್ರದಱೊಳ್ ||
ಕುದಿರೆ ಕನಿಷ್ಠಂ ತಾಂ ತೇ |
ಜದ ಕುಲದ ಜವದ ಪ್ರಮಾಣಸತ್ವಂಗಳೊಳಂ || ೭೯ ||

ದ್ವಿಜಸಾಧಿಯಾಗೆ ವರ್ಣ |
ವ್ರಜಮುಂ ಸಿತರಕ್ತಪೀತ ಕೃಷ್ಣಾಂಗಹಯ ||
ವ್ರಜದ ಗುಣಂಗಳನಾರ |
ಯ್ದು ಜಾತಿಯಂ ಪೇಲ್ವುದೆಂದನಭಿನವಚಂದ್ರಾ || ೮೦ ||

ಜಲಕೇಳಿ ಗಂಧ ಪುಷ್ಪಾ |
ವಲಿ ಲಾಜಾಘೃತ ಮಧುಪ್ರಿಯಂ ಶುಚಿ ಕೇಳೀ ||
ವಿಲಸಿತ ಸುನಿದ್ರ ಗಾಂಧ |
ರ್ವಲಕ್ಷಣಂ ದ್ವಿಜಹಯಂ ಸಶುದ್ಧ ಶ್ವಾಸಂ || ೮೧ ||

ಆಯತಸಂಸ್ಥಾನ ಬೃಹ |
ತ್ಕಾಯಂ ತೇಜಸ್ವಿ ಲಘುಪದಂ ಶುಚಿ ಶೂರಂ ||
ತೋಯಧರಸ್ವನನುಗ್ರ |
ಶ್ರೀಯುತನಭಿಮಾನಿ ಕುಲದೊಳದು ರಾಜಹಯಂ || ೮೨ ||

†ಆಗತಮೆನಿಸಿದನಿಪನದ |
ನಾಗತಮತ್ತ್ರದಱೊಳುತ್ತಮಂ ಮಧ್ಯಮನೊಂ ||
ನಾಗೆ ಕನಿಷ್ಠಾರ್ಥಮನೊಂ |
ದಾಗತ ನಾಲ್ಕುಂ ತೆಱಕ್ಕಮಯ್ದು ಯ್ದುಕ್ಕುಂ || ೮೩ ||

ಅತಿಜವನತಿಮೃದುಮತಿಶುಚಿ |
ಜಿತೇಂದ್ರಿಯಂ ಸುಖಿವಿನೀತ ನತಿಮೇಧಸ್ಸಮ ||
ನ್ವಿತ ಸುಪ್ರಮಾಣ ದೇಹಂ |
ಪ್ರತಿಹತಸಾಹಾರಶಕ್ತ ತುರಗಂ ವೈಶ್ಯಂ || ೮೪ ||

1 ವಿರಪಾವಿಸಪೂಯತಮೆಂಬೀ ಪೆಸರಿಂದಾಯತ, ವೀರಪಾಹಿಸವಿಾ
† ಇದು ಹಿಂದಿರಬೇಕು

ಕಂ|| ಕ್ರೂರಂ ಮದನನಶೌಚಿ ವಿ |
ಕಾರಿ ವಿಹಾ(ರೂ)ಪಂ ವಿರೋಧ(ಧಿ)ಸಂ ವಿಷಮಾಂಗಂ ||
ದಾರುಣಗಂಧಂ ಕರ್ಣಕ |
ಠೋರವಚಃಪ್ರಭೃತ(ತಿ)ಚೇತಸಂ ಶೂದ್ರಹಯಂ || ೮೫ ||

ವಾತಪ್ರಕೃತಿಯ ಗುಣಂಗಳ್ |
ಮಾತಾಪಿತೃಗಳ್ಗೆ ಮುನ್ನಮುಳ್ಳೊಡೆ [1]ಮುಱಿಯುಂ ||
ವಾತಿಕನಕ್ಕುಂ ಪೈತ್ತಿಕ |
ಜಾತಿಕನುಂ ಶ್ಲೇಷ್ಮಕಾಂಗನುಂ ತಜ್ಜಾತಂ || ೮೬ ||

ವರುಷಶರದ್ಹೇಮಂತಾಂ |
ತರದೊಳನುಕ್ರಮದೆ ಗರ್ಭಮಾದೊಡೆ ಬೇಗಂ ||
ಪರಿವಿಡಿಯಿಂ ಪ್ರಕೃತಿಗಳಾ |
ದ(ವ)ರಿಸಿ ಮರುತ್ಪಿತ್ತ ಕಫಮನೊಳಕೊಂಡಿರ್ಕುಂ || ೮೭ ||

ಸಮದೋಷಕರಂ ಶಿಶಿರಾಂ |
ಗಮುಮಂತಾಗ್ರೀಷ್ಮಮುಂ ವಸಂತಮುಮಿವಱೊಳ್ ||
[2]ಸವನಿಸೆ ಗರ್ಭಾದಾನಂ |
ಸವಕಂ ತತ್ಪ್ರಕೃತಿಗಳ್ ಗುಣಾಧಾರಂಗಳ್ || ೮೮ ||

ದ್ವಂದ್ವಜ ಪಿತೃಮಾತೃ[3]ತೆಯಿಂ |
ದ್ವಂದ್ವಜಯವಸಾನ್ನ ಪಾನಖಾನಾದಿಗಳಿಂ ||
ದ್ವಂದ್ವಜ ಋತುಸಂಗತದಿಂ |
ದ್ವಂದ್ವಪ್ರಕೃತಿಗಳೆ ಪುಟ್ಟುಗುಂ ತುರಗಂಗಳ್ || ೮೯ ||

ಭೀತಂ ಬಲಖಿಾಯದ ಚಲ |
ಚೇತನನತಿರೂಕ್ಷನಸುಖಿ ಘೃತಲವಣಾಮ್ಲ ||
ವ್ರಾತಾಸಕ್ತಂ [4]ಸಂದಾ |
ವಾತ ಪ್ರಕೃತಿಯ ಗುಣಂಗಳಭಿನವಚಂದ್ರಾ || ೯೦ ||

ನೀರಂ ನೆಲಲಂ [5]ಶೀತಾ |
ಹಾರಮನಿನಿದಪ್ಪುವೆಲ್ಲಮಂ ಕೈಪೆಗಳಂ ||
ಪಾರುತ್ತಿರ್ಕುಂ ತೀಕ್ಷ್ಣಮ |
ದಾರಿ ಬೆಮರ್ವುದು ಜಯಪ್ರಯುಕ್ತಂ ಮತ್ತಂ || ೯೧ ||

1 ಮಱುನೀಂ. 2 ಸಮನಿಸುಗು ವಾತಪಿತ್ತಂ ಸುಮನೋಹರ ಶ್ರೇಷ್ಮಪ್ರಕೃತಿಯುಂ ಹಯಕಕ್ಕುಂ. 3 ಗಳಿಂ. 4 ಪಂಥಾ. 5 ಸ್ನಿಗ್ಧಾಹಾರಂ ಮಸಿಯಸುಗು ಗುಪ್ಪತಿಕ್ತ.... ಸಾರಾಹಾರನಿಮೆಂಬಿವು ಮೋರಂತಿರೆ ನಿದ್ರೆಯಿನಿತು ಶ್ಲೇಷ್ಮ ವಿಕಾರಂ.

ಕಂ|| ವಿರಳಮೃದು ಸೂಕ್ಷ್ಮಮಪ್ಪಂ |
ಗರುಹಂ ದೀಪ್ತಾಗ್ನಿಯಿಂದಮಿರುಳುಂ ಪಗಲುಂ ||
ಪಿರಿದುಂ ಮೇಯುತ್ತಿರ್ಕುಂ |
ತುರಂಗಮಂ ಪೈತ್ತಿಕಾಂಗಮಭಿನವಚಂದ್ರಾ || ೯೨ ||

ಕಲಿ ಕಟು [1]ತಿಕ್ತಪ್ರಿಯ ನತಿ |
ಬಲಯುತ ನಲ್ಪಾಶಿ ಮಂದಗಮನಂ ಲಕ್ಷ್ಮೀ ||
ನಿಲಯಂ [2]ಶ್ರಮದೂರಂ ತಾಂ |
ಸಲೆ ಶ್ಲೇಷ್ಮಿಕ[3]ವಾತ್ರಿ ಶಾಧ್ವದೊಳ್ ಸ್ಥಿರ[4]ಸತ್ವಂ || ೯೩ ||

ಶೀತಕ್ಕ ಮಾತಪಕ್ಕಂ |
ವಾತಕ್ಕಂ ಮಧುರ ರಸಕ್ಕೆ ಕರ್ಮಾಂತರಸಂ ||
ಘಾತಕ್ಕಂ ಷಡುರಸಕಂ |
ಪ್ರೀತಂ ಸಮಪಾವಕಂ ಸಮಪ್ರಕೃ(ಭೃ)ತಿ ಹಯಂ || ೯೪ ||

ಕರಿದಕ್ಕುಂ ವಾತಾತ್ಮಕ |
ನರುಣಂ ಶೀತಾತ್ಮಕಂ ಸಿತಂ ಶ್ಲೇಷ್ಮಾತ್ಮಂ ||
ತರುಣಂ ಶೋಣಂ ನೇತ್ರಾಂ |
ತರವರ್ಣದಿನಱಿದು ಕೊಳ್ಗೆ ದೋಷತ್ರಯಮಂ || ೯೫ ||

ಶ್ರೀಯುತನತಿಮೇಧಾವಿ ಚಿ |
ರಾಯುಷ್ಯಂ ಭದ್ರಲಕ್ಷಣಂ ಶುಚಿಯೆಂದಿಂ ||
ತೀಯಯುದ್ಧ ಗುಣಮುಮಂ ಪ |
ರ್ಯಾಯದೆ ತಾಳ್ದಿದ ತುರಂಗಮಂ ಸತ್ವಗುಣಂ || ೯೬ ||

ಅತಿದೋಷಿ ದುಃಖಭಾಜನ |
ನತಿಕೃಶನಲ್ಪಾಯು ಚಪಲನೆಂಬೀಗುಣ ಸಂ ||
ತತಿಯಂ ತಾಳ್ದಿದ ತುರಗ |
ಪ್ರತತಿ ರಜೋಗುಣವಿಲಿಪ್ತನಭಿನವಚಂದ್ರಾ || ೯೭ ||

ಮತಿಹೀನನು ಮಾಲಸ್ಯನು |
ಮತಿನಿದ್ರಾಪೂರ್ಣನಯನನುಂ ಪೇಡಿಯುಮಾ ||
ನತಶಿರಸಂದಂಶನು ಮ |
ಪ್ಪತುರಗಂಮಮದು ತಮೋಗುಣಿಹೀನಂ || ೯೮ ||

1 ತೀಕ್ಷ್ಣ. 2 ಕ್ಷಮಾ. 3 ಪ್ರಕೃತಿ ಶಾದ್ವರದೊಳ್. 4 ರತ್ನಂ.

ಕಂ|| ಕುದುರೆಗಳಾಯುಜ್ಞಾನಂ |
ವಿದಿತಕ್ಷೇತ್ರಾಂತರಂ ಕುಲಪ್ರಕೃತಿ(ಭು)ಗುಣಂ ||
ವಿದಿತಮಿದುಂ [1]ಷಷ್ಠಾಧ್ಯಾ |
ಯದ ವಿರಚನೆ ಚಂದ್ರಮತಮಿಳಾವಳಯಹಿತಂ || ೯೯ ||

ಇಂತು ಷಷ್ಠಾಧ್ಯಾಯಂ

---

1 ಮಿವುಮಷ್ಟಮಾಧ್ಯಾಯದ ಸಪ್ತಮಾಧ್ಯಾಯ. (ಇದರಿಂದ ಹಸ್ತಲಿಖಿತ ಪ್ರತಿಗಳಲ್ಲಿ ಅಧ್ಯಾಯ ಸಂಖ್ಯೆಯು ಹೆಚ್ಚು ಕಡಿಮೆಯಾಗಿದೆ.)

ಸಪ್ತಮಾಧ್ಯಾಯಂ

ಪೋಷಣವಿಧಿ

ಕಂ|| [1]ಪೋಷಣವಿಧಿಯಂ ದಿವ್ಯ ವಿ |
ಭೂಷಣಮಂ ಪತಿವಿನೋದವಿಗ್ರಹದೊಳ್ [2]ಸಂ ||
ತೋಷಣಮಂ ಬುಧಜನ ಸಂ |
ಭಾಷಣಮಂ ವ್ಯಕ್ತಮಾಗಲಭಿವರ್ಣಿಸುವೆಂ || ೧ ||

ದ್ರು(ಸಿ)ತವಾತಪಿತ್ತಕಫಸಂ |
ತತಿಹರಣಂ ಸಪ್ತಧಾತು ಪಂಚೇಂದ್ರಿಯದು ||
ನ್ನತ(ತಿ)ಬಲವಿವರ್ಧಮಾನಂ |
ಘೃತಸಹಿತಂ [3]ಸರ್ವಕಾಲ ಜನಿತೋತ್ಸಾಹಂ || ೨ ||

ಕ್ಷೀಣಂ ಬಾಲಂ ವೃದ್ಧಂ |
ಕ್ಷೀಣೇಂದ್ರಿಯನತಿದೂರಗಮನಕಾಸಶ್ವಾಸಂ ||
ಕ್ಷೀಣಹಯಸಂಕುಲಕ್ಕ |
ಕ್ಷೂಣಂ ಸಂದುಗ್ಧಪಾನವೊಳ್ಳಿತ್ತೆಂದಂ || ೩ ||

ಪಾನಲಕ್ಷಣಂ

ಜ್ವರಿತಂ ಗರ್ಭಿಣಿಗಂ ತಾಂ |
ಕರಮೆ ಶಿಶುತ್ವದ ಕಿಶೋರಗಮನಷ್ಟೋ||
ತ್ತರ [4]ನಾಲ್ದೆ ಐದ ವ್ಯಾಧಿಯ |
ತುರಗಕ್ಕಂ ಕ್ಷೀರಪಾನಮೆಂಬುದು ಯುಕ್ತಂ || ೪ ||

ಲಾಯಲಕ್ಷಣಂ

ಬ(ಬಿ)ಸಿದಿರ್ಪುದಯುಕ್ತಂ ಮಂ |
ಡಿಸುವುದು ಮುಂಡಿಗೆಯ ತುದಿಗಳಂ ಕುಱಿತಮರಂ ||
ಪಸರಿಸಿ ತೆಳ್ಗಲ್ಲೊಳ್ ಘಟ |
ಯಿಸುವುದು [5]ಸುಸ್ಥಾನ ಶಯನನಪ್ಪಂತೆ ನೆಲಂ || ೫ ||

[6]ಸೋರದ ನಿವಾತವಪ್ಪಾ |
ಗಾರಂ ಮೞೆಗಾಲದಂತು(ದು)ಮಾಗೆಯು ದೆವಸ ||
[7]ಕ್ಕೋರಂತಿರಾತಪಚ್ಛಾಯಾ |
ಗಾರಂ ತಾಂ ಗ್ರೀಷ್ಮಕಾಲದೊಳ್ ಸುಸ್ಥಾನಂ || ೬ ||

---

1 ಪೊಸಪತಿವಿನೋದವಿಗ್ರಹದೊಳ್. 2 ಸಂತೋಷಂ ಪೇೞ್ದನವರ್ಗೆವಿಭೂಷಣಮಂ ವ್ಯಕ್ತಮಾಗಲಭಿನವಚೆಂದ್ರಾ. 3 ಸರ್ವನ್ನಕಾಲ. 4 ನಾಱದನಾಲ್ದೆ ಱಲ್ಪತ್ತುವ್ಯಾಧಿಯ. 5 ಸ್ವಸ್ಥಾನಶಯನಮಾಗಿರೆನೆಲನಂ. 6 ಸೋದರ, ಸಾದರ, ಸಾರದ. 7 ಕ್ಕಾರೊಳ ಮಾತಪಚ್ಛಾಯಾರಮಣಂ.

ಕಂ|| ಕಡುಬಿಸಿಲೊಳ್ ಕಡುಮೞೆಯೊಳ್ |
ಕಡುಗಾಳಿಯೊಳಿರಿಸಲಾಗದದಿರ್ದೊಡೆ ಕುತ್ತ ||
ಕ್ಕೆಡೆಯಕ್ಕು ಮದ[1]ಱನಿಂಬಾ |
ದೆಡೆಯೊಳ್ ಕಟ್ಟುವುದು ಕಲಿತ ಯೋಗ್ಯಾಲಯದೊಳ್ || ೭ ||

[3]ತುರಗದುರದುದ್ದ ಮಾೞ್ಪುದು |
ಚರಣೆಯ ನಡುವೆೞೊಳಗು ಹಸ್ತವಿಸ್ತಾರಂ ಮ ||
ತ್ತೆರಡುಂ ಕೆಲದೊಳ್ ಮುಂ[2]ಡಿಗೆ |
(ಗೊ)ಗೆರಗಲುಚಿತಮಾಗೆ ಮಾಡುವುದು ಮಂದಿರಮಂ || ೮ ||

ಖುರಮಂ ಸೋದಿಸುವುದು ಮಂ |
ದಿರದಿಂದಂ [4]ಪೊಱಗೆ ತೆಗೆದು ಸಮತಲನೆಲದೊಳ್ ||
ಪೊರಳಿಸುವುದೊರಸುವು[5]ದು ಪಗ |
ಲಿರುಳುಂ ಪರಿಚಾರಕಂಗೆ ನಿತ್ಯನಿಯೋಗಂ || ೯ ||

ತುರಗಮನನುಪಮಮಾಗಿರೆ |
ಪೊರೆದೇಱುವೆನೆಂಬ ಪುಣ್ಯಪುರುಷಂಗೆ ಮನೋ ||
ಹರಮಾಗೆ ಶಾಸ್ತ್ರಮಾರ್ಗಂ |
ತರದೊಳನುಕ್ರಮದೆ ಪೇೞ್ದೆನಯ್ದುಂ ಬಲಮಂ || ೧೦ ||

ಅಯ್ದುಂ ಬಲಲಕ್ಷಣಂ

ಪರಿ(ರಿ)ದಿರೆ ನೆತ್ತರ್ ಮೆಯ್ಯೊಳ್ |
ಪರಿಪೂರ್ಣಂ ತೀವಿ ಪಾರ್ಶ್ವಗಳ್ಮೊಗಮುಂ ಕ |
ಣ್ಣೆರಡುಮಿನಿಸಿನಿಸು ಕೆಂಪೆಸೆ |
ದಿರೆ ವಾಜಿಗೆ ಮೊದಲ ಬಲಮಿದೆಂದಱಿವುದದಂ || ೧೧ ||

ಪಿರಿದುನ್ನತದಿಂ [6]ಮೆಯ್ ಮೃದು |
ತರಮಪ್ಪುದು ಸುಣ್ಪವೆತ್ತು ಮಿಱುಮಿಱುಮಿಱುಗು ||
ತ್ತಿರೆ ರೋಮಂಗಳ್ ಕಕ್ಷ್ಪಾಂ |
ತರಂ ಮಸೃಣಮಾಗೆ ತುರಗಕೆರಡನೆಯಬಲಂ || ೧೨ ||

[7]ಉರಮುಂ ಕೊರಲುಂ ಜಘನಾಂ |
ತರಮುಮವತ್ಯುನ್ನತಂಗಳಾಗೆ ಮನಂ ಪೆ ||
ರ್ಚಿರೆ ದೆಸೆ ಮಸಗಿಂ ಕಿಱಿರುವ |
ತುರಗಂ ಭಾವಿಸುವೊಡಿಂತು ಮೂಱನೆಯಬಲಂ || ೧೩ ||

---

1 ದಱಿಂಬಟ್ಟೆಯೊಳ್ಕಟ್ಟುವುದು ಕಾಲವು. ಮದೞಿಗಿಂಸಾದೆಡೆ 2 ಮು(ಕ)ಂಡಿಗೆರಕುಚಿತಮಾಗಿ, ಮು(ಕ)ಂಡಿಗೆ ಶಿರದ್ರು(ಧೃ)ತಮಾಗೆ 3 ತುರಗದ ಮುದಱುದ್ದಮಂ ಮಾಡ್ಚರಣೆ 4 ಪೊಱಗೆ ತೆಗೆವುದು ಸಿರದುದ್ದಮಾಗಿ ಸಮತಲದಿಂ, ಸಿರದುದ್ದಮಾಗಿ ಸಮತಲ 5 ದಂಬಾಯುರಿಳಿಂ ಪರಿಚಾರಕನಂತೆ 6 ಮೋವುದು 7 ಶಿರಮುಂ

ಕಂ|| ಸರ್ವಾಂಗದೊಳಂ ಮಾಂಸಮು |
ಗುರ್ವಾಗಿರೆ ಪೆರ್ಚೆ ನೇಣನಂತತಿವೇಗಂ ||
ಪರ್ವೆ ಪರಿವುದು ಭರಕ್ಷಮು |
ಗರ್ವಿತನೆನಿಸುವ ಹಯಕ್ಕೆ ನಾಲ್ಕನೆಯಬಲಂ || ೧೪ ||

ಆರೂಢವಿಷಮಗತಿಗಂ |
ಭೀರರವೋನ್ನತನುಮಧಿಕಸತ್ವರಿಪು ಸಂ ||
ಹಾರಸಮರ್ಥಂ ಶ್ರೀಗಾ |
ಢಾರಂ ಶ್ರೋಣಿತಮೆನಿಪ್ಪುದಯ್ದನೆಯಬಲಂ || ೧೫ ||

*ಷಡೃತು ಪೋಷಣಕ್ರಮಂ

ಅಂದಿಂದೆನ್ನದೆ ದೊರೆಕೊಂ |
ಡಂದದನಿಕ್ಕುಗೆ ಷಡೃತು ಪ್ರಭಾವದೊಳಂ ಪೇ ||
ಳ್ದಂದದಿನಾತ್ರಿಫಲೆಯನಶ |
ಸೌಂದರದಿಂ ಮೂಱುತ್ತರಂಗಳುಂ ನೆಱೆವಿನೆಗಂ || ೧೬ ||

೧ ವಸಂತರ್ತು

ವರಚೈತ್ರಂ ವೈಶಾಖಾಂ |
ತರಮೆರಡುಂ ತಿಂಗಳೊಳ್ ಸುರಾಪಾನದಿನಾ ||
ದರದಿಂ ತ್ರಿಫಲೆಯನೂಡುಗೆ |
ತುರಗಕ್ಕೆ ರುಜಾಪಹಾರಮುಂ ಬಲಕರ(ಯುತ)ಮುಂ || ೧೭ ||

೨ ಗ್ರೀಷ್ಮರ್ತು

ಜ್ಯೇಷ್ಠಾಷಾಡದೊಳಂ – |
..............ವಾರಿಯಂ ಫಲತ್ರಿತಯಮುಮಂ ||
ನಿಷ್ಠೆಯಿನಲಸದೆ ಕುಡೆ ಸಂ |
ತುಷ್ಟಮನಂ ಪುಷ್ಟಿವರ್ಧನಂ ಹಯಕಕ್ಕುಂ || ೧೮ ||

೩ ವರ್ಷರ್ತು

ಸಾರಂ ಶ್ರಾವಣಭಾದ್ರಪ |
ದಾರಂಭದೊಳೆರಡು ವರಫಲತ್ರಯಮುಂ ವಿ ||
ಸ್ತಾರದೆ ಕುಡುವುದು ಸದ್ಯಃ |
ಕ್ಷಾರದೊಳೊಡಗೂಡೆ ಹಯಕೆ ಬಲವರ್ಧನಮುಂ || ೧೯ ||

*ಒಂದು ಪ್ರತಿಯಲ್ಲಿ ನೀರಾಜನವಿಧಿ ಇಲ್ಲಿದೆ.

೪ ಶರದೃತು

ಕಂ|| ಆಶ್ವಯುಜ ಕಾರ್ತಿಕಂಗಳೊ |
ಳಶ್ವಬಲಂ ವರ್ಧಮಾನಮಪ್ಪನ್ನೆವರಂ ||
ಭಾಸ್ವತ್ರಿಫಲಾಕ್ಷೀರಮು |
ನಶ್ವಕೆ ನಿಜೋತ್ಸಾಹಮಾಗೆ ಕುಡುಗನುನಯದಿಂ || ೨೦ ||

೫ ಹಿಮಂತರ್ತು

ಮಾರ್ಗಶಿರಪುಷ್ಯ ಮಾಸಾಂ |
ತರ್ಗತದೊಳ್ ದಧಿಸಮನ್ವಿತಂ ತ್ರಿಫಲೆಯನೀ ||
ಮಾರ್ಗದೊಳೆ ಕುಡುಗೆ ಮಧುಃಫಲ |
ವರ್ಗಮನೊಸೆದಿಕ್ಕೆ ಮಾಱ್ಕುಮುದಿತೋದಿತಮುಂ || ೨೧ ||

ವರಮಾಘಫಾಲ್ಗುಣಾಭ್ಯಂ |
ತರ ತೈಲದೊಳಾ ಫಲತ್ರಯಂಗಳನಾ ಬ ||
ಯ್ಗಿರುಳಿಕ್ಕುಗೆ ರುಜೆಯಾಗವು |
ತುರುಗಕ್ಕೆ ಹಿತೋಪದೇಶಮಿಂತೀ ಕ್ರಿಯೆಯುಂ || ೨೨ ||

ಪಿತ್ತಂ ಬೇಸಗೆಯೊಳ್ ಪೆ !
ರ್ಚುತ್ತಿರ್ಕುಂ ತುರಗಕಾಶ್ವಯುಜಕಾರ್ತಿಕದೊಳ್ ||
ಪಿತ್ತಂ ಪೆರ್ಚುಗುಮಂತದು |
ಕುತ್ತಕ್ಕೆಡೆಯಾಗಿ ಪೀಡೆಗೆಯ್ಗುಂ ಹಯಮಂ || ೨೩ ||

ಪಾತ..................ಪರುಷೋ |
ಪೇತ ಶರತ್ಕಾಲದೊಳ್ ಪ್ರಮಾಣಮನಱಿದು ||
ತ್ಪಾತಾನಾಗತ ಬೋಧೋ |
ಪಾತ ಪ್ರತಿಷೇಧಮಾಗೆ ಕುಡುವುದು ಘೃತಮಂ || ೨೪ ||

ಬಡವಾದೊಡಮಧ್ವಾನದೊ |
ಳಡಸಿ ತಗುಳ್ದು ನೆಱೆನೊಂದೊಡಂ ಕಲಹದೊಳೇ ||
ರ್ಪಡೆದೊಡಮುದರ್ಕೆ ಕುಡುವುದು |
ಗುಡದುಗ್ಧೋದಕಮನೇೞುದೆವಸಂಬರೆಗಂ || ೨೫ ||

ನೀರೂಡುವಂದದಿಂದಂ |
ಕ್ಷೀರಮನೂಡುವುದು ಲವಣಮಿಕ್ಕಿದ ದೆವಸಂ ||
ಕ್ಷೀರಮನೂಡಲ್ವೇಡಾ |
ಕ್ಷೀರಗುಡಕ್ಷೇತ್ರದೊಳಗಯುಕ್ತಂ ಲವಣಂ || ೨೬ ||

ಕಂ|| ಅನುಲೋಮಮಪ್ಪಾಗಿ ವಾಜಿಗೆ |
ಜನಿಯಿಸೆ ಬಲಮೆರ್ದೆಯ ಲದ್ದಿ ಗುತ್ತಂ ಪಿಂದ ||
ಪ್ಪಿನವಲ್ಲಿ ಕಜ್ಜಿಗಟ್ಟುವು |
ದನುನಯದಿಂ ಕುಡುಗೆಯೆಣ್ಣೆಯಂ ನವರಸಮಂ || ೨೭ ||

ಎಳದಳಿಸಿ ಕರಿಯ ಕೆಯ್ಯೊಳ್ |
ಬೆಳೆದೊಱಗಿದ ಕಡಲೆಯುತ್ತಮಂ [1]ಕಿಡಿಪಕೆ ||
ಯ್ಯೊಳಗಾದ ಸಾರಮೋಡಿದ |
ಬೆಳರ್ತ ಕಡಲೆಗಳನಿಕ್ಕಲಾಗದಯುಕ್ತಂ || ೨೮ ||

ಆವಾವನಾಡೊಳಂ ಮ |
ತ್ತಾವುದು ದೇಶದೊಳೆ ಮೇವನಿಕ್ಕುವರಱಿವರ್ ||
ಭಾವಿಸಿ ಮತ್ತಾ ನಾಡೊಳ |
ಗಾವಸ್ತುವ ನಱಿದು ಕುಡುಗೆ ದಿವ್ಯೌಷಧಮಂ || ೨೯ ||

(ಸರ್ವರುಜೆಗೌಷಧಿ)

ಉ|| ವಾರುಣಿ ಲೊಕ್ಕಿ ಕಲ್ಪಿತ್ತಿಗಿರಿ ಬೇವೊ(ವಿ)ಳುಕಂ ಕುಟಜಂ ಕಟುತ್ರಯಂ |
ದಾರುವಿಳಂಗ ಮಿಂಗು ಪಟಲಂ ರವಿಭಕ್ತ ನಪೂರ್ವ ಚಿತ್ರಕಂ ||
ಜೀರಗೆಯುಪ್ಪು ಬೋಳತರ ಮಿಂಗುಳಮಾಗುಳಿಚ(ಬ)ಂಗಳಂ ಯುವ |
ಕ್ಷಾರಸಮೇತ ಮಿಕ್ಕುವುದು ವಾಜಿಗೆ ಸರ್ವರುಜಾಪಹಾರಕಂ || ೩೦ ||

ಪಿಂಡ ಸೇವನೆ

ಮ|| ಜನಿತೋತ್ಸಾಹಮನೂನಮಗ್ನಿಬಲಮಾರೋಗ್ಯಂ ನಯಂ ಪುಷ್ಟಿವ |
ರ್ಧನಮಕ್ಕುಂ ಕ್ರಿಮಿಕೀಟ ಗುಲ್ಮ ಮುಖರೋಗಂ ಶ್ವಾಸಶೂಲೋಗ್ರವೇ ||
ದನೆ ವಾತೋತ್ಕಟ ರಕ್ತ ಪಿತ್ತ ಕಫ ದೃಷ್ಟಿಸ್ತಂಭನ ದ್ರೋಣಿಕಾ |
ಕ್ಷಿನಖವ್ಯಾಧಿಗಳೆಲ್ಲಮಂ ಕಿಡಿಸುಗುಂ ಪಿಂಡಂ ಸದಾಸೇವಿತಂ || ೩೧ ||

ಕಂ|| ತವಸಿಯ ತೊವಲೊಳಗೆ ಪುನ |
ರ್ನವಿಯುಮನಾಕಲ್ಪಿತ್ತಿಗಿರಿಯುಮಂ ಲೊಕ್ಕಿಯುಮಂ ||
ಸವನಾಗಿ ಕೂಡಿಕೊಳ್ವುದು |
ಲವಣಸಮೇತಂ ತ್ರಿದೋಷಹರಣಂ ಪಿಂಡಂ || ೩೨ ||

ಬರಿವದಣೆ ಲೊಕ್ಕಿ ಲೋಯಿ(ಹಿ) |
ಸರ [2]ಮಣಿಲೆ ಗುಳೂಚಿ ಪಿಪ್ಪಲಿಹುಲಿಗಿಲ್ ವಿಷನಾ ||
ಗರಲಶುನಂಗಳೊಳುಪ್ಪಂ |
ಬೆರಸುಗೆ ಪವಣಱಿಗೆ ಪಿಂಡಮಾರೋಗ್ಯಕರಂ || ೩೩ ||

1 ಕಿಡಿಯಪಲ್ಲೊಳಗಾದ 2 ಮಣಿಶಿರಯು ಬೇವು ಪಿಪ್ಪಲಿ ಪುಲಿಗಿಲ್‌ವಿಷನಾ

ಕಂ|| ಒರ್ಪಲಮುಪ್ಪಂ ತ್ರಿಕಟುಕ |
ಮೊರ್ಪಲಮುಂ ಬೇವಿನೆಲೆಯುಮಂ ಸಮಯುಕ್ತಂ ||
ಬರ್ಪಂತಾಗಿರೆ ತುಱಿದು ಸ |
ಮರ್ಪಿಸುವುದು ದಿವ್ಯಪಿಂಡಮಂ ಕಫಹರಣಂ || ೩೪ ||

ಸಾಮುದ್ರಂ ಗರ್ದುಗಿನ ಕೊನೆ |
ಸಾಮಾನ್ಯಂ ಸರ್ವರೋಗಹರಮಗ್ನಿಬಲೋ ||
ದ್ದಾಮಂ ಸತ್ವಯುತಂ ಸು |
ಕ್ಷೇಮಾರೋಗ್ಯಪ್ರದಾಯಿ ದಿವ್ಯಂ ಪಿಂಡಂ || ೩೫ ||

ಇಂಗಳದ ಬೇರ ಪುಡಿಗೆ ಸ |
ಮಂಗೂಡಿದ ಲವಣದೊಡನೆ ಕಟುಕತ್ರಯಮಂ ||
ಸಂಗಡಿ(ಣಿ)ಸಿ ಕೆಮ್ಮುತಿರ್ದ ತು |
ರಂಗಮಕಿಕ್ಕಲ್ಕೆ ನಿರುಜನಕ್ಕುಮವಶ್ಯಂ || ೩೬ ||

ಆಮಳಕದನಿತ್ತನಿಕ್ಕುಗೆ |
ಸಾಮುದ್ರಸಮೇತಮರ್ಕಮೂಲಮನದು ಸಂ ||
ಧಾಮವಿನಾಶನಮರುಣೋ |
ದ್ದಾಮಂ ತುರಗಕ್ಕೆ ಪಿಂಡಮಭಿನವಚಂದ್ರಾ || ೩೭ ||

ಆಲದ ಅತ್ತಿಯ ಬಸಿರಿಯ |
ಪಾಲೇಱಿದ ಕೊನೆಯನುಡಿದು ಮದಮಿಶ್ರಿತದಿಂ ||
ದಾಲೋಚಿಸದಿಕ್ಕುವುದಾ |
ರೇಱುದಿನಂ ತಱಿದೆ ಹಯಕೆ ಖಾಸವಿನಾಶಂ || ೩೮ ||

ಚಿತ್ರಕ ಘನಾಗಮಂ ಕಟು |
ಕತ್ರಿತಯಂ ತ್ರಿಫಲೆಯಿಂತಿವೆಲ್ಲಮನರೆದೇ ||
ಕತ್ರಯಮಂ [1]ಕುಡೆ ಹಯಖಾ |
ಸತ್ರಯಮಂ ಕಿಡಿಸುಗೆಂದನಭಿನವಚಂದ್ರಂ || ೩೯ ||

ತವಸಿಯ ಗರ್ದುಗಿನ ಪುಲಿಗಿಲ |
ತೊವಲಳಿಲೆ ವಿಳಂಗ ದಹನ ಮಾಗಧ ಮೆಂದೀ ||
ಬಿವ ನೊಡನೆ ಕೂಡಿ ಬೆಲ್ಲಂ |
ಸವನಾಗಿರೆ ಬೆರಸಲಗ್ನಿದೀಪನಪಿಂಡಂ || ೪೦ ||

1 ಕುಡಿಸೆ ಕುದಿರೆಗೆ ಖಾಸೆ

ಕಂ|| ಮರಿಚಂ ಸುಸೈಂಧವಂ ನಾ |
ಗರಮೊಂದ(ಲ)ಂ ಲೊಕ್ಕಿ ಚಿತ್ರಮೂಲಂ ನಿಂಬಂ ||
ಬಱಿವದ(ಣೆ)ನೆ ಲವಣಮಿವನೞಿ |
ಬೆರಸಿಕ್ಕುಗೆ ಯಗ್ನಿದೀಪನೀಯಂ ಪಿಂಡಂ || ೪೧ ||

ವಾತಮನುಪ್ಪುಂ ಕಱಿ(ಳಿ)ಯುಂ |
ಘಾತಿಸುಗುಂ ಪಿತ್ತನಾಶಿ ಕಟುಕತ್ರಿತಯ ||
ವ್ರಾತಂ ಶ್ಲೀಷ್ಮಮಮುಪಮಾ |
ತೀತಮಿದೆನೆ ಕಟುಕರಸಕಷಾಯಂ ಕಳೆಗುಂ || ೪೨ ||

ದ್ರಾಕ್ಷೆ ಮಧುಖಂಡಶರ್ಕರೆ |
ಗೋಕ್ಷೀರಂ ಯಷ್ಟಿಮಧುಕ ಮಿವು ಪಿತ್ತಹರಂ ||
ರಕ್ಷಿಸುಗುಂ ವಾಜಿಗಳನು |
ಪೇಕ್ಷಿಸದಿಕ್ಕುವುದು ರಕ್ತಪಿತ್ತಾಪಹರಂ || ೪೩ ||

ಇಂಗಿನೆಲೆ ಮುಸ್ತೆ ಯಳಲೆ ಲ |
ವಂಗಂ ಬಜೆ ಚಿತ್ರಮೂಲಮತಿಬಜೆ ಸುರ(ದ್ರು)ದಾರ್? ||
ಶೃಂ(ತಂ)ಗಿಯ ಬೇರುಂ ತಿಗುಡೆ ವಿ |
ಳಂಗಂ ಪಿಪ್ಪಲಿಯೆ ಮರಿಚಸೈಂಧವಲವಣಂ || ೪೪ ||

ಎರಡುಂ ಕ್ಷಾರಂ ಕೊತ್ತುಂ |
ಬರಿ ಸರಳಂ ನಾಗಪುಷ್ಪಮಿಂತಿವನೊಂದಾ ||
ಗಿರೆ ಕೂಡಿಮಾಡಿ ಬೆರಸುಗೆ |
ನಿರುತದಿನದ ನಾಷ್ಲುವರ್ಗದೊಳ್ ಬೇೞ್ಪನಿದಂ || ೪೫ ||

ರಸಭರಿತಮಾತುಳುಂಗಂ |
ರಸದಾಳಿಂಬದ ಬೀಜ ನೆಲ್ಲಿಯುಃಂ………… ||
…………………….ಸದೊ |
ಳ್ಪಸರಿಸಿ ಕಲಸುವುದಱಿಂದೆ ದಿವ್ಯಂ ಪಿಂಡಂ || ೪೬ ||

ಬಿಸು(ಸಿ)ನೀರೊಳ್ ಕುಡೆ ವಾತಂ |
ಪ್ರಶಮಿಸುಗುಂ ತಣ್ಪಿನುದಕದಿಂದಂ ಪಿತ್ತ ||
ಪ್ರಶಮನ ವಕ್ಕುಂ ಶ್ಮೇಷ್ಮಂ |
ಕಸಾಯ ಗೋರಸದೆ ಕ್ಷೀರರಸದಿಂ ಕಿಡುಗುಂ || ೪೭ ||

ಎರದ ತನಿವಣ್ಣು ಗುಡ ಮಧು |
ಸರಳಂ ಪೊಸವೆಸಱು ಬೆಸಲೆ ಬಾಳದ ಬೇರಿ ||
ಕ್ಷುರಸಂ……ಪಿತಿಸಾರಂ |
ಪರಿತಾಪಂ ದಾಹರೋಗನಿಶ್ಶೇಷಹರಂ || ೪೮ ||

ಕಂ|| ಧಾತುಗಳೇೞುಂ ದೋಷ |
ವ್ರಾತಂಗಳ್ ನೂಱುಮಾತ್ಮ(ತ್ರ)ಸಂ(ಸ್ಥಾ)ತಾಪದಿ(ದೆ)ಮೂ ||
ಸೂತಿಸಿ ಕನಲ್ದು ತುರಗ |
ವ್ರಾತಂ ಬಡವಕ್ಕು ಮಿಂತು ಪಲವುಂ ತೆಱದಿಂ || ೪೯ ||

ವಿದಿತಂ ಸಾಮುದ್ರಿಕಮಂ |
ಸದಮಲತಕ್ರಮುಮನೊಂದುತಿಂಗಳ್ವರಮಿ ||
ಕ್ಕಿದೊಡೆ ಮೞೆಗಾಲದೊಳ್ ಬಡ |
ಗುದುರೆಗೆ ಬಲಮಕ್ಕುಮೆಂದನಭಿನವಚಂದ್ರಂ || ೫೦ ||

ಲಶುನಮು ಮೋವುಮನುಪ್ಪಂ |
ಮೊಸರುಮನೊಡಗೂಡಿಕೊಂಡು ಬಡಗುದುರೆಗೆ ಸಂ ||
ಕಿಸದೊಂದುಪಕ್ಷ ಮಿಕ್ಕುಗೆ |
ವಿಶೇಷದಿಂ ಫಲಮನೀವುದದು ನಿಶ್ಚಯದಿಂ || ೫೧ ||

ಅನಲಂ ಗುಳೂಚಿ ಮೊಸರೆ |
ಳ್ಳಿನಿತುಮನೊಡಗೂಡಿ ಕೊಡುವುದಿಪ್ಪತ್ತೊಂದುಂ ||
ದಿನವರೆಗಂ ಕುದಿರೆಗೆ ಬಲ |
ಮನುಲೋಮಂ ಪೆರ್ಚೆ ಪೆರ್ಚುಗುಂ ಕ್ಷೀಣಂಗಳ್ || ೫೨ ||

ಕಲ್ಲುಪ್ಪು ಕೊಗ್ಗಿ ಮೊಸರಿವ |
ನೆಲ್ಲಮನೊಡಗೂಡಿ ಕೊಂಡು ಶೋಷಣವಿಧಿಯಿಂ ||
ಬಲ್ಲವರಿಕ್ಕುಗೆ ಬಡವುಂ |
ಬಲ್ಲಿದುವಕ್ಕುಂ ತ್ರಿಸಪ್ತ ರಾತ್ರಾಂತರದೊಳ್ || ೫೩ ||

ಒಕರ್ಗಳ ಪಾಲೊಕ್ಕುಳಮೊಸ |
ರೊಕ್ಕರ್ಗಳ ಕುಂಬಳದ ಕುಸುರಿಯೊಳ್ ಸಮಯುಕ್ತಂ ||
ಬಕರ್ಗ ಮಿದೆಂಬಂತಾಗಿರೆ |
ತೋರ್ಕೆಯಿ(ಯೆ)ನಿಱಿದಿಂಗನಿಕ್ಕೆ ಮತ್ತನುನಯದಿಂ || ೫೪ ||

ಅದಱೊಳಗೆ ಶುಂಠಿಯುಂ ಬೆ |
ಲ್ಲದರಸಮುಂ ಘೃತಮನುಳ್ಳಿಯುಂ ಸಾಸಿವೆಯುಂ ||
ಪದನಱಿದು ಕೂಡಿ ಕುಡುವುದು |
ಕುದಿರೆಗೆ ತಾಂ ಮೂಱುಸಪ್ತಹ(ರ)ಂ ಪೋಪಿನೆಗಂ || ೫೫ ||

ಜವೆಯುಂ ಬಾ(ಬಾ)ಣಂಗಟ್ಟುವ |
ಡುವಿಯುಂ ಕಳೆದಿಕ್ಕಿ ಮಾಡಿ ಕಟ್ಟುಗೆ ಪೆಸಱಿಂ ||
ತೊವರಿಯನುರ್ದುವುಮಂ ಗೋ |
ದುವೆಯುಮನಿಕ್ಕುವೊಡೆ ತೆಗಸಿಕಟ್ಟುವುದು(ವೊಡು)ಚಿತಂ || ೫೬ ||

ಕಂ|| ನನೆಯಿಕ್ಕಿದ ಕಡಲೆಯ ತುರ |
ಗನಿಕಾಯಕ್ಕಱಿದು ಕಟ್ಟುವುದು ಮಱಿಯುಂ ದು ||
ರ್ದಿನಮುಂ ಗಾಳಿಯು ಮಂ(ಮಾ)ದಂ |
ದಿನ ದೆವಸಂ ನೆಗಪಿ ಕಟ್ಟುವುದು ಕರಮುಚಿತಂ || ೫೭ ||

ನಾಂದುವನಡಿಗಟ್ಟಂ ಪುಱ |
ತಿಂದುವ ನಡಯೊತ್ತಿ ಬೆಂದುವಂ ಬೂರಣಮು(ದಿ)ಂ ||
ಕಂದಿದುವಂ ಮೊಳೆವೋದುವ |
ನೆಂದುಂ ಕಟ್ಟಲ್ಕೆ ವೇಡ ಖಾ(ಬಾ)ಣದಿಗಳಂ || ೫೮ ||

ಬರಗೆಳ್ಳು ಕೋಱಿ ಪಾರಕು |
ವೆರಸಗಸೆ ಕುಸುಂಬೆ ಕಟವೆ ನೆಲ್ ಸಾವೆಗಳುಂ ||
ತುರಗಕ್ಕಹಿತಂ ಬಲಸಂ |
ಹರಣಂಗಳ್ ಖಾ(ಬಾ)ಣವಿಧಿಯಿನಭಿನವಚಂದ್ರಾ || ೫೯ ||

ನಿರ್ಮಲಿನಮಪ್ಪ ಪರಪಿನ ? |
ಪೆರ್ಮಡುಗಳ ತೊಱೆಯ ದೀರ್ಘಿಕೆಯ ವಿಚಿ ||
ತ್ರಾರ್ಮಿಕೆಗಳ ಸಂಚಲಿಸುವ |
ನೀರ್ಮಾನಸಲಹರಿ ಸರ್ವ ದೋಷಾಪಹರಂ || ೬೦ ||

ಕದಡಿದುದೆಲೆಕೊಳೆಯಿಂ ಪುಱಿ |
ತುದು ಪಾವಸೆ ಪಂಕವತಿಕಲಂಕಂ ಕ್ರಿಮಿ ಕಾ ||
ಸಿದ ತಾಣಮಲ್ಪಮೆನೆ ಪೊ |
ಲ್ಲದು ತುರಗಕ್ಕೆ ಕೂಪಮೆಂಬುದುಂ ವಿಷಕೂಪಂ || ೬೧ ||

ಮಂದಾಗ್ನಿಯಕ್ಕು ಮದಕ(ಕ್ಕ)ದೆ ? |
ಯಿಂದಮನಾಹಾರದಿಂದೆ ಧಾತುಗಳೇಱುಂ ||
ಬಂದಿರ್ಕು ಮುದರ(ಪಾ)ವಕ |
ದಿಂದಂ ಕುತ್ತಂಗಳೆರಡು ತೆಱದಿಂದಕ್ಕುಂ || ೬೨ ||

ದುಷ್ಟಾಂಬುಪಾನದಿಂದಂ |
ಕಷ್ಟಂ ಖಾ(ಬಾ)ಣದಿನನಿಷ್ಟವಾತಪಶಯದಿಂ ||
ಭ್ರಷ್ಟಾರೋ(ಲೋ)ಹ[ಕ] ನಿಂದು |
ತೃಷ್ಟಾಶ್ವಂ ಕ್ಷೀಣಮಾಗಿ ರುಜೆಯೊಳ್ ನವೆಗುಂ || ೬೩ ||

ಸ್ನಾನಾಹಾರಾಗಾರವಿ |
ಧಾನದೊಳಂ ಖಾನ(ಣ)ಪಾನ ವಯಸಾರೂಢ ||
ಸ್ಥಾನದೊಳಂ ತುರಗಮನವ |
ಮಾನಿಸದಾರಯ್ಯೆ ಪಲವುಕಾಲಂ ಬಾಳ್ಗುಂ || ೬೪ ||

ಕಂ|| ತುರುಗಕ್ಕೆ ಗಂಧಮಾಲ್ಯಾ |
ಭರಣಾರ್ಪಣ ಖಾನಪಾ(ಣ)ನ ಭೋಜನಶಯನಾ ||
ದರಮಂ ಮಾಡುವ ಪತಿಗಿ(ಯಿ)ರ |
ದರಿಯಂ ಮಡಿಯಿಸುಗುಮಸಮಸಮರಾಂಗಣದೊಳ್ || ೬೫ ||

ಕಡುಗಾಳಿಯೊಳ್ ದವಾನಲ |
ನೊಡಗೂಡಿದ ತೆಱದೆ ವಹ್ನಿಯೊಳ್ ತುರಗನೊಡಂ ||
ಬಡೆ(ಡ)ದನ್ಯರಿಪುಬಲಾಬ್ಧಿಯ |
ಕಡೆವರಮೊಟ್ಟೈಸಿ ಗೆಲ್ಲ್ಗು ಪರ(ರಿಪು)ಮಂಡಲಮಂ || ೬೭ ||

ಮುನ್ನನುವಾಹಿತನಂ ತೋ |
ರ್ಪುನ್ನತಿಗಿಡೆ ಬಡಿದ ಕಾಲ(ಳ)ದಂಡಕ್ಕೆಸೆ(ದ)ವಾ ||
ತನ್ನೋಯಿಸಿ ಪೊರೆಯದ ಪತಿ |
ಯನ್ನೆನೆ(ಯದು)ಗುಂ ವಾಜಿ ಸಮರಭೂಮಿಯೊಳೆಂದುಂ || ೬೮ ||

ಮ|| ಅತಿದೂರಂ ಪಯಣಕ್ಕೆ ಬೇಟೆಗೆ ವಿನೋದಾರ್ಥಕ್ಕೆ ಸೆಂಡಿಗೆ ಪೂ |
ಜಿತಕಾರ್ಯಕ್ಕೆ ಮಹಾಹವಕ್ಕೆ ಭಟರುಂ ಗಂಡೇಭಮುಂ ಸುತ್ತಿ ಮು ||
ತ್ತಿ ತಱುಂಬಿರ್ದ ಪದಕ್ಕೆ ಚಿಂತಿತಮನೋವಾಕ್ಕಾಯ ಕರ್ಮಂಗಳೂ |
ರ್ಜಿತಮಪ್ಪಂತು ನಿಜಾಧಿಪಂಗೆ ತುರಗಂ ಮಾಳ್ಕುಂ ನಿಜೋತ್ಸಾಹಮಂ || ೬೯ ||

ಚಂ|| ಕುದಿರೆ ನಿಜಾಧಿಪಂಮುಳಿದು ಚೋದಿಸೆ ಮಾರ್ಬಲದೊಡ್ಡನೆಱ್ದು ತೀ|
ವಿದ ತೊಱೆಯಂ ತಗುಳ್ದು ರಿಪುಯಂ ನಡೆ ಪಾಯ್ದು ಕಱುತ್ತುಮಟ್ಟಿದು ||
ರ್ವಿದ ವಿವಿಧಾಯುಧಂಗಳೊಳಗೊಂದನೆ ಸೈರಿಸಲಾಱದಲ್ತೆ ಸಿಂ |
ಹದ ಮಱಿ ಮೇಘಘರ್ಜನೆಗೆ ಸೈರಿಸದಂತೆ ಕಶಾಭಿಘಾತಮಂ || ೭೦ ||

ಕಂ|| ಶ್ರೀಯಂ ಮೆಱೆಯೆಲ್ ನೆಲನಂ |
ಕಾಯಲ್ ಮನಮೆಯ್ದಿ ಜಯಮನೆಯ್ದಲ್ ಬಗೆಯಂ ||
ಸೋಯಲ್ ಬಯಸುವವಂ ತಾ |
ನಾನೇಯ ತುರಗಮನೆಯ್ದಿ ಪೊರೆವುದು ಭೂಪಂ || ೭೧ ||

ಪೂಜಿಸುವುದು ನಿಚ್ಚಂ ನೀ |
ರಾಜಿಸುವುದು ಪರ್ವದಂದು ಜಯಮಂಗಲಮಂ ||
ಬಾಜಿಸುವುದು ಶುಭಲಕ್ಷಣ |
ವಾಜಿಗಳಂ ನೋಱ್ಪುದುದುಯ ವೇಳೆಯೊಳರಸಂ || ೭೨ ||

ಸ್ನಾನಂ ಪಾನಂ ಖಾನ(ಣ)ಮು |
ನಾನೇಯಾಶ್ವಕ್ಕಮರಸ ನಾರಯ್ಯದೆ ತಾಂ ||
ಸ್ನಾನಂ ಭೋಜನಮಂ ತಾ |
ನೇನಂ ಮಾಡಲ್ಕೆವೇಡ ವಿಜಯಮನೊಲ್ಪಂ || ೭೩ ||

ಕಂ|| ವಾಜಿಯೆ ಮೊದಲಾವಿಜಯ |
ಕ್ಕಾಜಿಯೊಳರಸಂಗೆ ಬುದ್ಧಿವಂತಂಗದಱಿಂ ||
ವಾಜಿಗಳನೆಯ್ದಿ ಪೊರೆವುದು |
ಪೂಜಿಸುವುದು ವಿಜಯಲಕ್ಷ್ಮಿಯಂ ಬಯಸುವವಂ || ೭೪ ||

ಕ್ರೂರಾಯುಧಂಗಳುರ್ಚಿ ವಿ |
ದಾರಿತವಪ್ಪೊಡೆಯು(ಡವು)ಮಂತೆ ಬೆನ್ನೊಳ್ ಮುಂ ಭ ||
ರ್ತಾರನಿರಿ ಕ(ತ್ತ)ಳ(ಳಿ)ಯದ ಸಾವನು |
ದಾರಹಯಂ ಪರಿಕು(ಗು)ಮರಿಬಲಾಂಭೋನಿಧಿಯೊಳ್ || ೭೫ ||

ಅರಸಂಗೆ ಶೀಘ್ರಮಪ್ಪಾ |
ತುರಗಗಜ..ಳ್ ||
ಪರಿದೆಯ್ದಿ ಮಾಳ್ಪ ಕಜ್ಜಂ |
ಕರಿಗಂ ಕಾಳಾಳ್ಗ ಮೇಕೆ ಮಾಡಲ್ಕಕ್ಕುಂ || ೭೬ ||

ಆಷಾಢ ಮಾಸದಂದಾ |
ಶೇಷಿಯ ಕರ್ಕಟಕವಾರಿ ತುರಗದ ಮೆಯ್ಯಂ ||
ಲೇಪಿಸಿದಂತರಿಸಿನಮಂ |
ಭೂಷಣಮಂ ಪೂವಸಹಿತ ಮೆತ್ತುಗೆ[1] ತುರಗಂ || ೭೭ ||

ಮಧುಪಾನೋತ್ಸವದೊಳ್ |
ವಿಧುಮುಖಿಯರಗಾಡಿ ಕಾಮುಕರ್ಕಳ ಮನಮಂ ||
ಮಧುಪಾನದೊಳಲೆವಂತಿರೆ |
ಮಧುಪಾನೋತ್ಸವ ತುರಗಮಲೆಗುಂ ಮನಮಂ || ೭೮ ||

(ಋತುಮಾಸ(ನ)ಪಿಂಡಕ್ಷ್ಣಮು)

ಪ್ರತಿಪಾನಮೆಂಬುದಾಱಂ |
ಋತುಗಳೊಳಂ ಬೇಱೆ ಬೇಱೆ ದಿವ್ಯೌಷಧಸಂ ||
ಯುತದೊಳ್ ಕುಡುವುದು ತುರಗಂ |
ಘೃತಮುಂಡು ಬಲಸ್ಥನಕ್ಕು ಮತ್ತಮನುನಯದಿಂ || ೭೯ ||

ಪುಳಿಮಧುರಮುಪ್ಪುತಿಕ್ತಂ |
ಗಳೆಂದು ತೊವರೆಂದು ಕಟುಕಮೆಂದಪ್ಪುವು ಕೊ ||
ಳ್ಗಳನಱಿದು ಗಂಧಸಹಿತಂ |
ಬಳಯುತಮಂ ಕುಡುಗೆ ಹರಿಗೆ ಪಾನಾದಿಗಳಂ || ೮೦ ||

---
1 ಮೆಯ್ಯ

ಕಂ|| ಕದ(ಡಿ)ದುದು ಪುಳಿತುದು ಬಂ |
........ದುಗಟ್ಟಿತು ಪಲವುದೆವಸಮಿರ್ದುದು ಕೊಳೆನಾ ||
ರ್ವುದು ರುಚಿಯಲ್ಲದ ಪಿಂಡಂ |
ಕುದಿರಿಗೆ ತಾಂ ಪೊಲ್ಲದೆನಿಪ ಕವಳಮನಿಷ್ಟಂ || ೮೧ ||

ಮನಕೆವರೆ ನೋಡಿ ಮುನ್ನದ |
ನನುಭವಿಸಿದ ಗಂಧಮಱಿವ ಸವಿಯಱಿವವರಾ ||
ಗನುನಯದಿಂ ತರಿಸುಗೆ ಸಂ |
ಜನಿತ ಸುಖಾವಹಮುಮಪ್ಪಬಲಮಂ ಬಲಮಂ || ೮೨ ||

ಮಧುಕಂ ಮುಷ್ಟಿಗೆ ಸಕ್ಕರೆ |
ಮಧುಜೀವನಿ ಪದ್ಮಕಂಗಳಂ ತಳ್ತೊಳ್ಮಾ ||
ಗಧಸಹಿತಂ ಪ್ರತಿಪಾನದ |
ವಿಧಾನಮಂ ಶರದದಂದು ಮಾಳ್ಕನುನಯದಿಂ || ೮೩ ||

ಹಿಪ್ಪಲಿ ಕೊತ್ತುಂಬ(ರಿ)ಲಿ ಸದ |
ಗುಪ್ಪೆ ವಿಳಂಗಾಗ್ನಿ ಲೋಧ್ರ ಸಿಂಧೂದ್ಭವಮಂ ||
ತಪ್ಪದೆ ಸಮಮಾಗಿರೆ ಯೋ |
ಜಿಪ್ಪುದು ನುತಶಿಶಿರಋತುವಿನೊಳ್ ಪ್ರತಿಪಾನಂ || ೮೪ ||

ಮಾಗಧಲೋಧ್ರಂ ಮಾಕ್ಷಿಕ |
ನಾಗರಮುಸ್ತಾ ಪ್ರಿಯಂಗುವಂ ಕಣ್ಣೊಳ್ ಸಂ ||
ಯೋಗಂಗೆಯ್ವುದು ಹೇಮಂ |
ತಾಗಮದೊಳ್ ಕುಡೆ ಮನೋಹರಂ ಪ್ರತಿಪಾನಂ || ೮೫ ||

ಅಲ್ಲಂ ಪ್ರಿಯಂಗು ಲೋಧ್ರಂ |
ಬೆಲ್ಲಮುವುಂಗುರುಮುಮಧುಕ ಸಂಮಿಶ್ರಿತಮಂ ||
ಕಳ್ಳಂ ಪ್ರಭಾತದೊಳ್ ತ |
ಳ್ವಿಲ್ಲದೆ ಮಾಳ್ಪುದು ನಿದಾಘದೊಳ್ ಪ್ರತಿಪಾನಂ || ೮೬ ||

ಮಾಗಧ ತೈಲಂ ಸೈಂಧವ |
ನಾಗರ ಸುರದಾರುಗಳ್ ಸುರಾಪಾನದ ಸಂ ||
ಯೋಗದೊಳಶ್ವಂಗಳ್ಗೆ ಘ |
ನಾಗಮದೊಳ್ ಕುಡೆ ಮನೋಹರಂ ಪ್ರತಿಪಾನಂ || ೮೭ ||

ಕಂ|| ಹಿಪ್ಪಲಿ ಸಿಂಧೂತ್ಥಂ ಸದ |
ಗುಪ್ಪೆ ಮರಿಚಮಗ್ನಿ ನಾಗರಂ ವಾಸಿತದಿಂ ||
ದೊಪ್ಪುವ ಕಳ್ ಪ್ರತಿಪಾನಕ |
ಮಪ್ಪುದು ತುರಗಕ್ಕೆ ವರುಷಋತುವರ್ತತದೊಳ್ || ೮೮ ||

ಭಾಷಾವಿದರುಂ ಬುಧರುಂ |
ದೋಷಪರೀಕ್ಷಕರುಮಿಂತು ಭಾವಿಸುವುದಿದಂ ||
ಪೋಷಣವಿಧಿಯಂ ತುರಗವಿ |
ಭೂಷಣಮಂ ಚಂದ್ರವರ್ಮಕೃತಿಸಪ್ತಕಮಂ || ೮೯ ||

ಇಂತು ಸಪ್ತಮಾಧ್ಯಾಯಂ*

---

*ಒಂದೆರಡು ಪ್ರತಿಗಳಲ್ಲಿ "ಅಷ್ಟಮಾಧ್ಯಾಯಂ" ಎಂದಿದೆ.

ಅಷ್ಟಮಾಧ್ಯಾಯಂ

ನೀರಾಜನವಿಧಿ

ಕಂ|| ನೀರಾಜನವಿಧಿಯಂ ವಿ |
ಸ್ತಾರದೆ ಮಾಡುವುದರಾತಿಸಂಕುಲಮಂ ಸಂ ||
ಹಾರಿಸಲುಂ ವಿಜಯವನವ |
ಧಾರಿಸಲುಂ ನೃಪತಿ ಬಗೆವೊಡುದಿತೋದಿತಮಂ || ೧ ||

ಆಶ್ವಯುಜ ಶುದ್ಧ ಬಿದಿಗೆಯೊ |
ಳಶ್ವಾನೀಕಕ್ಕೆ ರಕ್ಷೆಯಿಕ್ಕುವುದು ಧರಾ ||
ಧೀಶ್ವರನುದಾರಧೀರಗು |
ಣಾಶ್ವಕೆ ಜನಿತೋತ್ಸಹದೆ ಮಹಾಮಂಗಲಮಂ || ೨ ||

(ಮಹಾನವಮಿಯ ಕ್ರಮಂ)

ಆಯತ ಸಂಸ್ಥಾನಬೃಹ |
ತ್ಕಾಯನ ನತಿಧವಲವರ್ಣನಂ ದ್ವಿಜನಂ ದೀ ||
ರ್ಘಾಯುವ ನುತ್ತಮಜವನಂ |
ತೋಯಧರಸ್ವನನನಮಳಮುಖತಾಲುಕನಂ || ೩ ||

ಲಕ್ಷಣಸಂಪನ್ನನನವ |
ಲಕ್ಷಣರಹಿತನನುದಾರತೇಜೋನಿಧಿಯಂ ||
ಶಿಕ್ಷಿತನಂ ಚತುರಸ್ರವಿ |
ವಕ್ಷಿತನಂ ಸಕಲಜನಮನೋರಂಜಕನಂ || ೪ ||

ಉದಿತೋದಿತನಂ(ದೇ)ರೇವಾ |
ನದಿಯಿಂದುತ್ತರದೊಳಾದ ಭೂಮಿಜನಂ ಪ ||
ಟ್ಟದ ಕುದಿರೆಯೆನಿಸಿ ಮಾಡುವು |
ದದರ್ಕೆ ಸಮನಾಗಿ ಬೀಜ(ಯೋಜೆ)ವಾದು(ರು)ವನೊಂದಂ || ೫ ||

ಲಕ್ಷಣಯುಕ್ತಂ ಸರ್ವಭ |
ರಕ್ಷಮನಂ ಕ್ರೋ(ತಾ)ಧಿರಾಜನೆನಿಪನಿಲಜನ(ವ)ಂ ||
ಶಿಕ್ಷಿತವಿಧನಂ ಪಂಚವಿ |
ಧಕ್ಷಾಂತಿಯ ಶೋಣವರ್ಣನದು ಯುವರಾಜಂ || ೬ ||

ಆರಿಯಂ ಕುಲಬಲತೇಜ |
ಸ್ಸ್ವರಸತ್ವಂಜವಪ್ರಮಾಣಲಕ್ಷಣಗುಣದೊಳ್ ||
ಪರಿಪೂರ್ಣನಶುಭರಹಿತನ |
ನರಸಂ ಸೇನಾಧಿಪತಿತುರಂಗಮನಕ್ಕುಂ || ೭ ||

ಕಂ|| ಬೋರಂ ಚತುರಸ್ರ ಗುಣೋ(ಣಾ) |
ಧಾ(ದಾ)ರಂ ತೇಜಸ್ವಿ ಸರ್ವಲಕ್ಷಣಯುಕ್ತಂ ||
ವೀರಂ ಬೃಹಚ್ಛರೀರನು |
-ದಾರಂ ದ್ವಿಜಕುಲನಮಾತ್ಯವಾಹನಮಕ್ಕುಂ || ೮ ||

ಇಂತಪ್ಪ ಬಣ್ಣಮಿಂಪೇ |
ಟ್ದಿಂತಪ್ಪ ಸುಲಕ್ಷಣಂಗಳಂ ಪಡೆದಂಗ |
ತ್ಯಂತಶುಭಂ ಪಡೆಯದೊಡಂ |
ಭ್ರಾಂತಿಸದರ್ಚಿಸುವುದನ್ಯವರ್ಣೋತ್ತಮಮಂ || ೯ ||

ವಿಜಯಗಜವಿಜಯಹಯಮುಂ |
ವಿಜಯಭಟಂ ವಿಜಯವನಿತೆಯೆಂಬೀ ರತ್ನ ||
ವ್ರಜದೊಳ್ ಲಕ್ಷಣಮಂ ಭೂ |
ಭುಜನರಸಲ್ವೇಡ ಶುಭ[1]ಮುಮಂ ಗುಣರತ್ನಾ || ೧೦ ||

*ಗುಡಿ(ಡ)ಶಾಲಿತಂಡುಲಂ ಕ |
ನ್ನಡಿ ಕಲಶಂ ಗಱುಕೆ ತೋರಣಂ ದಧಿ ಪುಷ್ಪಂ ||
ಸೊಡರೆಸೆವ ರಂಗವಲಿ ಯೆಲೆ |
ಯಡಿಕೆ ಪವಿತ್ರಂ ಪ್ರಸಿದ್ಧಮಿವೆ ಗುಣರತ್ನಾ || ೧೧ ||

ಶ್ವೇತಾತಪತ್ರಮಂಗಳ |
ಗೀತಾನಕಪಟಹ ಹೇಮ[2]ಚಾಮರಗಣಿಕಾ ||
ವ್ರಾತಾಶ್ವಂ ಸುಭಟರ ಸಂ |
ಘಾತಂ ಕಹಳಾರವಂ ಮಹಾನವಮಿವರಂ || ೧೨ ||

ತೊಱೆಯೊಳ್ ಸಮುದ್ರದೊಳ್ ಪೆ |
ರ್ಗೆಱೆಯೊಳ್ ತಾವರೆಗೊಳಂಗಳೊಳ್ ಮತ್ತಂ ತಾಂ ||
ಮೆಱೆದಭಿಷೇಕಂಗೆಯ್ವುದು |
ಪಱೆ ಕಹಳಾಶಂಖ[3]ಭೂಷಣಂಗಳ ದನಿಯಿಂ || ೧೩ ||

ಪೂಸಿದ ಮಣ್ಣಂ ಕರ್ಚವು |
ದಾಸರಮಂ ಪಂಚಗವ್ಯಮಂ ತಳೆದು ಜಲಾ ||
ವಾಸಮನರ್ಚಿಸಿ ವಾಜಿಗೆ |
ಪೂಸುಗೆ ಕುಂಕುಮಹರಿದ್ರೆ ಗಂಧಾದಿಗಳಂ || ೧೪ ||

1 ಮುಮವೆ 2 ತೋಮರ 3 ವಾದಿತಂ ?
*ಒಂದು ಪ್ರತಿಯಲ್ಲಿ ಈ ಭಾಗದ (೧೦-೧೭ ಪದ್ಯಗಳ) ಒಂದು ಓಲೆ ಗಳಿತವಾಗಿದೆ.

ಕಂ|| ಕಲಶದ ತೊವರಂ ರತ್ನಾ |
ವಲಿಯೊಳ್ ಸಂಮಿಶ್ರ[1]ಪುಷ್ಪಮಂ ಮಸ್ತಕದೊಳ್ ||
ತಳೆದಲ್ಲಿ ಬಣ್ಣವುರದೊಳ್ |
ಬಳಿದು ಬಱಿಕ್ಕಿಕ್ಕಿ ಮೇಖಲಾಲಂಕೃತಿಯಂ || ೧೫ ||

ಪುಟ್ಟಿಗೆಯಂ ಮಣಿಸರಮಂ |
ಪಟ್ಟೆಗೆಯಂ ರಕ್ಷೆಯಂ ಪವಿತ್ರಾದಿಗಳಂ ||
ಕಟ್ಟಿ ಕೊರಲೊಳ್ ವಿರಾಜಿಸೆ |
[2]ಕಟ್ಟುಗೆ ಪಟ್ಟವ(ಂ)ಲಲಾಟ ಪಟ್ಟಾಂತರದೊಳ್ || ೧೬ ||

ಅರಿಸಿನಮಪ(ಪಾ)ಮಾರ್ಗಂ ಸಿತ |
ಸರುಷಪ[3]ಮಿಂಗಮದುರ್ವಳ್ಳಿ ನಿಂಬಂ ಲೋಧ್ರಂ ||
ಸಿರಿಸಂ ಬಜೆ ಗುಗ್ಗುಳಮಿ |
*(ಪ್ಪೆರಾಜ[4]ವೃಕ್ಷಂ) ಸರಳಂ ಸಲ್ಲೋಹಮುಪ್ಪು ಗೋರೋಚನಮಂ || ೧೭ ||

[5]ಕಟ್ಟುಗೆ ಕೊರಲೊಳ್ ಸೀರೆಯ |
ಪೊಟ್ಟಣ(ಳ)ಮಂ ಮಾಡಿ ಧಾನ್ಯಸಮೇತಂ ನೋಡಲ್ ||
ದಿಟ್ಟಿಗಳಾಗವು ವಾಜಿಗ |
ಮಪ್ಪವು ರಾಕ್ಷಸಪಿಶಾಚಭೂತಗಣಂಗಳ್ || ೧೮ ||

ಸುರರಾಜಾಸ್ಥಾನದ ಮಣ್ |
[6]ಸುರಮದಗಜ ಕೋಡಮಣ್ಣ ಮುಖಮಂ ನಾ ||
ಗರಮನೆಯ ಮೃತ್ತಿಕೆಯುಮಾ |
ನರನಾಥಾಲಯದ ಮೃತ್ಸ್ನೆಯುಂ ಹೃಲ್ಲೇಪಂ || ೧೯ ||

ರಂಗವಲಿ ತೋರಣಂ ಗುಡಿ |
ಮಂಗಳವಱೆ ವೇದಘೋಷಶೇಷಾಕ್ಷತ ಪು ||
ಷ್ಪಂ ಗಂಧದೀಪಧೂಪ ಚ |
ಯಂಗಳಿನೊಪ್ಪುವ ವಿಶಾಲ ಶಾಲಾಂತರದೊಳ್ || ೨೦ ||

ಹೋಮಂಗೆಯ್ಸುವುದಲ್ಲಿ ಧ |
ರಾಮರರಿಂದವರ್ಗೆ ಕುಡುಗೆ ದಕ್ಷಿಣೆಯಂ ಸಂ ||
ಗ್ರಾಮಜಯಮಪ್ಪ ಪರಕೆ ಧ |
ರಾಮರರೊಸೆದಿತ್ತ ಶೇಷೆ ಕಲ್ಯಾಣಕರಂ || ೨೧ ||

1 ಮಪ್ಪುದಂಮಸ್ತ 2 ಕಟ್ಟದ ಪಟ್ಟಂ ಲಲಾಟಪಟ್ಟಾಂತರದೊಳ್, ಪಟ್ಟಮಂ ಲಲಾಟಾಂತರದೊಳ್ 3 ಗರ್ದುಗಮರ್ದು, ಗಂಧಮುಮರ್ದು 4 ಲೋಹಣಂ ರೋಚನಮಂ 5 ಕಟ್ಟಿ 6 ಣ್ಣರೆದಾ......... ಮತ್ತದಱೊಳ್ಳಾ, ಉರಗಾಲಯು ಮೃತ್ತಿಕೆಯಂ ನರ
*ಈ ಕಂದಪದ್ಯದಲ್ಲಿ ಛಂದೋ ದೋಷವಿದೆ- "ಪ್ಪೆರಾಜವೃಕ್ಷಂ ಸಲೋಹ ಗೋರೋಜನಮಂ" ಎಂದಿರಬಹುದು

ಕಂ|| ರೇವಂತಪೂಜೆಯಂ ಸ |
ದ್ಭಾವದೆ ಮಾಡುವುದು ಚರುವು(ಕ)ಬಲಿ ತಾಂಬೂಲಂ ||
ಪೂವಕ್ಷತೆ ಗಂಧಂ ಕೆ |
ಯ್ದಾವಿಗೆ ಪಟುಪಟಹಶಂಖ ಭೇರೀರವದಿಂ || ೨೨ ||

ಜಯ ದೇವ ಭಾನುಪುತ್ರಕ |
ಜಯ ತುರಗಾರೂಢ(ರೋಹ) ಸಾರವಿಜ್ಞಾನನಿಧೀ ||
ಜಯ ತುರಗಹೃದಯಚಿತ್ತಾ |
ಜಯ ತುರಗಪ್ರಿಯ ಸುರೇಜ್ಯ ಜಯ ರೇವಂತಾ || ೨೩ ||

ಎಂದು ಪೊಡಮಡಿಸುವುದು ನೃಪ |
ನಂದನನಂ ಸೂರ್ಯನಂದನಂ ರೇವಂತಂ ||
ಗೆಂಡುಂ ಸಂಗ್ರಾಮಜಯಾ |
ನಂದಮನಧಿಪತಿಗೆ ಮಾಡುಗುಂ ರೇವಂತಂ || || ೨೪ ||

ಅಭಿಷೇಕಂ ತೋರಣದೊಳ್ |
ವಿಭೂತಿಯಿಂ ತಂದು ಪಟ್ಟವರ್ಧನಕೆ ಜಗ ||
ತ್ರ್ರಿಭುವಂ ಪೊಡಮಡಿಸುವುದಿರು |
ಳಭಿಮುಖನಾಗಿರ್ದು ಶಾಸ್ತ್ರ[1]ವೇದ್ಯಂ ವೈದ್ಯಂ || ೨೫ ||

(ಮಂತ್ರಂ)

ಜಯ ಪದ್ಮಜಾಶ್ರುಸಂಭವ |
ಜಯಜಯ ಹೋಮಾಗ್ನಿಸಂಭವೋತ್ತಮವಾಹಾ ||
ಜಯ ಮೃ[2]ಗ್ಯಲೂಕಸಂಭವ |
ಜಯಜಯ [3]ದುಗ್ಧಾಬ್ಧಿಮಥನಸಂಭೂತ ನಮೋ(ಮಃ) || ೨೬ ||

ಜಯಜಯ [4]ದನುಜಕುಲ ವಿಧೇ(ಕ್ಷ)ಯ |
ಜಯವಿಜಯ ಶ್ರೀವಿಭೂಷಿತಾ ಭರ[ಣಗ]ಣಾ ||
ಜಯಜಯನಿಜಾಧಿಪತಿ ಹಿತ |
ಜಯವಿಜಯಾಹವಜಯಾಶ್ವ ಹಯರಾಜ ಜಯಾ || ೨೭ ||

* ಜಯಜಯ(ತು) ಮಮಶತ್ರುಪಕ್ಷ |
ಕ್ಷಯಕರ ಜಯಜಯ ತಥಾತು ಮಮ ವಿಜಯಕರಾ ||
ಜಯಜಯ(ತು)ರಾಜ್ಯಲಕ್ಷ್ಮೀ |
ಪ್ರಿಯತಮ ಯಿವ ಜಯತು ಜಯತು ಕೀರ್ತಿಶ್ರೀಯಂ || ೨೮ ||

1 ಶಸ್ತ್ರಂ, ಶಸ್ತ್ರಂ, ವೈದ್ಯದಿವ್ಯಂ 2 ಮೃಗಮುಲೂಕಿಗಂ 3 ಮಗ್ನಾಬ್ಧಿ ಮಥನನೋತ್ಪನ್ನಾಂ ಬುಂಥಾಬ್ಧಿ 4 ಕುಲಕ್ಷಕರ, ದನುಕುಲಕ್ಷರ

* ಈ ಕಂದವು ಒಂದು ಪ್ರತಿಯಲ್ಲಿ ಇಲ್ಲ, ಇದರಲ್ಲಿ ಶುದ್ಧಪಾಠವೂ ಇಲ್ಲ.

ಕಂ|| ಎಂದು ಪೊಡಮಡುತೆ ಪರಮಾ |
ನಂದದೆ ತಾಂ ಪಟಹ ಶಂಖ ಕಹಳಾ[1]ಭೇರೀ ||
ಸಂದೋಹವೆಸೆಯೆ ಜಯಜಯ |
ವೃಂದಮೆ ದೈವಂಗಳೆಂದು ಮನ್ನಿಸು(ಸಿ)ಭೂಪಂ || ೩೯ ||

ಮಂಗಳ ಜವುಳ[2]ಝುಳಂಬಮ |
ನುಂಗುರಮಾ ಕರ್ಣಶೋಭೆಯಂ ಪ್ರಿಯದಿಂ ವೈ ||
ದ್ಯಂಗಿತ್ತು ಬಟಿಕೆ ಶಸ್ತ್ರಚ |
ಯಂಗಳನರ್ಚಿಸುಗೆ ಸಾರ್ವಭೌಮಂ ಕ್ರಮದಿಂ || ೩೦ ||

ಇದು ನೀರಾಜನವಿಧಿ[3]ಯೆಂ |
ಬುದು ಪೂಜ್ಯಂ ಚಂದ್ರಮತದೊಳೆಂಟನೆಯಧ್ಯಾ ||
ಯದ ವಿರಚನೆ ಪತಿಗಂತ |
ಭ್ಯುದಯಕರಂ ಶ್ರೀಬಲಾಯುರಾರೋಗ್ಯಕರಂ || ೩೧ ||

ಇಂತು ಅಷ್ಟಮಧ್ಯಾಯಂ

---

1 ಭೇರೀಮೃದಂಗಂಗಳೆಸೆ 2 ಝುಣಂಬೆರಲುಂಗುರ ರಮಣಂ, ಬೆರಲುಂಗುರ 3 ಯಂ | ಬುಧಪೂಜ್ಯ

ನವಮಾಧ್ಯಾಯಂ

ಹಯಶರೀರ ಪ್ರದೇಶ ಜ್ಞಾನಂ

ಕಂ|| ಮಾನಿತ ಹಯಪ್ರದೇಶ |
ಜ್ಞಾನಂ ಕ್ಷಾರಾಗ್ನಿಶಸ್ತ್ರ ಕರ್ಮಜ್ಞಾನಾ ||
[1]ನೂನಂ ಪ್ರಗಾಢ ಕ್ರಮದಿಂ |
ಸ್ಥಾನದ ನಾಮಾಭಿಧಾನಮಂ ಪ್ರಕಟಿಸುವೆಂ || ೧ ||

ಕುದಿರೆಗಳ ಶರೀರದೊಳಂ |
ಪ್ರದೇಶನಾ[2]ಮಮುಮನಱಿದು ಶಸ್ತ್ರಾಗ್ನಿವಿಧಂ ||
ಮೊದಲಾದ ಕ್ರಿಯೆಯಂ ಮಾಡಲ್ |
ಪ್ರದೇಶನಾಮಮುಮಂ[3]ನೆಯ್ದೆ ಪೇೞ್ವೆಂ ಕ್ರಮದಿಂ || ೨ ||

ಕೆಳಗಣ ಮೇಲಣ ಪ[4]ಲ್ಪೇ |
ಗಳ ಪಿಡಿ[5]ದಿಹ ಸಂದು ದಂತಪೀಠಿಕೆಯಕ್ಕುಂ ||
ಕೆಳ ಅಣಲ ಮೇಲೆ ಪಲ್ಲಂ[6] |
ತೊಳವಕ್ಕಂ ಗಂಡ(ಥ)ಮೆಂಬ ಪೆಸರಿಂ ತೋರ್ಕುಂ || ೩ ||

ಕಟವಾಯಂ ಸಂಧಿಗಳಂ |
ಘಟಿಯಿಸುಗುಂ ಸೃಕ್ವಿಣಿಯದೆಂಬ ಪೆಸರುಂ ಮೇಳ್ವಂ ||
ತಟ ಗೊತ್ಸಂದೇಶಮುಮಾ |
ಕಟಜಿಹ್ವಾಬಂಧಮೆಂಬ ಪೆಸರಿಂ ತೋರ್ಕುಂ || ೪ ||

ತಾಲುಗೆಯೆಂಬುದು ಜಿಹ್ವೆಯ |
ಮೇಲಿರ್ಕುಂ ತಾಲುವಿಂದೆ ಕೆಳಗಣ (ಗುಂ)ನೆಲೆಯುಂ ||
ತಾಳಿಗೆದೆರೆ ದ್ವಾತ್ರಿಂಶತ |
ಮಾಳಿರ್ಕುಂ ಕೂರ್ಮೆಯೆಂಬ ಪೆಸರಿಂ ತೋರ್ಕುಂ || ೫ ||

ಆತೆರೆಗಳ ನಡುರೇಖೆಗ |
ಮೋತಿರ್ಕ್ಕುಂ ವಾ(ಸೂ)ಜಿಯೆಂಬ ಪೆಸರುಂ ಮತ್ತಂ ||
ಆತೆ(ಥೆ)ರೆಗಳಮೇಲ್ ರೇಖೆಗೆ |
ಖ್ಯಾತಂ ತಾಂ ತಾಳುವಂಶಮೆಂಬಭಿಧಾನಂ || ೬ ||

1 ರೂಢಂ, ಧೀನಂ 2 ನಾಮಮನಱಿದವರ್ಗೆ ಶಸ್ತ್ರಕರ್ಮಾಗ್ನಿಕರ್ಮಬಂಧನಾಸ್ಥಾಪನೆ ಮೊದಲಾಗೊಡೆಯ ಕ್ರಿಯೆಗಳಂ ಮಾಡಲ್ಪಾರದಪ್ಪುದಱಿಂ 3 ತಿಳಿಯಪೇೞ್ವೆ 4 ಲ್ಪೆಗ್ಗ 5 ಡಿಪ್ಪೊಸಡುಗಳ್ಗೆದಂತ 6 ಲ್ಲಂಪೊಲೆದಹ

ಕಂ|| ಅಣಿ(ಣು)ಗೆಯೊಳೆ ಪುಟ್ಟಿತೋರ್ಪಾ |
ಅಣಲ್ಪಲ್ಗಂ ದಂತಮೆಂಬ ಪೆಸರುಂ ಮತ್ತಾ ||
ಅಣಲ್ಗಳ ದಾಡೆಯು ಪಲ್ಲಿಂ |
ಗಣಿಸುಗೆ ತಾಂ ದಂಷ್ಟ್ರೆಯೆಂಬ ಪೆಸರಿ ಸಿದಾನಂ || ೭ ||

ಕಡೆವಲ್ಲಂ ನಾಲ್ಕಕ್ಕುಂ |
ಪಡೆಗುಂ ತಾಂ ಪಾರಿಕ್ವಮೆಂಬಾ ಪೆಸರಂ ||
ನಡುವಲ್ ನಾಲ್ಕಕ್ಕುಂ ತಾಂ |
ಗಡಣಿಪುದಾ ಮಧ್ಯಮೆಂಬ ಪೆಸರಂ ಪಡೆಗುಂ || ೮ ||

ಮುಂಬಲ್ಲಂ ನಾಲ್ಕಕ್ಕಮು |
ದೆಂಬುದು ಸಂದಂಶಮೆಂಬ ಪೆಸರುಂ ಮೇಗಣ ||
ಕೆಂಬಲ್ಲುಮುಗ್ರದಂತವ |
ದೆಂಬುದು ತಾಂ ಪಲ್ಲ ಪೊಱಗು ಬಾಹ್ಯಮೆನಿಕ್ಕುಂ || ೯ ||

ಒಳಗಭ್ಯಂತರಮಾ ತುದಿ |
ಗಳಿಗಗ್ರಂ ತಾನದೆಂಬ ಪೆಸರುಂ ಮೊದಲೊಳ್ ||
ತಳಮೂಲಮೆಂಬ ಪೆಸರುಂ |
ಪೊಳಪೊಱತುದಿಮೊದಲ್ಗಳೆಲ್ಲ ಪಲ್ಲಿನ ಭೇದಂ || ೧೦ ||

ಪಲ್ಲುಮ್ಮುಚ್ಚಿಪರ್ಪಾ [1]ಮೇಲಣ |
ಪಲ್ಲೋಷ್ಠದಕೆಂತುಮೋಷ್ಠಮೆಂದುಂ ಪೆಸರುಂ ||
ನಿಲ್ಲದಧರೋಷ್ಠ ಕೆಳಗ |
ಕ್ಕಲ್ಲಿಯೆ ಚುಂಬುಕೆಂಬ ಪೆಸರನನುಕರಿಸಿರ್ಕುಂ || ೧೧ ||

ಉತ್ತರದೋಷ್ಠದ ನಡುವದು |
ಬಿತ್ತರಿಪ ಪ್ರಪಾನಮೆಂಬ ಪೆಸರಾ ಪ್ರಪಾನ ||
ದುತ್ತರ ಪ್ರೋಥಮುದಕ್ಕುಂ |
ಬಿತ್ತರ ಪ್ರೋಥದೆರಡುಕೆಲದ ನಾಸಾಪುಟಮುಂ || ೧೨ ||

ಪ್ರೋಥದ ಕಣ್ಣಿಡೆ ಘೋಣಮು |
ದಾತ್ತೆಱ ಮೂಗೆಸೆವಕಂಬಿ ನಾಸಾವಂಶಂ ||
[2]ಸ್ರೋತದ ಮಾರ್ಗೆಂಬಾ ಪೆಸ |
ರೋತಿರ್ಕುಂ ಮೂಗಿನೊಳಗುಮಶ್ವಾಗಮದೊಳ್ || ೧೩ ||

1 ಕೆಳಗಣ 2 ಶ್ರೋತಮಾರ್ಗೆಂಬ

ಕಂ|| ಕಣ್ಣೊಳಗಣ ಮೊದಲಿಂಗಂ |
ಬಣ್ಣಿಪೆ ನಯನಾಶ್ರುಪಾತಮೆಂಬಾ ಪೆಸರಂ ||
ಕಣ್ಣಾಪಾತದ ಮೇಲಣ |
ಕಣ್ಣಕ್ಷಿಗಣಂ ಗಣಂಗಳಪ್ಪ ಪೆಸರೆ ನಿಧಾನಂ || ೧೪ ||

ಕಣ್ಣಂ ಮುಚ್ಚಿಹ ಪೊಟ್ಟೆಯೆ |
ಸನ್ನುತವರ್ಕುಣಿಕೆಯಂದಱ ಮೇಲಣ ರೇಖಂ ||
ಬಣ್ಣೆಪೊಡದು ಕ್ಷಣಿಯಕ್ಕುಂ |
ಕಣ್ಣೊಳಗಣಬಿಳಿಯ ಆಲಿ ಶುಕ್ಲಮದಕ್ಕುಂ || || ೧೫ ||

[1]ಶುಕ್ಲದ ಭಾಗದ ಕರ್ಪುಂ |
ತೋರ್ಕುಂ ತಾಂ ಕೃಷ್ಣಭಾಗಮೆಂಬಾ ಪೆಸರಿಂ ||
ದಕ್ಕಸಿತಬಾಗೆನಡುವಿಗೆ(ರೆ) |
ಬರ್ಕುಂ ತಾಂ ವೃ(ದಿ) ಷ್ಟಿಭಾಗಮೆಂಬೀ ಪೆಸರುಂ || ೧೬ ||

ಕಣ್ಣಿನ ಪೊಟ್ಟೆಯ ಮೇಗದು |
ಬಣ್ಣಿಸೆ ನಯನಾಕ್ಷಿಕೂಟಮೆಂಬಾ ಪೆಸರುಂ ||
ಕಣ್ಣ ಪೊಱಪುರ್ಪುಗಳ್ಗಂ |
ನುಣ್ಣನೆ ಭ್ರೂಮಧ್ಯವೆಸರೆ ಹಯಶಾಸ್ತ್ರದೊಳಂ || ೧೭ ||

ಎರಡುಂ ಪುರ್ಬಿನ ನಡುವುಂ |
ಪೆರುಗುಂ ಭ್ರೂಕುಟಿಯದೆಂಬ ಪೆಸರದಕಕ್ಕುಂ ||
ವರಕಣ್ಣ ಮೊದಲ ಮಾಂಸದ |
ಕರ ಕೆಂಪೆ ಕಣೀರಮೆಂಬ ಪೆಸರಂ ಪಡೆಗುಂ ೧ ೧೮ ||

ಕಣ್ಣೀರ ಶುಕ್ಲಭಾಗ(ದ)ಕೆ |
ಬಣ್ಣಿಪ ಸು(ಷಿ)ರಕ್ಕೆ ತಾನುಮಾಗಸಮೆಂಬುದು ||
ಕಣ್ಣಿನ ಪೊಱಗಣ ಕಡೆಯಣ |
ಕಣ್ಣಿಂಗಪಾಂಗಮೆಂಬ ಪೆಸರಂತಕ್ಕುಂ || ೧೯ ||

ಸ್ತುಪ್ಪದ ಪುರ್ಬಿಡೆ ನೋಡ |
ಲ್ಕಪ್ಪುದು ಲಲಾಟಮೆಂಬ ಪೆಸರಿಂದಕ್ಕುಂ ||
ತಪ್ಪದೆ ಲಲಾಟಮೆಂಗುಂ |
ಬರ್ಪುದು ತಾಂ ಸ್ತೂಪಮೆಂಬ ಪೆಸರಂತಕ್ಕುಂ || ೨೦ ||

[1] ಶುಕ್ಲದ ಗೆಸೆವಗ

ಕಂ|| ಎರಡುಂ ಕಿವಿಯೆಡೆಗಕ್ಕುಂ |
ಸಿರಮೆಂಬಭಿಧಾನ ಸಿರದ ನಡುವೆಯುಂ ಮಸ್ತಕ ||
ವಿರೆ ಮಸ್ತಕದೆರಡು ಕೆಲ |
ನೆರೆ ಕಿವಿಯುಂ ಕರ್ಣಂಗಳೆಂಬ ಪೆಸರದಕಕ್ಕುಂ || ೨೧ ||

ಕಿವಿಗಳ ಮುಂದಣ ರೇಖೆಗೆ |
ಸವನಿಕು ತಾಂ ಕರ್ಣಕುಲಿಯುಮೆಂಬೀ ಪೆಸರುಂ ||
ಕಿವಿಯೊಳಗಣ ಬಯಲ್ಗಳುಂ |
ಸವನಿಪ ಶ್ರೋತ್ರಾ(ಸಿ)ಣಿಯೆಂಬ ಪೆಸರಂ ಪಡೆಗುಂ || ೨೨ ||

ಪಣೆ ಕಿವಿ ಕಣ್ಣೆಡೆಯೊಳ್ ತಾಂ |
ಗಣಿಯಿಸುಗುಂ ಕಟಕಮೆಂಬ ಪೆಸರುಂ ಚಿಬುಕದ ಮೇ ||
ಗಣ ಅಣುಗಳೆ ಹನು ವದಕಂ |
ಹನುವಿನ ನಡುವಣವುಗಳ್ಗೆ ಗಂಡಮದಕ್ಕುಂ || ೨೩ ||

ಗಂಡದ ಪೊಱಗಣ ಕೆಳಗಣ |
ತಂಡಕೆ ಹನುಚಕ್ರಮೆಂಬ ಪೆಸರದಕಕ್ಕುಂ ||
ಮಂಡನ ದಂತದು ಹನುಕಡೆ |
ಗಂಡಿರ್ಕುಂ ನಾಲ್ವತೆ(ರಡು)ಱು ಮಂತಿಮುಮಕ್ಕುಂ || ೨೪ ||

ಮತ್ತಂತಾ ಹಯದ ಕೊರಲೊ |
ಳುತ್ತಮ ನಡುವಣ ಪ್ರದೇಶ ನಿಗಳಮದಕ್ಕುಂ ||
ಬಿತ್ತರದ ಕಿವಿಯ ಪೊಱಗಂ |
ವರ್ತ್ತಿಕು ಬೆಡಗೆ(ಬಿದುವೆ)ಂಬ ಪೆಸರೆ ಹಯಶಾಸ್ತ್ರದೊಳಂ || ೨೫ ||

ಬೆಡ(ದು)ವಿನ ಸಮೀಪದೆಡೆಯುಂ |
ಪಡೆವುದು ವರ್ಣಿಯದೆಂಬ ಪೆಸರಂ ಮತ್ತಾ ||
ನಡುಕಂಠನಾಳಿಯಿರ್ಕೆಲ |
ದೆಡೆಗಂ ಮನ್ಯುವದೆನಿಪ್ಪ ಪೆಸರೆಸೆದಿರ್ಕುಂ || ೨೬ ||

ಮನ್ಯುಗಳ ತಲೆಯ ಯೆಡೆಯುಂ |
ಪ್ರದೇಶಕಂ ಗ್ರೀವಮೆಂಬ ಪೆಸರದಕಕ್ಕುಂ ||
ತದಧರದ ಮೇಲ ಪೆಗಲ್ಗಂ |
ಸ್ಕಂಧಮುಮೆಂದೆಂಬ ಪೆಸರೆ ತುರಗಾಗಮದೊಳ್ || ೨೭ ||

ಸ್ಕಂಧದ ಮೇಲಣ ವಳಯ |
ಕ್ಕೆಂದುಂ ಕೇಸರಮದೆಂಬ ಪೆಸರುಂ ಕೇಸರ ||
ದಿಂದೆ ಕೆಳಗೆರಡು ವೃದ್ಧರ |
ಸ್ಕಂಧದ ಕೆಲ ಕೇಸರಂಗಳುಂ ಕಾಕಸೆಯುಂ || ೨೮ ||

ಕಂ|| ಕಂಠದ ನಡುವಳಯದ ಪೆಸ |
ರುಂಟೆನಿಸುಗು ಕಕ್ಷವದಱ ನಡುವಣ ದೇಶಂ ||
ಕಂಠವದೆನಿಸಿರೆಕೊಳ್ವುದು |
ಗೆಂಟುಂ ನಿಗಳಾದಿ ಕಂಠಕಡೆ ಪನ್ನೊಂದುಂ || ೨೯ ||

ಮತ್ತದು ಕಂಠದ ಕೆಳಗಂ |
ಜತ್ರುವೆ ತಾನೆಂಬ ಪೆಸರುಮದಱಿಂ ಕೆಳಗುಂ ||
ವರ್ತಿಕು ವಕ್ಷಮದೆಂಬುದು |
ಮತ್ತಂ ವಕ್ಷದೆಯೆಡೆಯೆ ಕ್ರೋಳ(ಡ)ಮದಕ್ಕುಂ || ೩೦ ||

ಆವಕ್ಷಮನಾಶ್ರಯಿಸಿದ |
ಠಾವೆರಡು ಕಕುದಸ ಬಂಧಿಯಂಶ(ಸ)ಮೆನಿಕ್ಕುಂ ||
ಆ ವಂಶದ ಮೊದಲಾಶ್ರಯ |
ಠಾವಿನ ಮುಯ್ವುಗಳೆ ದಾವಮೆಂಬಭಿಧಾನಂ || ೩೧ ||

ದಾವದ ಕೆಳಗುಂ ಬಾಹ್ಯವೆ |
ಭಾವಿಪೊಡಾ ಬಾಹ್ಯ ಮೂಲದೊಳ್ ಜಾಂಗಳ ಮೆಂ ||
ಬೀ ವಿಧಧ ಪೆಸರ್ ಬಾಹ್ಯದ |
ದಾವೊಳಗಣ ಕಲೆಗಳಿಂಗೆ ಕೇ(ಕಿರ)ಣಮದಕ್ಕುಂ || ೩೨ ||

ಬಾಹ್ಯದ ಕೆಳಗಣಮೊಣಕಾಲ್ |
ಬಾಹ್ಯಕೆ ಜಾನುಮೆಂಬ ಪೆಸರದಕಕ್ಕುಂ ||
ಬಾಹ್ಯದ ಮೊಣಕಾಲ್ ಕಟಕಕೆ |
ಬೇಹುದು ತಾಂ ಪಾಣಿ(ಳಿ)ಯೆಂಬ ಪೆಸರದಕಕ್ಕುಂ || ೩೩ ||

ಅದಱಿಂದೆ ಮೇಲೆನಿಪ್ಪಾ |
ಮದಿ(ಡಿ)ಸಂದಿಗೆ ಜಾನುಮಂಜರೆಂಬಭಿಧಾನಂ ||
ಅದು ಜಾನುವಿಂದೆ ಕೆಳಗುಂ |
ಪದುಳಂ ತಾಂ ಜಂಘೆಯೆಂಬ ಪೆಸರದಕಕ್ಕುಂ || ೩೪ ||

ಜಂಘೆಯ ಕೆಳಗದು ಪಱಿಹ |
ತ್ತ್ರಂ ಗುದ ಮೊಣಕಾಲ ಕೆಳಗೆ ಪಱಿಹತ್ತಮನಾ ||
ಶ್ರಂಗೆಯ್ದು ಕೂರ್ಚೆಯೆಂಬುದು |
ಪಿಂಗದೆ ಕೂರ್ಚಕೆ ಕೆಳಗೆ ಕಳೆ(ಳಿ)ಯೆಂಬ ಪೆಸರ್ || ೩೫ ||

ಕ(ಳ)ಳೆಯಿರ್ಕೆಲದೊಳ್ ತಾ |
ನಳವಡಿಸುಗು [1] ಮಿಸಿ(ಹಿ)ಕೆಯೆಂಬ ಪೆಸರದಕಕ್ಕುಂ ||
ಕೆಳಗೆ ಖುರದಿಂದೆ ಪಾಶೆ(ಷ್ಣಿ)ಯೆ |
ಯಳವಡಿಕುಂ ಪೆಸರದರ್ಕೆ ಹಯಶಾಸ್ತ್ರದೊಳಂ || ೩೬ ||

1 ಮಿಷಿರೆ

ಕಂ|| ಅಂತಾ ಜಂಘೆಯ ಕೆಳಗಂ |
ಮುಂತಣ ಪಿಂತೆಸೆವ ಕಾಲ್ಗಳಾ ಪ್ರಾದೇಶದ ||
ಸಂತತನಾಮೊಂದೇತೆಱ |
ನಂತಂಶಂ ಮೊದಲಿಗಲ್ಲಿ ಗಿರ್ಪತ್ತೊಂದುಂ || ೩೭ ||

ಅಲ್ಲಿಂ ಕೆಳಗಾನಾಭಿಯ |
ದಲ್ಲೆಡೆಗಂ ಹೃದಯಮೆಂಬ ಪೆಸರದಕಕ್ಕುಂ ||
ಸೊಲ್ಲಂ ಹೃದಯದ ಕೆಳಎಡೆ |
ಯಲ್ಲಿಯೆ ತಾಂ ನಾಭಿಯೆಂಬ ಪೆಸರಂ ಪಡೆಗುಂ || ೩೮ ||

ನಾಭಿಯ ಶಿಶ್ನೆಯಯೆಡೆಯುಂ |
ಶೋಭಿಪುದಾ ಜಠರಮೆಂಬ ಪೆಸರದಕಕ್ಕುಂ ||
ಕಾಬುದು ಬಾಹುವ ಮೂಲದೆ |
ಕಾಬಾ ಕುಱಿ ಕಕ್ಷವೆಂಬ ಪೆಸರಿಂ ತೋರ್ಕುಂ || ೩೯ ||

ಆಸನದಿಂ ಕೆಳಗಣ ಬರಿ |
ಗಾಸನ್ನಂ ಕೋಷ್ಠಮೆಂಬ ಪೆಸರದಕಕ್ಕುಂ ||
ವಾಸಾಕೋಷ್ಠದ ಕೆಲರೇ |
ಖಾಸೆಯೆ ತಾಂ ಕುಕ್ಷಿಯೆಂಬ ಪೆಸರಂ ಪಡೆಗುಂ || ೪೦ ||

ಕುಕ್ಷಿಯ ಮೇಲಾಕಕುದಿಱ |
ಯಿಾಕ್ಷಿಸುಗಾ ಪೆಸರೆ ಕುಕ್ಷಿ ಪೊಱಕೆಳಗಣ ಭಾ ||
ಗೀಕ್ಷಿಸು ಕಕುದಿಯ ಸಂಧಿಯ |
ಪೇಕ್ಷಿಸು ಕಕುಸಂದಿಯೆಡೆಗೆ ರಂಧ್ರಮೆಯೆಂದುಂ || ೪೧ ||

ರಂಧ್ರದ ನಾಭಿಯೆಡೆಯೊಳುಪ |
ರಂಧ್ರಮೆನಿಕ್ಕುಂ ಸರಂಧ್ರೆದುಪರಂಧ್ರದ ನಡು ||
ವಂದಕ್ಕುಂ ಮೇಖಳೆಯುಂ |
ಸಂಧಿಸೆ ನಾಭಿಯೆಡೆ ರೋಮರಾಜಿಯದಕ್ಕುಂ || ೪೨ ||

ಕಕುದದ ರೋಮದಯೆಡೆಯುಂ |
ಕಾಕಸೆಯಾ ಕಾಕಸಾಸನದ ನಡು ಮತ್ತಾ ||
ಕಕುಮಧ್ಯಮೆಂದು ಪೇೞ್ವುದು |
ಕಕುದಿಂ ಪೊಱಗೆಸೆಯೆ ಆಸನೆಂಬುದು ಪೆಸರುಂ || ೪೩ ||

ಆಸನದ ಪೊಱಗೆ ಪೃಷ್ಠಮ |
ದೀಸೆನಿಪಾ ಪೆಸರದಕ್ಕು ಮದೞಿಂ ನಡುವಣ ||
ದೇಶದ ನಿಟ್ಟೆಲುವಿಂಗಂ |
ಆಸರಿಸುಗುಮಲಕುಟಂತ್ರಿಕಂ ತಾಮೆಂದುಂ || ೪೪ ||

ಕಂ|| ತಿಕ(ಗ)ದಿರ್ಕೆಲ ರೋಹಿಣಿ ಯೆನಿ |
ಸಗುವುದು ವದಱ ಕೆಳಗೆ ಪಾಂಡುಂ ಸಂಧಿಯೆ ||
ಬಗೆ ಜಘನದಿಂದೆ ಕೆಳಗಂ |
ಬಗೆ ಬಾಲಂ ಪುಚ್ಛದಂಡವೆಂಬೀ ಪೆಸರಿಂ || ೪೫ ||

ಬಾಲದ ಕೆಳಗುಂ ಗುದಮುಂ |
ಲೀಲೆಯ ಗುದದೆರಡು ಕೆಲನ ವ್ಯ(ವೃ)ತ್ತಿಕೆಯೆಂಬರ್ ||
ತಾಲುವ ವ್ಯ(ವೃ)ತ್ತಿಗೆ ಕೆಳಗುಂ |
ಪೇೞಾ ರೋಮಪುಷ್ಪವೆಂಬ ಪೆಸರಂತಕ್ಕುಂ || ೪೬ ||

ಬಾಲದ ದಂಡಿಗೆ ಮತ್ತಾ |
ಬಾಲದ ದಂಡೆಂಬ ಪೆಸರನನುಕರಿಸಿರ್ಕುಂ ||
ಬಾಲದ ಮುಱಿಯೊಳಗಿರ್ಪುದ |
ಲೀಲೆಯಿನಱ ಪಾನವೆಂಬ ಪೆಸರದಕೆಂದುಂ || ೪೭ ||

ಆ ಪಾನದೆರಡು ಕೆಲನದು |
ವಪ್ಪುದು ತಾಂ ಸ್ಫಿಕ್‌ಪಿಂಡಮೆಂಬೀ ಪೆಸರಿಂ ||
ತೋರ್ಪುದಱ ಕೆಳಗೆ ಚಟುಳಮ |
ದಾಪಾನದ ಕೆಳಗೆ ಶಕ್ತಿಶಿವನಿಯದಕ್ಕುಂ || ೪೮ ||

ಶಕ್ತಿಶಿವನಿಯಾ ಮುಷ್ಕದ |
ತಕ್ಕಡೆ ವಂಖಣಮದೆಂಬ ಪೆಸರದಕಕ್ಕುಂ ||
ಶ(ಯು)ಕ್ತಿಯ ಶಿವನಿಯ ಕೊಟ್ಟೆಡೆ |
ಯುಕ್ತಂ ತಾಂ ಹೇಹ(ಮೇಢ್ರ)ವೆಂಬ ಪೆಸರದಕೆಂತುಂ || ೪೯ ||

ಮುಷ್ಕದ ನಾಭಿಯ ಯೆಡೆಯುಂ |
ಬಕ್ಕೆಂದುಂ ಶಿಶ್ನೆಯೆಂಬ ಪೆಸರದಕಕ್ಕುಂ ||
ತೋರ್ಕುಂ ಶಿಶ್ನಾಗ್ರಕೆ ಕ |
ರ್ಣಿಕೆಯೆ ಪೆಸ:ಎಮದಿನ್ನು ತುರಗಾಗಮದೊಳ್ || ೫೦ ||

ಅಲ್ಲಿಂ ಮೂತ್ರಂ ಬರ್ಪೆಡೆ |
ಗಲ್ಲಿಗೆ ತಾಂ ಶಿಶ್ನದಾರೆಯೆಂಬುದು ಪೆಸರುಂ ||
ಬಲ್ಲರ್ ಮೂತ್ರದ ಕೋಶದ |
ಬಲ್ಪಿಂದದಱ ಕೆಳಗಂಡಜಾತಮದೆಂಬರ್ || ೫೧ ||

ಸ್ತುರೆಯಿಂ ಮೇಲ್ ಚಕ್ರ(ಚಂದ್ರ) ಶಕ್ತಿ |
ಬೆರಸಿರ್ಕಾಪೆಸರೆ ರೋಹಿಣೀ ಸಂಧಿಯಕೆಳ ||
ಗಿರೆ ಕಾ(ಸೂ)ಸುಳ ಪೆಸರದಕೆಂ |
ಬರ ಪಾನದ ನಡುವೆಯದಕೆ ಯುಗಸಂಧಿಯುಮಂ || ೫೨ ||

ಕಂ|| ಯುಗಸಂಧಿಯ ಕೆಳಗಂ ನೀಂ |
ಬಗೆ ಶಕ್ತಿಶಿವನಿಯೆನೆ ಪೆಸರಾಪಾಂಡುಂ ಪಿ ||
ಡಗಲದ ಕೆಳಗದು ಮತ್ತಂ |
ಬಗೆಯೂರುಕವದೆ(ವೆ)ಂಬ ಪೆಸರೆ ತುರಗಾಮದೊಳ್ || ೫೩ ||

ಊರುವಿನ ಕಣ್ಣದೆಡೆ ತಾ |
ನಾರಯ್ ನೀಂ ಪಾಂಡುಪಿಂಡ ಮೆಂಬಭಿಧಾನಂ ||
ಓರಂತೆ ಚಕ್ರಶಕ್ತಿಯ |
ಸಾರಣ ಕೆಳಗೆಸೆವ ಜಂಘೆಯೆಂಬಭಿಧಾನಂ || ೫೪ ||

ಸ್ತುರೆಯಿಂ ಕೆಳಗಕ್ಕುಂ ಮಂ |
ಜರಿಯೆಂಬಾ ಪೆಸರದರ್ಕುಮಾ ನಡುವೆಯದಾಂ ||
ತಿರೆ ಶಂಖಮೆಂಬ ಪೆಸರುಂ |
ಸ್ತುರೆಯಿಂ ಕೆಳಗಕ್ಕುಮತ್ತ ಜಂಘಾಕ್ಷೇತ್ರಂ || ೫೫ ||

ಅವಱವಱಮೇಲೆ ಕಲೆಗಳ್ |
ಸವನಿಸುಗುಂ ಕಿಣ(ಕಣಿ)ಮೆಂಬ ಪೆಸರುಂ ಮತ್ತಂ ||
ಶಿವನಿಯ ನಡುವಣ ಯೋನಿಯ |
ನವಗಮಿಸಂತಪರಭಾಗೆ ಮೂವತುಮೂಱುಂ || ೫೬ ||

ತುರಗಕ್ಕಂ ಗೋಱಿಗೆಗಂ |
ಸರಿಸಂ ಸಂಸ್ಥಾನವಷ್ಟವಿಧ ಲಕ್ಷಣಮುಂ ||
ತೆರಡಕ್ಕವೊಂದೆ ಭೇದಂ |
ತುರಗಕ್ಕಲ್ಲಿಲ್ಲ ಯೋನಿಯುಂ ಸ್ತನಯುಗಮು(ಳ)ಂ || ೫೭ ||

ಮೊದಲಾಗೆ ದಂತಪೀಠಿಕೆ |
ತುದಿಯಾಗಿರೆ ಯೋನಿ ನೆಗಲ್ದ ಸರ್ವಾವಯವಂ ||
ಕುದಿರೆಗೆ ನೂಱುಂತೊಂಬತು |
ಪ್ರದೇಶಗಳ ಸಂಖ್ಯೆ ನಾಮ ನಿರ್ದೇಶಂಗಳ್ || ೫೮ ||

ಮೊದಲುಂ ನಡುವುಂ ಕಡೆಯುಂ |
ತುದಿಯುಂ ಬೇಱಿಲ್ಲವೆಂಬುದೆಂಗಾ ನಯಮಂ ||
ವದನಂ ಗಾತ್ರಂ ಬಾಲಂ |
ಕುದಿರೆಯ ಬೆನ್ನೆಂಬಿವುಂ ಶರೀರಾಂತರದೊಳ್ || ೫೯ ||

ವದನದ ಮುಂಗಾಲೆರಡಱ |
ತುದಿಯಿರ್ದೆಡೆ ಪೂರ್ವಕಾಯಮದಱಿಂ ತಿಕದಿಂ ||
ದೊದವಿರೆ ಮಧ್ಯಂ ಕಾಯಮ |
ಮದಱಿಂ ಪೆಱಗಿಂತು ಕಾಯನಿರ್ದೇಶಂಗಳ್ || ೬೦ ||

ಕಂ॥ ಶಿರಮುಂ ಕಣ್ಣುಂ ಮುಖಮುಂ |
ಕೊರಲುಂ ಕಿವಿಯುಂ ವೃಷಣಮುಮುಂ ಮೇಹನಮುಂ ||
ಚರಣಂಗಳುಮಿರ್ಕೆಲನುಂ |
ತುರಗಕ್ಕಂ ಘೋಟಿಗೆಗಮಿವು ದಶಸ್ಥಾನಂಗಳ್ ॥ ೬೧ ॥

*ಇದು ಲಲಿತ ವಚನರಚನಾ |
ಪ್ರದೇಶ ನಾಮಾಭಿಧಾನ ಹಯಶಾಸ್ತ್ರ ತ |
ತ್ವದ ವೊಂಬತ್ತನೆಯಧ್ಯಾ |
ಯದ ವಿರಚನೆ ಚಂದ್ರಮತಮಿಳಾವಳಯಹಿತಂ ॥ ೬೨ ॥

ಇಂತು ನವಮಾಧ್ಯಾಯಂ

---

*ಈ ಪದ್ಯವಿಲ್ಲದೆ ಅಧ್ಯಾಯದ ಸಂಖ್ಯೆಯೂ ಇಲ್ಲದೆ ಆಚಾರ್ಯಂ ಶಿಷ್ಯನ-ಎಂಬ ಪದ್ಯವು ಒಂದು ಪ್ರತಿಯ ಆರಂಭಿಸಿದೆ.

ಅಂಗಭೇದ ಪ್ರದೇಶನಾಮ*

ಕೆಳಗಣ ಮೇಲಣ ಪಲ್ಗಳ ಬೇರ್ಗಳಂ ಪಿಡಿದಿ(ಹಸಂದು)ಪೊರ್ಸಡುಗಳ್ಗೆ ದಂತಪೀಠಿಕೆಯೆಂಬ ಪೆಸರಕ್ಕುಂ. ಅಣಲ ಪಲ್ಗಳ ಮೇಲ(ಗ)ಣ ಕದಪುಗಳ್ಗೆ ಗಂಡಮೆಂಬ ಪೆಸರಕ್ಕುಂ, ಕಟವಾಯ ಸಂಧಿಗಳೆ ಸೃಕ್ವಿಣಿಯಕ್ಕುಂ ಎರಡುಮಣಿಗೆಯೊಳಗಣ ಭಾಗದ ನಡುವಣ ಪ್ರದೇಶಕ್ಕೆ ಜಿಹ್ವಾಬಂಧಮೆಂಬ ಪೆಸರಕ್ಕುಂ. ಅಣಲ ಪಲ್ಗಳಿಂದೆಡೆಯೊಳಾದ ದಾಡೆಯ ಹಲ್ಲಿಗೆ ದಂಷ್ಟ್ರಮೆಂಬ ಪೆಸರಕ್ಕುಂ. ಜಿಹ್ವೆಯಿಂ ಮೇಲೆ ತಾಲುಗೆಯೆಂಬ ಪೆಸರಕ್ಕುಂ, ತಾಲುಗೆಯಿಂ ಕೆಳಗೆ ಸೂಜ(ಚಿ)ಯೆಂಬ ಪೆಸರಕ್ಕುಂ. ಅಲ್ಲಿಂ ಮೇಲೆ ತಾಲುಗೆಯ ತೆರೆಗಳುಂ ಮೂವತ್ತೆರಡಕ್ಕುಂ, ಅವರ್ಕೆ ಕೂರ್ಮೆಗಳೆಂಬ ಪೆಸರಕ್ಕುಂ. ಆ ತೆರೆಗಳ ನಡುವಣರೇಖೆಗಳ್ಗೆ ರಾಜಿಗಳೆಂಬ ಪೆಸರಕ್ಕುಂ, ಆ ತೆರೆಗಳ ಮೇಗಣರೇಖೆ ತಾಳುವಂಶಮೆಂಬ ಪೆಸರಕ್ಕುಂ. ಅಣುಗೆಯೊಳಗೆ ಪುಟ್ಟಿದಣಲಪಲ್ಗಳ್ಗೆ ದಂತಮೆಂಬ ಪೆಸರಕ್ಕುಂ, ಕಡೆಯಪಲ್ಗಳ್ ನಾಲ್ಕಕ್ಕಂ ಪಾರಿಪಕ್ಷ(ಕ್ಪ)ಮೆಂಬುದು, ನಡುವಣ ಪಲ್ನಾಲ್ಕಕ್ಕಂ ಮಧ್ಯಮುಮೆಂಬ ಪೆಸರಕ್ಕುಂ. ಮುಂಬಲ್ಲು ನಾಲ್ಕಕ್ಕಂ ಸಂದಂಸ(ಶ)ನೆಂಬ ಪೆಸರಕ್ಕುಂ, ಮೇಗಣ ಪಲ್ಗ(ಲ್ಲ)ಗ್ರದಂತಮೆಂಬ ಪೆಸರಕ್ಕುಂ. ಪಲ್ಲಪೊಱಗು ಬಾಹ್ಯಮೆಂಬ ಪೆಸರಕ್ಕುಂ, ಒಳಗು ಆಭ್ಯಂತರಮೆಂಬ ಪೆಸರಕ್ಕುಂ. ತುದಿಗಳಗ್ರಮೆಂಬ ಪೆಸರಕ್ಕು, ಮೊದಲ್ಗೆ ಮೂಲಮೆಂಬ ಪೆಸರಕ್ಕುಂ. ಪಲ್ಗಳತುದಿ ಮೊದಲು ಪೊಱಗೊಳಗು ಸಮಭಾಗಮೆಲ್ಲಕ್ಕಮೊಂದೆತೆಱನಕ್ಕುಂ, ಪಲ್ಗಳಂ ಮುಚ್ಚಿರ್ಪ ಮೇಲಣ ಪ್ರೋಥಕ್ಕೆ ಓಷ್ಠಮೆಂಬ ಪೆಸರಕ್ಕುಂ. ಅಧರೋಷ್ಠಕ್ಕೆ ಚಿಬುಕೆಯೆಂಬ ಪೆಸರಕ್ಕುಂ, ಉತ್ತರೋಷ್ಠದ ನಡುವೆ ಪ್ರಪಾನಮೆಂಬ ಪೆಸರಕ್ಕುಂ. ಪ್ರಪಾನದಿಂ ಮೇಲೆ ಪ್ರೋಥಮೆಂಬ ಪೆಸರಕ್ಕುಂ, ಪ್ರೋಥದೆರಡುಂ ಕೆಲನಮೂಗಿನತುದಿಗೆ ನಾಸಾಪುಟಮೆಂಬ ಪೆಸರಕ್ಕುಂ. ಪ್ರೋಥದ ಕಣ್ಣೆಡೆಗೆ ಘ್ರಾಣಮೆಂಬ ಪೆಸರಕ್ಕುಂ, ಮೂಗಿನ ಕಂಬಿಗೆ ನಾಸಾವಂಶಮೆಂಬ ಪೆಸರಕ್ಕುಂ. ಮೂಗಿನೊಳಗು ಶ್ವಾಸಮಾರ್ಗಮೆಂಬ ಪೆಸರಕ್ಕುಂ, ಕಣ್ಗಳ ಮೊದಲ್ಗಳ್ಗೆ(ಸ್ರು)ಶ್ರುಪಾತಮೆಂಬ ಪೆಸರಕ್ಕುಂ. ಅ(ಸ್ರು)ಶ್ರುಪಾತದಿಂ ಮೇಗಣಣ್ಗೆ ಅಕ್ಷಿಗಳೆಂಬ ಪೆಸರಕ್ಕುಂ, ಕಣ್ಣಂ ಮುಚ್ಚಿರ್ಪ ಪೊ(ಱೆ)ಟ್ಟೆಗಳ್ಗೆ ವರ್ಕಣಿ ಎಂಬ ಪೆಸರಕ್ಕುಂ. ಅಲ್ಲಿ ಪುಟ್ಟಿದೆವೆಗಳ್ಗೆ ಅ(ಪ)ಕ್ಷಿ(ಕ್ಷ್ಮ)ಣಿ ಎಂಬ ಪೆಸರಕ್ಕುಂ, ಕಣ್ಣೊಳಗಣ ಬಿಳಿಯಾಲಿಗಳ್ಗೆ ಶುಕ್ಲಮೆಂಬ ಪೆಸರಕ್ಕುಂ. ಶುಕ್ಲಭಾಗದ ನಡುವೆ ಕಪ್ಪಿರ್ಪಂಗೆ ಕೃಷ್ಣಭಾಗಮೆಂಬ ಪೆಸರಕ್ಕುಂ, ಕೃಷ್ಣಭಾಗದ ನಡುವಣ್ಗೆ ದೃ(ವೃ)ಷ್ಟಿಭಾಗಮೆಂಬ ಪೆಸರಕ್ಕುಂ. ಕಣ್ಣಪೊ(ಱೆ)ಟ್ಟೆಯಮೇಗಣ್ಗೆ ಅಕ್ಷಿಕೂಟಮೆಂಬ ಪೆಸರಕ್ಕುಂ, ಅಕ್ಷಿಕೂಟದಿಂ ಪೊಱಗಣ ಪುರ್ಬುಗಳ್ಗೆ ಬಭ್ರುವೆಂಬ ಪೆಸರಕ್ಕುಂ. ಪುರ್ಬಿನ ನಡುವೆ ಭ್ರುಕಟಿಯೆಂಬ ಪೆಸರಕ್ಕುಂ, ಕಣ್ಣಮೊದಲ ಮಾಂಸದ(ಕಡೆಯಿಂದ)ಕೆಂಪಿಂಗೆ ಕಣ್ಣೀರಮೆಂಬ ಪೆಸರಕ್ಕುಂ, ಕಣ್ಣಿನ ಶುಕ್ಲಭಾಗದ ಸುಷಿರಕ್ಕೆ ಆಕಾಶಮೆಂಬ ಪೆಸರಕ್ಕುಂ. ಕಣ್ಣ ಪೊಱಗಣ ಕಡೆಗಳ್ಗೆ ಅಪಾಂಗಮೆಂಬ ಪೆಸರಕ್ಕುಂ, ಸ್ತುವದ ಪುರ್ಬಿನ ಎಡೆಯ ನೊಸಲ್ಗಂ ಲಲಾಟಮೆಂಬ ಪೆಸರಕ್ಕುಂ. ಲಲಾಟದಿಂಮೇಲೆ ಸ್ತುರಿವೆ(ಸುವೆ)ಯೆಂಬ ಪೆಸರಕ್ಕುಂ, ಎರಡುಂ ಕಿವಿಯೆಡೆಗೆ ಶಿ(ಸಿ)ರಮೆಂಬ ಪೆಸರಕ್ಕುಂ, ಶಿರದಿಂ ನಡುವೆ ಮಸ್ತಕಮೆಂಬ ಪೆಸರಕ್ಕುಂ, ಮಸ್ತಕದೆರಡುಂಕೆಲದ ಕಿವಿಗಳ್ಗೆ ಕರ್ಣಂಗಳೆಂಬ ಪೆಸರಕ್ಕುಂ. ಕಿವಿಯಮೊದಲ ಮುಂದಣ ರೇಖೆಗಳ್ಗೆ ಕರ್ಣಾಂಕುರಮೆಂಬ ಪೆಸರಕ್ಕುಂ, ಕಿವಿಯೊಳಗಣ ಬಯಲ್ಗಳ್ಗೆ ಶ್ರೋತಾಸಿಯೆಂಬ ಪೆಸರಕ್ಕುಂ. ಕಿವಿಯಕಣ್ಣೆಡೆಗೆ[ಕ]ಟಮೆಂಬ ಪೆಸರಕ್ಕುಂ, ಕಟದ ಕಡೆಗಂಣ ಸಮೀಪದ ಮೇಗಣ್ಗೆ ಶಂಖಮೆಂಬ ಪೆಸರಕ್ಕುಂ. ಕಟದ ಸಂಕ(ಶಂಖ)ದ ಪೊಱಗಣ ಕೆನ್ನೆಗೆ ಹಾಟಮೆಂಬ ಪೆಸರಕ್ಕುಂ, ಚಿಬು

---

*ಎರಡು ಪ್ರತಿಗಳಲ್ಲಿ ಪ್ರದೇಶನಾಮುವನ್ನು ಹೇಳುವ ಕಂದಪದ್ಯಗಳಿಲ್ಲ, ಈ ಗದ್ಯ ಮಾತ್ರವಿದೆ. ಗ್ರಂಥಕರ್ತೃವು ಪದ್ಯಗಳನ್ನು ರಚಿಸಿದ್ದನೋ ಅಥವಾ ಈ ಗದ್ಯವನ್ನೇ ರಚಿಸಿದ್ದನೋ - ಎಂಬುದನ್ನು ನಿರ್ಧರಿಸಲು ಪ್ರಮಾಣವಿಲ್ಲದುದರಿಂದ ಈ ಗದ್ಯಭಾಗವನ್ನೂ ಇಲ್ಲಿ ಕೊಟ್ಟಿದೆ.

ಕದ ಮೇಗಣ್ಣಾಳ್ಗೆ ಹನುವೆಂಬ ಪೆಸರಕ್ಕುಂ. ಹನವಿನ ನಡುವಣ ಕದಪುಗಳ್ಗೆ ಗಂಡವೆಂಬ ಪೆಸರಕ್ಕುಂ, ಗಂಡದಪೊಱಗಣ ಪ್ರದೇಶಕ್ಕೆ ಹನುಚಕ್ರಮೆಂಬ ಪೆಸರಕ್ಕುಂ.

ಅಂತು ದಂತ ಪೀಠಿಕೆ ಮೊದಲಾಗಿ ಹನುಚಕ್ರಂತುದಿಯಾಗೆ ಅಂತರ್ಮುಖ ಬಹಿರ್ಮುಖ ಶಿರಃ ಪ್ರದೇಶಮನಾಶ್ರಯಿಸಿದ ಪ್ರದೇಶಂ ನಾಲ್ವತ್ತೆರಡಕ್ಕುಂ

ಮತ್ತಾಹ(ಮ)ಣಿಗೆಯ ಕೊರಳ ನಡುವಣ ಪ್ರದೇಶಕ್ಕೆ ನಿಗಳಮೆಂಬ ಪೆಸರಕ್ಕುಂ. ಕಿವಿಯ ಪೊಱಗಣ್ಗೆ ಬಿದುವೆಂಬ ಪೆಸರಕ್ಕುಂ, ಬಿದುವಿನ ಸಮೀಪದೆಡೆಗೆ ವಿದುರ್ಮಣಿಯೆಂಬ ಪೆಸರಕ್ಕುಂ. ಕಂಠನಾಳಿಯೆರಡುಂ ಕೆಲಕ್ಕಂ ಮನ್ಯು(ನ್ಯ)ವೆಂಬ ಪೆಸರಕ್ಕುಂ, ಮನ್ಯೂತ್ತರಿಯೆಡೆಯ ಪ್ರದೇಶಕ್ಕೆ ಗ್ರಿವಮೆಂಬ ಪೆಸರಕ್ಕುಂ. ಸ್ಕಂಧದಿಂ ಮೇಲಣ ವಲಯಕ್ಕೆ ಕೇ(ಶ)ಸರಮೆಂಬ ಪೆಸರಕ್ಕುಂ, ಕೇ(ಶ)ಶರದೆರಡುಂ ಕೆಲಕ್ಕಂ ಕೇಶಾಂತರಮೆಂಬ ಪೆಸರಕ್ಕುಂ,ಕಾಕಸಿಯೆಂದು ವಾಹಮೆಂಬ ಪೆಸರಕ್ಕುಂ, ಕಂಠದ ನಿಗಳದನಡುಗಳಮೆಂಬ ಪೆಸರಕ್ಕುಂ. ಕಕ್ಷಂಗಳ ನಡುಣ ಪ್ರದೇಶಕ್ಕೆ ಕಂಠಮೆಂಬ ಪೆಸರಕ್ಕುಂ.

ಅಂತು ನಿಗಳಂ ಮೊದಲಾಗೆ ಕಂಠವರಂ ಗ್ರೀವಮನಾಶ್ರಯಿಸಿದ ಪ್ರದೇಶಂ ಪನ್ನೊಂದಕ್ಕುಂ.

ಅಲ್ಲಿ ಕಂಠದಿಂ ಕೆಳಗೆ ಜತ್ರುವೆಂಬ ಪೆಸರಕ್ಕುಂ. ಅದಱಿಂ ಕೆಳಗೆ ವಕ್ಷಮೆಂಬ ಪೆಸರಕ್ಕುಂ, ವಕ್ಷದ ಹೃದುಯದೆಡೆ ಕ್ರೋ(ಡ)ಳಮೆಂಬ ಪೆಸರಕ್ಕುಂ.

ಅಂತು ವಕ್ಷಮನಾಶ್ರಯಿಸಿದ ಪ್ರದೇಶಮೆರಡ(ಮೂಱ)ಕ್ಕುಂ,

ಅಲ್ಲಿ ಕಕುದ ಸಂಬಂಧಿಯಪ್ಪ ಪಾರ್ಶ್ವಗಳ್ಗೆ ಯೆಸಯೆ(ಅಂಸಮೆ)ಂಬ ಪೆಸರಕ್ಕುಂ, ಅಂಶ(ಸ)ದ ಮೊದಲನಾಶ್ರಯಿಸಿದ ಮುಯ್ಪು(ಮಯಿಪ್ಪು)ಗಳ್ಗೆ ದಾವಮೆಂಬ ಪೆಸರಕ್ಕುಂ. ವಕ್ಷದ ಹೃದಯದೆಡೆಗೆ ರಾವದಿಯೆಂಬ ಪೆಸರಕ್ಕುಂ, ರಾವದಿಯಿಂ ಕೆಳಗೆ ಬಾಹ್ಯಮೆಂಬ ಪೆಸರಕ್ಕುಂ, ಬಾಹ್ಯದ ಮೂಲದ ಕ್ರೋಡದೆಡೆಗೆ ಜಾಂಗಳಮೆಂಬ ಪೆಸರಕ್ಕುಂ, ಬಾಹ್ಯದೊಳಗಣ ಕಲೆಗಳ್ಗೆ ಕಿರಣಮೆಂಬ ಪೆಸರಕ್ಕುಂ, ಬಾಹ್ಯದ ಕೆಳಗಣ ಮೊಣಕಾಲ್ಗೆ ಜಾನುವೆಂಬ ಪೆಸರಕ್ಕುಂ. ಮೊಣಕಾಲಕಟಕಕ್ಕೆ ಪಾಳಿಯೆಂಬ ಪೆಸರಕ್ಕುಂ, ಅದಱಿಂ ಮೇಗಣ ಮಡಿಸಂದುಗಳ್ಗೆ ಜಾನುಮಂಜರಿಯೆಂಬ ಪೆಸರಕ್ಕುಂ. ಜಾನುವಿಂ ಕೆಳಗೆ ಜಂಘೆಯೆಂಬ ಪೆಸರಕ್ಕುಂ, ಜಂಘೆಯಿಂ ಕೆಳಗೆ ಪಳಿಹಸ್ತ(ತ್ರ)ಮೆಂಬ ಪೆಸರಕ್ಕುಂ. ಪಳಿಹಸ್ತ(ತ್ರ)ಮನಾಶ್ರಯಿಸಿದುದರ್ಕೆ ಕೂರ್ಚಮೆಂಬ ಪೆಸರಕ್ಕುಂ, ಕೂರ್ಚೆಯಿಂ ಪೊಱಗಣ ದೆಸೆಯ ಕೆಳಗಣ್ಗೆ ಕಳೆ(ಳಿ)ಯೆಂಬ ಪಸರಕ್ಕುಂ. ಕಳೆ(ಳಿ)ಯೆರಡುಂ ಕೆಲಂಗಳುಂ ಮಿಹಿಕೆ(ಮಿಷಿರೆ)ಯೆಂಬ ಪೆಸರಕ್ಕುಂ, ಖುರದಿಂ ಕೆಳಗೆ ಪಾರ್ಷ್ಣಿ ಶೀರ್ಷಮೆಂಬ ಪೆಸರಕ್ಕುಂ. ಖುರದ ಸಂಧಿಗಳಂ ಬಿ(ಖ)ಸಿಸಮೆಂಬ ಪೆಸರಕ್ಕುಂ ಖುರದ ನಡುವೆ ತಳಮೆ(ಯೆ)ಂಬ ಪೆಸರಕ್ಕುಂ. ತಳದ ನಡುವಣ ತ್ರಿಕೋಣರೇಖೆಗೆ ಮಂಡೂಕಿಯೆಂಬ ವೆಸರಕ್ಕುಂ, ಅದಂ ಪೊರ್ದಿ ಪೊಱಗಿರ್ದುದು ಕ್ಷೀರಿಕೆಯೆಂಬ ಪೆಸರಕ್ಕುಂ.

ಅಂತು ಜಂಘೆಯಿಂ ಕೆಳಗೆ ಮುಂತಣ ಪಿಂತಣಕಾಲ್ಗಳ್ಗಂ ಪ್ರದೇಶನಾಮಮೊಂದೆ ತೆಱನಕ್ಕುಂ. ಅಂಸಂ(ಮಾಂಸಂ) ಮೊದಲಾಗಿ ಕ್ಷೀರಿಕೆವರಂ ಪೂರ್ವ ಭಾಗಮನಾಶ್ರಯಿಸಿದ ಪ್ರದೇಶಮಿರ್ಪತ್ತೊಂದಕ್ಕುಂ.

ಅಲ್ಲಿ ಕ್ರೋಳದ ನಾಭಿಯ ಎಡೆ ಹೃದಯಮೆಂಬ ಪೆಸರಕ್ಕುಂ, ಹೃದಯದ ಕ್ರೋಳದೆಡೆಗೆ ನಾಭಿಯೆಂಬ ಪೆಸರಕ್ಕುಂ. ನಾಭಿಯ ಶಿಶ್ನೆಯೆಡೆ ಜಠರಮೆಂಬ ಪೆಸರಕ್ಕುಂ, ಬಾಹುಮೂಲದ ಪೊಱಗಣ ಕುಲಿಗೆ ಕಕ್ಷಮೆಂಬ ಪೆಸರಕ್ಕುಂ. ಆಸನದಿಂ ಕೆಳಗಣ ಬದಿ(ರಿ)ಗಳ್ಗೆ ಕೋಷ್ಠಮೆಂಬ ಪೆಸ

ರಕ್ಕುಂ, ಕೋಷ್ಠದಿಂ ಕೆಲದಳ್ಳಿಗಳ್ಗೆ ಕುಕ್ಷಿಯೆಂಬ ಪೆಸರಕ್ಕುಂ. ಕುಕ್ಷಿಯಿಂ ಪೊಱಗೆ ಕೆಳಗಣ ಭಾಗಂ ಕಕುಸಂಧಿಯೆಂಬ ಪೆಸರಕ್ಕುಂ, ಕಕುಸಂಧಿಯೆಡೆ ರಂಧ್ರಮೆಂಬ ಪೆಸರಕ್ಕುಂ. ರಂಧ್ರದ ನಾಭಿಯೆಡೆಗೆ ಉಪರಂಧ್ರಮೆಂಬ ಪೆಸರಕ್ಕು, ರಂಧ್ರದ ಉಪರಂಧ್ರದ ನಡುವೆ ಮೇಖಲೆಯೆಂಬ ಪೆಸರಕ್ಕುಂ. ಹೃದಯದ ನಾಭಿಯ ಮೂತ್ರಕೋಶದ ನಡುವೆ ನೀಳ್ದ ಬಾಸೆಯ ರೋಮಕ್ಕೆ ರೋಮರಾಜಿಯೆಂಬ ಪೆಸರಕ್ಕುಂ, ಕಕುದ ರೋಮರಾಜಿಯೆಡೆಗೆ ಕಾಕಸಿಯೆಂಬ ಪೆಸರಕ್ಕುಂ. ಕಾಕಸಿಯ ಆಸನದ ನಡುವೆ ಕಕುದಮಧ್ಯಮೆಂಬ ಪೆಸರಕ್ಕುಂ, ಕಕುದದಿಂ ಪೊಱಗೆ ಆಸನಮೆಂಬ ಪೆಸರಕ್ಕುಂ. ಆಸನದಿಂ ಪೊಱಗೆ ಪೃಷ್ಠಮೆಂಬ ಪೆಸರಕ್ಕುಂ, ಅದಱ ನಡುವಣ ನಿಟ್ಟೆಲ್ವಿಂಗೆ ಮಲಕೂ(ಕು)ಟತ್ರಿಕಂ(ಕ)ಮೆಂಬ ಪೆಸರಕ್ಕುಂ. ತ್ರಿಕದೆರಡುಂ ಕೆಲಕ್ಕುಂ ರೋಹಿಣಿಸಂಧಿಯೆಂಬ ಪೆಸರಕ್ಕುಂ, ಅಲ್ಲಿಂ ಕೆಳಗೆ ಪಾಂಡುಸಂಧಿಯೆಂಬ ಪೆಸರಕ್ಕುಂ. ಜಘನದಿಂ ಕೆಳಗಣ ಬಾಲಂ ಪುಚ್ಛದಂಡಮೆಂಬ ಪೆಸರಕ್ಕುಂ, ಬಾಲದಕೆಳಗು ತಗರಿಯೆಂಬ ಪೆಸರಕ್ಕುಂ. ಅದರ ಕೆಲಂಗಳ್ಗೆ ವೃತ್ತಿಯೆಂಬಪೆಸರಕ್ಕುಂ, ವೃತ್ತಿಯಿಂ ಕೆಳಗೆ ರೋಮಸ್ಖ(ಸ್ಪ)ನಮೆಂಬ ಪೆಸರಕ್ಕುಂ. ಬಾಲದಂಡೆಗೆ ವಾಲದಂಡಮೆಂಬ ಪೆಸರಕ್ಕುಂ, ಬಾಲದ ಮಱೆಯಲಿಪ್ಪುದು (ಅ)ಪಾನಮೆಂಬ ಪೆಸರಕ್ಕುಂ, ಆ(ಅ)ಪಾನದೆರಡುಂ ಕೆಲಕ್ಕುಂ ಸ್ಫಿಕ್‌ಪಿಂಡಮೆಂಬ ಪೆಸರಕ್ಕುಂ. ಅದರ ಕೆಲಂಗಳ್ಗೆ (ಭ)ಚಡು(ಟು)ಳಿಯೆಂಬ ಪೆಸರಕ್ಕುಂ. ಅಪಾನದಿಂ ಕೆಳಗೆ ಶಕ್ತಿಶಿವನಿಯೆಂಬ ಪೆಸರಕ್ಕುಂ, ಶಕ್ತಿಶಿವನಿಯ ಮುಷ್ಕದೆಡೆಗೆ ವಂಖಣಮೆಂಬ ಪೆಸರಕ್ಕುಂ. ಶಕ್ತಿಶಿವನಿಯ ಕೋಶದೆಡೆ ಮೇಘೆ(ಹೆ)ಯೆಂಬ ಪೆಸರಕ್ಕುಂ, ಮುಷ್ಕದ ನಾಭಿಯೆಡೆಗೆ ಶಿಶ್ನಮೆಂಬ ಪೆಸರಕ್ಕುಂ. ಶಿಶ್ನದ ತುದಿವ(ಳಿ)ಳಿಗೆ ಕುಣಿ(ಕರ್ಣಿ)ಕೆಯೆಂಬ ಪೆಸರಕ್ಕುಂ, ಆ ಮೂತ್ರಂ ಬರ್ಪೆಡೆಗೆ ಶಿಶ್ನದ್ವಾ(ದಾ)ರಮೆಂಬ ಪೆಸರಕ್ಕುಂ. ಮೂತ್ರದ ಕೋಶದ ಸಿಂಧದ ಕೆಳಗೆ ಅಂಡವಾ(ಜಾ)ತಮೆಂಬ ಪೆಸರಕ್ಕುಂ, ಸ್ತ್ರರಿಯ ಮೇಗಣ್ಗೆ ಚಂದ್ರಶಕ್ತಿಯೆಂಬ ಪೆಸರಕ್ಕುಂ. ರೋಹಿಣೀ ಸಂಧಿಯ ಕೆಳಗೆ ಕಾಸುಳಮೆಂಬ ಪೆಸರಕ್ಕುಂ. ಶಕ್ತಿಶಿವನಿಯ ಪಾನದ ನಡುವೆ ಯುಗಸಂಧಿಯೆಂಬ ಪೆಸರಕ್ಕುಂ. ಯುಗಸಂಧಿಯ ಕೆಳಗಣ್ಗೆ ಶಕ್ತಿಶಕುನಿಯೆಂಬ ಪೆಸರಕ್ಕುಂ. ಆ ಪಾಂಡು ಪಿಂಡಿಯ ಕೆಳಗೆ ಊರು(ಕ)ವೆಂಬ ಪೆಸರಕ್ಕುಂ. ಊರುವಿನ ಕಣದೆಡೆಗೆ ಉಪಾಂಡು(ತ)ಪಿಂಡಮೆಂಬ ಪೆಸರಕ್ಕುಂ, ಚಕ್ರಶಕ್ತಿಯಕೆಳಗೆ ಜಂಘೆಯೆಂಬ ಪೆಸರಕ್ಕುಂ. ಶಕ್ತಿಯಿಂ ಕೆಳಗೆ ಮಂಜರಿಯೆಂಬ ಪೆಸರಕ್ಕುಂ, ನಡುವೆ ಶಂಖಮೆಂಬ ಪೆಸರಕ್ಕುಂ. ಸ್ತ್ರ(ರೆ)ವೆಯಂ ಕೆಳಗೆ ಜಂಘೆಯೆಂಬುದಱ ಮೇಗಣ ಕಲೆಗಳ್ಗೆ ಕಿಣಮೆಂಬುದು ಪೆಸರಕ್ಕುಂ. ಗೋಳಿಗೆಯ ಕೆಚ್ಚಲ ಮೇಗಣ ಮೊಲೆಯಂ ಸ್ತನಮೆಂಬುದು ಅವುಗಳ ತುದಿಗಳಂ ಸ್ತನಚ್ಛಿದ್ರಮೆಂಬುದು ಶಿವನಿಯ ಪಾನಿಯ(ನಡ) ನಡುಯೋನಿಯೆಂಬುದು.

ಅಂತು ತ್ರಿಕಂ ಮೊದಲಾಗಿ ಯೋನಿವರ ಮೆಡೆಯೊಳಾದ ಪ್ರದೇಶಂ ಗೋ(ಘೊ)ಱಗೆ ಮೂತ್ತುಮೂಱು ಪರಭಾಗದೊಳಮಕ್ಕುಂ.

ದಶಮಾಧ್ಯಾಯಂ

ಗುರುಶಿಷ್ಯ (ವೈದ್ಯ) ಲಕ್ಷಣಂ

ಕಂ|| ಆಚಾರ್ಯಂ ಶಿಷ್ಯನ ಶೀ |
ಲಾಚಾರಮನಱಿತು ಶಿಕ್ಷೆಗೆಯ್ವುದು ತತ್ಪೂ |
ರ್ವಾಚಾರ್ಯವಿರಚಿತಮಿದು ದು |
ರಾಚಾರಂಗೀಯಲಾಗದಶ್ವಾಗಮಮಂ ||೧||

ಮ|| ಗುರನಿಂದ್ಯಂ ಕೃತನಾಶಿ ಶೂನ್ಯಹೃದಯಂ ನಿರ್ಲಜ್ಜನಜ್ಞಾನಿ ನಿ |
ಷ್ಠುರನಾಲಸ್ಯನರೂಪಿ ಕೋಪಿ ಪರದಾರಾರೋಹಕಂ ಮದ್ಯಪಾ ||
ನರತಂ ಕುತ್ತವಳಂ ವಿಕಾರಿ ಬಧಿರಂ ನಿರ್ಲಕ್ಷಣಂ ನಿರ್ವಿಚಾ |
ರರತಂಗೀವುದಯುಕ್ತಮಲ್ತೆ ಹಯಶಾಸ್ತ್ರಾರ್ಥೋಕ್ತಿಯಂ ವ್ಯಕ್ತಿಯಿಂ ||೨||

ಮ|| ಗುರಭಕ್ತಂ ಕುಲಜಂ ಪ್ರಸನ್ನವದನಂ ಮೇಧಾವಿ ಸದ್ಧರ್ಮತ |
ತ್ಪರ [1]ನವ್ಯಾಧಿತಚಿತ್ತನನ್ಯರಮಣೀದೂರಂ [2]ಕೃತಜ್ಞಂ ಸ್ಥಿರಂ ||
ನಿರುಜಂ ಸರ್ವಜನೋಪಕಾರಿ ಶುಚಿ ಸದ್ವಾಕ್ಯಂ ನಿರಾಲಸ್ಯರ |
ಪ್ಪರನಾರಯ್ದುಪದೇಶಮಂ ಕುಡುವುದಶ್ವಾಚಾರ್ಯರಾಜೋತ್ತಮಾ ||೩||

ಕಂ|| ತಿರಿದುಂಡಲಸದೆ ಕರ್ಪಡ |
ಪರಿಕರನಾಗಿರ್ದು ಗಂಧಮಾಲ್ಯಾದಿಗಳಂ |
ಪರಿಹರಿಸಿ ಜಿತೇಂದ್ರಿಯನಾ |
ಗಿರೆ ಶಿಷ್ಯಂ ಸಕಲಪಾಲಕಂ ತಾನಕ್ಕುಂ ||೪||

*ತುರುಗದ ವ್ಯಾಧಿನಿಧಾನವ |
ನಱಿಯದ ವೈದ್ಯನನೆ ಶಿಕ್ಷೆಗೆಯ್ಯದ ನೃಪಗಂ ||
ತುಱುಗುವುದಶ್ವೇತಿ ಪಾತಕ |
ಮಱಿದವನಂ ತಡೆಯಲಶ್ವಮೇಧದ ಫಲಮುಂ ||೫||

ರಕ್ಷಕನಿವನಶ್ವಕೆ ಯೆಂ |
ದೀಕ್ಷಿಸಿ ಸಲಹಲಱಿಯದವನನರಸನೆನುತಾ ||
ಪೇಕ್ಷಿಸಿ ಬಯಸುವ ನಡವಿಯ |
ಮಕ್ಷಿಕವ ಪಿಡಿದಿರೆ ಸಲಹದೇ ಮಧುವಿತ್ತುಂ ||೬||

---

1 ನುತ್ಪಾಟಿತಚಿಂತ್ಯನನ್ಯ 2 ಶ್ರುತಜ್ಞಾನಿಸ್ಥಿರಂ

*ಒಂದುಪ್ರತಿಯಲ್ಲಿ ಅಶ್ವವೈದ್ಯನ ಗುಣಶೀಲಗಳನ್ನು ಹೇಳುವ ಈ ೧೩ ಪದ್ಯಗಳಿವೆ. ಇವುಗಳಲ್ಲಿ ಹೊಸಗನ್ನಡ ಪ್ರಯೋಗಗಳೂ ಕಂದದ ಛಂದೋದೋಷವೂ ವಿಶೇಷವಾಗಿರುವುದಱಿಂದ ಅನ್ಯಕೃತವೆಂದು ತೋಱುವುದು.

ಕಂ|| ಕಾಲಾಕಾಲಮನಱಿದುಂ |
ಪಾಲನೆಯಿಂದಶ್ವಚಯವ ಸಲಹುವ ವೈದ್ಯನ ||
ಪಾಲಿಸದವ ನೃಪನಹನೇ |
ಬಾಲರ್ ಮೊದಲಾಗಿಯರಸನೆಂಬುದು ಸಹಜಂ ||೭||

ಉರಿವರಿದುಬೇವ ಸಮಯದೆ |
ಭರದಿಂ ನೀರ್ಗುಡಿವೆನೆಂಬ ಹೆಡ್ಡನ ತೆಱದಿಂ ||
ತುರಗದ ವ್ಯಾಧಿಗೆ ಅಡವಿಯ |
ಮರಗಿಡುಬಳ್ಳಿಗಳನರಸುವವನಾ ತೆಱನೈ ||೮||

ಕಾಲದೊಳೆ ತಿಳಿದುಮಶ್ವಕೆ |
ಪಾಲನೆಯುಹ ಮರ್ದನಱಿದು ಕೂಡಿಯೆ ತೊಡಕಿನ ||
ಕೀಲನಱಿದೊಡನೆ ಮಾಡುವ |
ಲಾಲನೆಯಱಿವವನೆ ವೈದ್ಯ ವಿಬುಧರ ಮತದಿಂ ||೯||

ಕೂಡಿರಿಸಿ ಮರ್ದನೆಲ್ಲವ |
ಬೇಡಿದ ಪದದೊಳಗಮೊಲಿದು ಕುಡು ಹಯಕುಲಕಂ ||
ಱೋಡಗನಕ್ಕಲ್ಲದೊಡಂ |
ಕಾಡೊಳ್ ತಿರಿತಿಂಬೆನೆಂಬ ಹೆಡ್ಡನ ತೆಱದಿಂ ||೧೦||

ಒಂದುತುರಗವಂ ಕೊಂದಗೆ |
ಬಂದುದು ಅಯ್ದಱೊಳೆ ಮೊದಲ ಪಾತಕವವಗಂ ||
ಬಂಧಿಸಿ ಕುದುರೆಯ ಸಾಕದೆ |
ಕೊಂದಗೆ ಪಾತಕಮೆನಿತ್ತೊ ಕುಱಿಪಿಡಲಱಿಯೆಂ ||೧೧||

ಬಱಮಾತನಾಡಿ ವೈದ್ಯದ |
ತೆಱನಂ ವ್ಯಾಧಿಗಳ ಪೆಸರ ಕುಱಿಪಿಡಲಱಿಯದ ||
ಕಱುಗಾಹಿ ವೈದ್ಯನವನು (ಕ್ಕು)ಂ |
ಬಱುಗಪ್ಪೆಯವೋಲೊಱಲ್ದು ಹರಣವಿಡುವತೆಱಂ ||೧೨||

ವ್ಯಾಧಿಯ ಪೆಸರಂ ಕುಱುಹಂ |
ಸಾಧಕರಱಿವಂತೆ ಪೇೞ್ದು ಬಲ್ಲನಿತನಿವಂ ||
ಓದಿಯೆ ತಪ್ಪುಳ್ಳೊಡಿನಿತ |
ಭೇದಿಸಿ ತಿರ್ದುವುದು ಬಲ್ಲ ಸದ್ಬುಧನಿವಹಂ ||೧೩||

(ಶೂಳೆಗೆ)

ಮಸಗಿದೊಡೆ ಶೂಲೆ ಬಾತೊಡೆ |
ಬಸಿಱತಿಕೃಶಮಾಗೆ ತನು ಗುದಾಭ್ಯಂತರಮಂ ||
ಪೊಸೆಯೆ ಪಟು ವಾಜಿ ಮೋಹಂ |
ಬಸಿವೊಡಮಿನಿತುಂ ತೆಱಕ್ಕಮೊಂದನೆ ಪೇೞ್ವೆಂ ||೧೪||

ಕಂ|| ಕುಡುವುದು ಪಸುವಿನ ಪಾಲಂ |
ಪಡೆಯದೊಡೂಡುವುದು ಮದ್ಯಮಂ ಮತ್ತಿನಿಸಂ ||
ತಡೆದು ಹಯಕ್ಕನುನಯದಿಂ |
ಕುಡುವುದು ಗೋಮೂತ್ರಮಿಶ್ರಿತಂ ಭೋಜನಮಂ || ೧೫ ||

ಸರುಷಪಮಂ ಘೃತಮಂ ಸಾ |
ಗರಮಂ ಪಿಪ್ಪಲಿಯನಮಳಸೈಂಧವಮಂ ವಿ ||
ಸ್ತರದಿಂ ತ್ರಿಫಲಾರಸದೊಳ್ |
ನಿರೂಹಣಕ್ರಿಯೆಗೆ ಯೋಜಿಪುದು ಧುರದೆಡೆಯೊಳ್ || ೧೬ ||

ಎರಡುಂ [1]ಬಾಳಂ ಮಧುಕಂ |
ಸುರದಾರ ಸುಗಂಧಿ ಕಾರಸೆ ಶ್ರೀಖಂಡಂ(ಗಂಧಂ)ಶ ||
ರ್ಕರೆಯಂ ನೆಯ್ದಿಲ ಗೆಡ್ಡೆಯು |
ನೆರೆದವಱಿಂ ಕ್ಷೀರವರ್ತಿಕೆಯನನುನಯದಿಂ || ೧೭ ||

ವರುಷದ ಮೞಿಗೊಬ್ಬಳಮಾ |
ಗಿರೆ ಯೋಜಿಪುದೆಱಿಗೆ ನಾಲ್ಕುವರ್ಷಂಬರ ಮಾ ||
ದರದಿಂ ಬೞಿಕೊಕ್ಕಳಮದು |
ಪರಿಮಿತಮತಿಕೃಶಮನಱಿದು ಕುಡುಗೊಬ್ಬಳಮಂ || ೧೮ ||

ಚತುರಂಗುಲಪ್ರಮಾಣೋ |
ಚ್ಛ್ರಿತ ಮಪ್ಪುದು ನೇ(ವೇ)ತ್ರನಾಳಿ ತತ್ಸುಷಿ(ಸಿ)ರಂ ಪ್ರ ||
ಸ್ತುತ ಮಂಗುಲ ಪ್ರಮಾಣಾ |
ಕೃತಿಯಾಗಿ ನಿರೂಹ ಕರ್ಮಣಕ್ಕುಪಯೋಗ್ಯಂ || ೧೯ ||

ಹಯಮಂ ಶ್ರಮಮಂ ಕಾಲ |
ತ್ರಯಮುಮನಾರಯ್ದು ಮೂಱುದೆವಸಂಬರ(ಮೆ) ಬೆ ||
ಣ್ಣೆಯನಿಕ್ಕಿ ನೇತ್ರನಾಳಿಯ |
ಕ್ರಿಯೆಯಿಂದೆ ಸುವಾಸನಾಮುಮನಲೋದ್ದಾಮಂ || ೨೦ ||

(ಶೋಫಕ್ಕೆ ಸೇಕಲಕ್ಷಣಂ)

ತುಲಸಿಯ ನುಗ್ಗಿಯ ತಗ್ಗಿಯ |
ಬೆಳೆದಾವುಡಲದಗಯು ಕಕ್ಕೆಯೆಕ್ಕಯ ಪತ್ರಂ ||
ಗಳನೊಡನೆ ತೆಗಪಿ ಕೊಂಡದ |
ಜೊಳೆ ಸೇಕಂಗೆಯ್ಯೆ ಪತ್ರಸೇಕಂ ದಿವ್ಯಂ || ೨೧ ||

[1] ಬಳ್ಯಂ

ಕಂ|| ಪುರಿವುದು ಕಡುಬಿಸಿಯುಪ್ಪಂ |
ತಿರೆ ಮಳಲಂ ನಾಂದ ಸೀರೆಯೊಳ್ ಪೊಯ್ದು ನಯಂ ||
ಬೆರಸಿರೆ ಸೇಕಂಗೆಯ್ವುದು |
ತುರಗದ *ಸೋಬ(ಫ)ಕ್ಕೆ ಮಳಲಸೇಕಂ ಯೋಗ(ಗ್ಯ)ಂ || ೨೨ ||

ಕಡುಮೞಿಯೊಳ್ ಕಡುಗಾಳಿಯೊ |
ಳೆಡೆಯುಡುಗದೆ ಸುರಿವ ಸೋನೆಯೊಳ್ ಕಪ್ಪುರ(ದಿ)ಮಂ ||
ಸುಡುವುದು ತುರಗಂ ಬಾಹಾ |
ದೆಡೆಯೊಳ್ ಸೇಕಿಸುಗೆ ಕಾಲಯೋಗ್ಯಂ ಸೇಕಂ || ೨೩ ||

ಇಭದೊಟ್ಟೆಯ ತುರಗದ ಗ |
ರ್ದಭದ ಪುರೀಷಂಗಳೊಡನೆ ಚಿಕ್ಕಣಿ ಗೆ[1]ಸಱಿಂ ||
ಕ್ಷುಭಿಯಿಸಿ ಮಱಸದಮುಮನಱಿ |
ದಭಿಲಿಪ್ತಂಗೆಯ್ಗೆ ಸೇಕಿಸಲ್ತಕ್ಕೆಡೆಯಂ || ೨೪ ||

ಜ್ವರಮತಿಸಾರಂ ಕ್ರಿಮಿ ನಿ|
ಷ್ಠುರಭಾ(ರಂ)ರಾಕ್ರಾಂತಭಗ್ನಮೂರ್ಧ್ವಶ್ವಾಸಂ ||
ಪರಿಹೃದ(ದೆ)ಯಮೆನಿಪ ಚಿಹ್ನಂ |
ವಿರಚಿಸುತಿರೆ ಮಾಡಲಾಗ ಸೇಕಕ್ರಿಯೆಯಂ || ೨೫ ||

(ಅಗ್ನಿಕ್ರಿಯೆ)

ಮೃದುನಾಭಿಯ ನಿಟ್ಟೆಲುವಿನ |
ಹೃದಯದ ಮೇಲಡಸಿ ಬರೆಯಲಾಗದು ವಿದ್ಯಾ ||
ವಿದರೆಿತ್ತಾನುಂ ಬರೆದಂ |
ದದು ಮಾಳ್ಕುಮಪಾಯಮಂ ಮನಸ್ತಾಪಮುಮಂ || ೨೬ ||

ಬರೆಯಿಡುವೊಡೆ ಪೆಱವೆಡೆದೊಳ್ |
ಖರಕಿರಣನ ಸಚ್ಛಶಾಂಕರೇಖಾಕೃತಿಯಿಂ ||
ಬರೆಯಿಡುವುದು ತುಪ್ಪಮನಾ |
ಬರೆಯೊಳ್ ಪೂಸುವುದು ಬರೆದ(ಯ)ಪುಣ್ ತೀವ್ರವಿನಂ || ೨೭ ||

ಸೆರೆಗಳಱುವತ್ತುನಾಲ್ಕುಂ |
ಪರಿಕಲಿಸಿರ್ಪುವು ತುರಂಗಮಾಂಗೋಪಾಂಗಾಂ ||
ತರದೊಳವಱೊಳಗೆ ಭಾವಿಸಿ |
ಸೆರೆಯಿ(ವಿ)ಡುವುದು ಪಂಚಸಿರೆಯೊಳನಿತುಂ ಸಾಧ್ಯಂ || ೨೮ ||

[1] ರಸರಂ

*ಕವಿಚರಿತ್ರೆ I–ಪು. ೪೪೬ "ತುರಗದ ಶೋಷಕ್ಕೆ" ಎಂಬ ಪಾಠ ಕೊಟ್ಟಿದೆ

ಕಂ|| ಎರಡುಂ ಕಣ್ಣಿಂ ಕೆಳಗಿ |
ರ್ವೆರಲೊಳ್ ಮುಂಗಾಲ ಕಲೆಗಳೆರಡಱ ಕೆಳಗಿ ||
ರ್ವೆರಲೊಳ್ ವಕ್ಷದೊಳಗಮೆರ |
ಡೆರಡುಂ ತೊಡೆಗಳೊಳಗೆ ಬಿಡುವುದು ಸೆರೆಯಂ || ೨೯ ||

ಸುಡುವೊಡಮೆತ್ತಾನುಂ ಸೆರೆ |
ವಿಡುವೊಡಮೇಗೆ(ಗಿ)ಟ್ಟುದೆಂದು ನೆಗಟ್ಟುದಯುಕ್ತಂ ||
ಸುಡುವುದು ಪೊಟ್ಟರೆ ಸೆರೆಯಂ |
ಬಿಡುವುದು ಮೂಱನೆಯ ಜಾವದಿಂದಂ ಬೞಿಯಂ || ೩೦ ||

ನಿರುಹಣಮುಪ(ಮನು)ವಾಸ(ಹ)ನ ಮುಂ |
ಸೆರೆವಿಡುವುದುಮಗ್ನಿಕರ್ಮಮಾ ಸ್ವೇದಮನು ||
ತ್ತರವಸ್ತು(ಸ್ತಿ) ವಿಧಾನಮನಾ |
ವರಿಸಿದುದಿದು ಚಂದ್ರಮತದ ದಶಮಾಧ್ಯಾಯಂ || ೩೧ ||

ಇಂತು ದಶಮಾಧ್ಯಾಯಂ

ಏಕಾದಶಾಧ್ಯಾಯಂ

ಶೂಲೆರೋಗಂ

ಕಂ|| *ತತ್ಕಮಲ ಕಳಿ(ಣಿ)ಸ ಕಬಲ(ಳ)[1]ಸ |
ಮುತ್ಕ ಸುಖ(ಶುಕ)ಪ್ರತತಿ ಪಸಿಯನೇತ್ರದ ನವಚಂ[2] ||
ಚತ್ಕಂಚುಕಮನಿಳಾವಿಳ |
ಸತ್ಕಾಮಿನಿ ತೊಟ್ಟ ಪೋಲ್ಕೆಯಂ ಘಟಯಿಸುಗುಂ || ೧ ||

ಉದರಾಗ್ನಿಯಱದು ಕುಡುವುದು |
ಕುದಿರೆಗೆ ಜೇವಣಿಗೆಯಂ ಹೃತಂ ಪಿರಿದಾದಂ ||
ದುದರಾಗ್ನಿ ಕೆಟ್ಟು ವಿಷ್ಟಂ |
ಭದೊಳಮರ್ಗುಮಲ್ತೆ ವಿಕೃತ ಪುರುಷಾವೇಶಂ || ೨ ||

(ಶೂಲೆರೋಗಂ)

ಪಸಿದಡಹಡಿಸುವ ಕುದಿರೆಗೆ[3] |
ಬಸಿರಡವಿನ ಪೊಲ್ಲಖಾ(ಬಾ)ಣಮುಂ ಕಟ್ಟಿದೊಡು ||
ಬ್ಬಸಮಾಗಿ ಬೇನೆಯೊಳ್ ಸೈ
ರಿಸಲಾಱ(ಗ)ದೆ ಬೀೞ್ಗುಮದು ಸುಭಿಕ್ಷಂ ಪೆಸರಿಂ || ೩ ||

[4]ಪಡು(ಡ)ಗುಂ ಪೊರಳ್ಗುಂ (ಸಲೆ) ಸಿಡಿ |
ಮಿಡಿಯಕ್ಕುಂ ಬೆಮರ್ತುಮುಮ್ಮಳಿಸುಗುಮಾ ||
ಗಡೆ(ಳೆ) ತಲೆಯಂ ಕೆಳಗಿಡುಗುಮು |
ದಡಿಗಡಿಗೆ ಸುಭಿಕ್ಷಶೂಲೆ ಕೆರಳ್ದೊಡೆ ತುರಗಂ || ೪ ||

ಅರಿವುದು ನಾಗರದಿಂ ನಾ |
ಗ(ರ)ಮುಂ ನಸ್ಯಾಂಜನಂಗಳಂ ಮಾ(ಡು)ಡಿ ಸವಿ ||
ಸ್ತರದಿಂದ ಮಲ್ಲದಾದೊಡೆ |
ನಿರೂಹಣಂ ಮಾೞ್ಕೆ ಸರ್ವಶೂಲಾಪಹರಂ || ೫ ||

ಸರುಷಪಮುಂ ಸೈಂಧವಮುಮ |
ನರೆದೆಳ್ಳೆಣ್ಣೆಯೊಳೆ ಕೂಡೆ ಪೊರ್ಕ್ಕುಳಕಲಿ(ಳೆ)ಯೊಳ್ ||
ಬೆರಸಿ ನಿರೂಹಣಗೆಯ್ವುದು |
ತುರಗಕ್ಕದು ಸರ್ವಶೂಲ ನಿರ್ಮೂಲಕರಂ || ೬ ||

---

1 ಸಮುಕತ್ಕ. 2 ಚಂದ್ರಕ್ಕಭುಕಮದು, ...ಪೋಷ್ಠಪೋಲ್ಕೆಯಂ ಪುಟ್ಟಿಸುಗುಂ. 3 ರೆಗೆ ಬಸಿಱ ಅಡವಿ....... 4 ಸುಡುಗುಂ.

* ಈ ಪದ್ಯವು ಈ ಗ್ರಂಥಕ್ಕೆ ಸಂಬಂಧಪಟ್ಟುದಲ್ಲ, ಲೇಖಕನ ಪ್ರಮಾಣದಿಂದ ಇಲ್ಲಿ ಸೇರಿರಬಹುದು. ಎಲ್ಲಾ ಪ್ರತಿಗಳಲ್ಲೂ ಇದ್ದುದರಿಂದ ಇಲ್ಲಿ ಕೊಟ್ಟಿದೆ.

ಕಂ|| ಇ(ಹಿ)ಂಗು ಬಜೆ ಚಿತ್ರಮೂಲಂ |
ಶೃಂಗಿಯುಮಜದೋದೆ ಪಥ್ಯೆಕಣ ವೀರಂ ಕು ||
ಷ್ಠಂ ಗರ್ದುಗು ತಿಗಡೆಯಿಂತಿವ |
ನಿಂಗು ಮೊದಲ್ಮಾಡಿ ಕೊಳ್ಗೆ ಭಾಗೋತ್ತರಮಂ || ೭ ||

ಒಂದೆರಡು ಮೂಱು ನಾಲ್ಕು |
ಯ್ದಂದಾಱೇೞೆಂಟು ನವದಶಮು ಭಾಗಮು ||
ನೊಂದಾ(ತಾ)ಗಿ ಕೂಡಿ ಬಸು(ಸಿ) ನೀ |
ರಿಂದಂ ಕುಡೆ(ಡಿ) ಸರ್ವಶೂಲ ನಿರ್ಮೂಲಕರಂ || ೮ ||

ಶೃಂಗಿಯ ಬೇರುಂ ವಾಣಿಜ |
ದಿಂಗುಂ ಬೆಳ್ಳುಳ್ಳಿ ತಿಗಡೆ ಸೈಂಧವಮಿಾ ಪಂ ||
ಚಾಂಗಮುಮಂ ಸಮಭಾಗೆ ತು |
ರಂಗಕ್ಕೆಱೆ[ಯಲ ದು]ಸರ್ವಶೂಲಾಪಹರಂ || ೯ ||

ಬಜೆಯಿಂಗು ಶುಂಠಿ ಕಿಱಿದೇ(ದೆಂ) |
ಗಜಮೋದಂ ತಿಗಡೆ ಸೈಂಧವಂ ದಂತಿಯುನು ||
ಷ್ಣ ಜಲಮಿಶ್ರಿತದಿಂ ಮಾ |
ಡೆ ಜಯಂಗೆಯ್ಗುಂ ಸಮಸ್ತ ಶೂಲಾ(ಲ)ವ್ಯಥೆಯಂ || ೧೦ ||

ತ್ರಿಕಟುಕಮುಮಿಂಗುಮೋವುಂ ಚಿ |
ತ್ರಕಮುಂ ಕಿಱುದೇ(ದೆಂ)ಗು ಗರ್ದುಗು ಬಿಡುಲವಣ ಜೀ ||
ರಕ ಚವ್ಯ ಲವಣ ಸಂವ |
ರ್ಚಕಮಂವೃತಂ ಶ್ಲೇಷ್ಮವಾತಶೂಲಾಪಹರಂ || ೧೧ ||

ಬಜೆಯಿಂಗು ತಿಗುಡೆ ಕಟುಕ |
ವ್ರಜಮತಿಬಜೆ ಪಂಚಲವಣಮಣಿಲೆಯುಕಾಯ್ ಮ ||
ತ್ತ ಜಮೋದಮುದರಶೂಲಾ |
1ರುಜೆಯುಂ ಕಿಡಿಸಲ್ಕೆ ನೆಱೆಗುಮುಷ್ಣೋದಕದೊಳ್ || ೧೨ ||

ಇಂಗು ಬಜೆ ಪಂಚಲವಣಂ |
ಶೃಂಗಿಯ ಬೇರುಂ ವ್ರಜಾತಿವಜೆ ಪಿಪ್ಪಲಿ ಪ ||
ಥ್ಯಂ ಗರ್ದುಗು ಮೆಣಸು ಮದ್ಯಂ |
ಪಿಂಗಿಸುಗುಂ ಶೂಲೆವೇನೆಯಂ ತತ್ಕ್ಷಣದೊಳ್ || ೧೩ ||

ದುಷ್ಟಾಂಬುಪಾನದಿಂದತಿ |
ಕಷ್ಟಂ (ಬಾ)ಖಾಣದಿನನಿಷ್ಟಮಾತಪದಿಂದಂ ||
ವಿಷ್ಟಂಭಿಸಿರ್ದ ಮಲದಿಂ |
ಕೋಷ್ಠಾಭ್ಯಂತರದೊಳುಗ್ರವೇದನೆಯುಕ್ಕುಂ || ೧೪ ||

1 ವ್ರಜಮಂ.

ಕಂ|| ತೊಡೆಯುಂ ಮೊಗಮುಂ ಕಾಲುಂ |
ಬಿಡದಾಡುವುದರ್ಕಬಿಂಬದತ್ತಲೆ ನೋೞ್ಕುಂ ||
ನಿಡುಸುಯ್ಗುಂ ಧಾತುಗಳುಂ |
ಕಿಡುಗುಮತಿಪ್ರಬಲಮಾಗೆ ರೂಕ್ಷಾವರ್ತಂ || ೧೫ ||

ಮೇಗುಸಿರಿಡುಗುಂ ತಲೆಯುಂ |
ಬಾಗುಗುಮಂಘ್ರಿಗಳ ನಡುಗಳುಂ ಕಂಪಿಸುಗುಂ ||
ಮೂಗಿಱೆ(ಱಿ)ಗುಂ ವೇದನೆಯಿಂ |
ಬೇಗಂ ಬೀೞ್ಗಿಸಮಶೂಲೆ ರೂಕ್ಷಾವರ್ತಂ || ೧೬ ||

ತಿಲತೈಲಂ ದುಗ್ಧಂ ಪಿ |
ಪ್ಪಲಿ ಮೇಣ್ ಮೊಸರೆಣ್ಣೆ ತುಪ್ಪಮಿವನೂಡುಗೆ ಮೇ ||
ಣಲಸದೆ ನಾಗರಮಂ ಕ |
ಣ್ಣೊಳೆಚ್ಚೆ ಮೂಗಿನೊಳಮೆಱೆಯೆ ಶೂಲಾಪಹರಂ || ೧೭ ||

ನವಘೃತದೊಳ್ ಕೊಡಸಿಗೆ ಸೈಂ |
ಧವ ರೇಣುಕ ಚಿತ್ರಮೂಲ ವಾಣಿಜಮಿಂಗೆಂ ||
ಬಿವನಿಕ್ಕಿ ಪಿಂಡಮಂ ಮಾ |
ಡುವುದು ನಿರೂಹಣಮನಂತು ಶೂಲಾಪಹರಂ || ೧೮ ||

ತುರಗಕ್ಕೆ ಶೂಲೆಗಂ ಕ್ರಿಮಿ |
ಹರಣಕ್ಕಂ ತಕ್ಕ ಪಿಂಡಮಂ ಮುನ್ನಮೆ ಸಂ ||
(ಹ)ವರಿಸಿ(ಸ)ದೊ1ಡಂ ಜ(ಮೆ)ಮಾಮನೆ |
ಯುರಿವಾಗದೊಳ್ ಬಾಪಿದೋಡಿ ನಂದಿಪರೊಳರೇ || ೧೯ ||

ಕಡುವಿಸಿಲುರ್ಚಿದೊಡಂ ನೀ |
ರಡಿಸಿದೊಡಂ ಮೂತ್ರಕೃಚ್ಛ್ರಯುಕ್ಕುಂ ಶ್ರಮದೊಳ್ ||
ಪ(ಬ)ಡವಾಗಿ ಪಡುಗುಮೋೞ್ಗುಂ |
ಕಡಂಗಿ ಬೆಮರುಣ್ಕೆ ಬಲಿಗು ವಾಜಿಗೆ ಮೇಢ್ರಂ || ೨೦ ||

ಮಾಗಧ ಮರಿಚಂ ಸೈಂಧವ |
ನಾಗರ ಕಾಳಿಂಗಮಿಂಗು ಸರುಷಪದೊಳ್ ಸಂ ||
ಯೋಗಂಗೆಯ್ದ್ಯುರ್ಬದಮುಮ |
ನಾಗಳೆ ಸಲಿಸುವುದು ಗುದದೊಳಂ ಮೇಢ್ರದೊಳಂ || ೨೧ ||

ನಾಗರಮನರೆದು ಕರಮಿಂ |
ಬಾಗಿರೆ ಗಾಳಿಸಿ ಬೞಿಕ್ಕೆ ನಸ್ಯಾಂಜನಮಂ ||
ಬೇಗಂ ಮಾೞ್ಪುದು ನೀರೊಳ |
ಗಾಗಳೆ ಪಿಡಿಯಿಸುಗೆ ಮೂತ್ರಕೃಚ್ಛ್ರಾಪಹರಂ || ೨೨ ||

1 ಡಿಂಬಮುಮನೆ, ಕ್ಷಮೆ.

(ಶೋಣಿತಮೋಹನ ರೋಗ)

ಕಂ|| ಇನಿತಿನಿತು ರಕ್ತಮಂ ನೀ |
ರೆನಿತನಿತುಂ ಮೂತ್ರಿಸುತ್ತುಮಿರೆ ಶೋಣಿತಮೋ ||
ಹನವೆಂಬುಂದು ತುರಗ |
ಕ್ಕನಿವಾರಿತಮಾಗಿ ಮಾಱ್ಕೆ ಶೀತಕ್ರಿಯೆಯಂ || ೨೩ ||

ಚಂ|| ಎ(ಯ)ಲವ[ದ]ಗೊಟ್ಟಿ ಯಷ್ಟಿಮಧುಕಂ ಮಧು ಮಂಜಿಟಿ ತುಪ್ಪಮಿಂತಿವಂ |
ಕಲಸಿ ಹಯಕ್ಕೆ ಕೊಟ್ಟು ಬಱಕೇಲೆ ಘೃತಂ ನವದುಗ್ಧಮುಂ ಸಮಂ ||
ತಲಸದೆ ಕೂಡಿ ಮಾಡುಗನುವಾಸನಮಂ ವಿಪರೀತವೃತ್ತಿಯಿಂ |
ನೆಲಸಿದ ರಕ್ತಮೋಹನ[1]ಹರಂ ತುರಗಕ್ಕೆ ಕರಂ ಮನೋಹರಂ || ೨೪ ||

ಕಂ|| [2]ಉಪ್ಪುಂ ಕರ್ವಿನ ರಸಮುಂ |
ಪಿಪ್ಪಲಿಯುಂ ಘೃತಮುಮೆಳ್ಳುಮಿನಿತಂ ಮನಹರಂ ||
ತಪ್ಪಿನವಾಡುಗೆ ಪಾಲೊಳ್ |
ತಪ್ಪಿಲ್ಲದೆ ಹಯಕ್ಕೆ ರಕ್ತಮೋಹಂ ಕಿಡುಗುಂ || ೨೫ ||

ನಿರೊಳಗರೆವುದು ಸೌತೆಯ |
ಬೇರಂ ಬೀಜಮುಮನಲ್ಲಿ ಬೆಲ್ಲಮನಿನಿತಂ ||
ಚಾರಿಸಿ ಕುಡುವುದು ಬಱಕಂ |
ನೀರೊಳ್ ಪ(ಪಿ)ಡಿಸುಗೆ (ಸು)ರಕ್ತಮೋಹಂ ಕಿಡುಗುಂ || ೨೬ ||

(ಮಲಬಂಧನ ರೋಗ)

ತುರಗಕ್ಕೆ ಲದ್ದಿ ಪೊಱಮಡ |
ದಿರೆ ಪುಣಿಸೆಯ ಪಣ್ಣಬತ್ತಿಯೊಳ್ ಸೈಂಧವಮಂ ||
ಬೆರಸಿ ಗುದಮುಖದೊಳಿಡೆ ಬಾ |
ಹಿರಮಕ್ಕುಂ ಕಠಿನಮಾಗಿ ಬಿಗಿದಿರ್ದ ಮಲಂ || ೨೭ ||

(ಕೀಟಗಳಂ ಮೆದ್ದ ರೋಗ)

ಬೀಸದು ವಾಲಧಿಯಂ ನಿ |
ಶ್ವಾಸಂ ಪಿರಿದಕ್ಕುಮುಣ್ಣಗುಂ ಲೋಳೆ ಬೆಮರ್ ||
ಸೂಸುಗ, ಮಾಕಂಪಿಸುಗುಂ |
ಧೂಸರಕೀಟಕಮನಡಸಿ ಮೆದ್ದ ತುರಂಗಂ || ೨೮ ||

ತುರಗದ ತನುವಂ ಸಗಣದೊ |
ಳೊರಸಿ ಬಱಕ್ಕೆಣ್ಣೆ *ಪಂಚಕೋಲಕಷಾಯಂ ||
ಸರುಷ(ಪ)ಂ ಸಮ್ಮಿಶ್ರಿತದಿಂ |
ನಿರೂಹಣಂ ಮಾಱ್ಕೆ ಕೀಟದೋಷಾಪಹರಂ || ೨೯ ||

ಪಿಪ್ಪಲಿಮೂಲಂ ಚವ್ಯಂ |
ಪಿಪ್ಪಲಿ ದಹನಂ ಮಹೌಷಧಂ ಸಮಭಾಗಂ ||
ತಪ್ಪದೆ ಕೂಡಿದೊಡಯ್ದು ಮಿ |
ವಪ್ಪುವು ಮುಂ ಪೇಟ್ದಿ ಪಂಚಕೋಲದ ಪೆಸರ್ಗಳ್ || ೩೦ ||

1 ನನರಂ 2 ತುಪ್ಪಂ *ಪಂಚಕೋಲವಾವುವುವೆಂಬುದರ ವಿವರಣೆ ಈ ಮುಂದಣ ೩ನೆಯ ಪದ್ಯದಲ್ಲಿಹೇಳಿದೆ

ಕಂ|| ಬಾಲಂ ಬೀಸದು ಸಂತಾ |
ಪಾಲಸನಾಗಿರ್ಕುಮಿಕ್ಕುಗುಂ ಮೆಯ್ಯಂ ಕ ||
ಣ್ಣಾಲಿಗಳಂ ಬಿಟ್ಟಿರ್ಕುಂ |
ಜಾಲಿಗಕೀಟಕಮನಡಸಿ ಮೆಲ್ದ ತುರಂಗಂ || ೩೧ ||

ನಿರುಪಮಮನುವಾಸನಮಂ |
ತುರಗಕ್ಕೆ ವಿಳಂಗ ಪಿಪ್ಪಲಿ ಚಿತ್ರಕಂ ನಾ ||
ಗರದಿಂ ಮಾಱ್ಪುದು ಪುಱುವಂ |
ತುರಂಗವಂ ತಿಂದ ದೋಷಮಿರದುಪಶಮಿಕುಂ || ೩೨ ||

(ಕೋಗಿಲೆ ಪುಱು ತಿಂದ ರೋಗ)

ಮೇಗುಸಿರಿಡುಗುಂ ತಲೆಯಂ |
ಬಾಗಿರ್ಕುಂ ಮೇಯದಿರ್ಕುಮಪ್ಪೊಡೆ ತುರಗಂ ||
ಕೋಗಿಲೆಯಂ ತಿಂದುದದ |
ರ್ಕಾಗಳೆ ಮಾಡುವುದು ನಸ್ಯಪಾನಾಂಜನಮಂ || ೩೩ ||

ಕಱಯಂ ಜಾಱಕಮುಮನು |
ಜ್ಜ್ವಳಲವಣಸಮೇತಮಿಕ್ಕು ಸುಂಠಿಯನರೆದಾ ||
ಗಳೆ ನಸ್ಯಾಂಜನವಿಧಿಯಿಂ |
ದಲೆಗುಂ ಕೋಗಿಲೆಯನಡಸಿ ಮೆಲ್ದಾವಿಷಮುಂ || ೩೪ ||

(ಭೇದಿ ರೋಗ)

ಶರಪುಂಖಿಯುನಂಬಿಲದಿಂ |
ನಿರೂಹಮಂ ಮಾಱ್ಕೆ ಮೊಕ್ಕಳಂ ಕದಡಿ ಬಸಿರ್ ||
ಪರಿವೊಡೆ ಮೊಸರಂ ಕುಡುವುದು |
ಪರಿಭವಿಸಿರ್ಕಟ್ಟು ಗಟ್ಟಿದಂತಿರೆ ನಿಲ್ಗುಂ || ೩೫ ||

(ಕ್ರಿಮಿದೋಷ)

ಅನಿಲಕಫಪಿತ್ತದಿಂದಂ |
ಜನಿಯಿಸುಗುಂ ರಕ್ತದೋಷಮುದಱೊಳ್ ಕ್ರಿಮಿಗಳ್ ||
ಜನಿಯಿಸಿ ಪುರೀಷದೊಳ್ ತೊ |
ಟ್ಟನೆ ಪೊಱಮಡೆ ಕುಡುಗೆ ನಿಂಬಮಂ ಮಧುಸಹಿತಂ || ೩೬ ||

ಮೆ(ಳ)ಣಸಂ ಮಧು[1]ದಾರು ಕೊಡಸಿಗೆ |
ತಿಲಮಿನಿತುಮನರೆದು ಕುಡುಗೆ ಕಣ್ಣೊಳ್ ಮೋಣ್ |
ಗಲಿಯಿಸಿದೊಡೆ ಪಸುಮೂತ್ರಂ |
ಗಳನೂಡುಗೆ ಕಿಡಿಸುಗದುವೆ ತಕ್ಕ್ರಿಮಿಕುಲಮಂ || ೩೭ ||

ಬಡಿಗುಂ ಕಾಲಂ ಮೆಲ್ಲನೆ |
ಪಡುಗುಂ ಸುಕ್ಕಿರ್ಕುಂ ಮಡರೆ [2]ಸುಯ್ಗುಂ ಕಣ್ಣಂ ||
ಬು(ಬಿ)ಡುಗು ಮತಿವಿಕಲನಕ್ಕುಂ |
ಕಡಂಗಿ ತಿನೆ ವಜ್ರಕೀಟಕಂ ಬಸಿಱೊಳಗಂ || ೩೮ ||

1 ದ್ರಾಕ್ಷಿ 2 ಸಾಯ್ಗುಂ, ಸಾಯ್ದು.

ಕಂ|| ಕುಱಿಯುಣ್ಣೆ ಯನುಗ್ರಾಗ್ನಿಯೊ |
ಳುಱಿಸಿ ಸುಟ್ಟಾ ಬೂದಿಯೊಳಗೆ ನವಘೃತಮಂ ತಂ ||
ದೆಱೆದಿಕ್ಕೆ ಹಯಕೆ ಮೂಱುಂ |
ತೆಱದ ಮಹಾವಜ್ರ ಕೀಟಕಂಗಳ್ ಕಿಡುಗುಂ || ೩೯ ||

ಪಾಲಂ ಬೆಲ್ಲಮುಮಂ ಸ |
ಲ್ಲೀಲೆಯೆ ಕುಡೆ ಬೆ(ಬಿ)ಲ್ಲಮಿಲ್ಲದಂದಿಪ್ಪೆ(ಪ್ಪಿ)ಯ ಪೂ ||
ಪಾಲೆಂಬಿವನೆಱೆವುದು ನಿ |
ರ್ಮೂಲಂ ಮಾಡುವುವು ವಜ್ರಕೀಟಕತತಿಯಂ || ೪೦ ||

ಶರಪುಂಖಿ ವಜ್ರಕೀಟಕ |
ಹರಣಂ ವನದ್ರಾಕ್ಷೆ ವಜ್ರಕೀಟಾಪಹರಂ ||
.... |
............ನಿರುತಂ ತುರಂಗಮಕ್ರಿಮಿಹರಣಂ || ೪೧ ||

ಒವರ್ಮಾನಂ ಬ್ರಾಹ್ಮಿಯ ರಸ |
ಮೊರ್ಮಾನಂ ಕೈಪೆಸೊರೆಯ ರಸ ಮವಱೊಳ್ ಮ ||
ತ್ತೊರ್ಮಾನ[1]ಮೆಣ್ಣೆವೆರಸಿದ |
(ನಿ)ಗಿರ್ಮಿಸುವುದು ಪಾನವಿಧಿಯೊಳಾಕ್ರಿಮಿಕುಳಮಂ || ೪೨ ||

(ಕೀಟಾದಿಕ್ರಿಮಿ ಭಕ್ಷಣ ಹರ)

ಮುಗಮುಗಿಪ ತುಪ್ಪದೊಳ್ ಕಳ(ಬಿ) |
ವಿಗೆಯಂ ಪುಡಿಮಾಡಿಕೊಂಡು ಬಟ್ಟಿಕೊಯ್ಯನೆ ತಾ ||
ಳುಗೆಯಂ ಪರಿಹರಿಪುದು(ಸುಗು) ವಾ |
ಜಿಗೆ ಹಿತಮಿದು ಕೀಟಕಾದಿ ಕ್ರಿಮಿಸಂಹರಣಂ || ೪೩ ||

ನಗರೆಯೆಲೆ ಕನಕಪತ್ರಮು |
ಮೊಗನಿಯ ತಿಗುಡಿಂತಿವೆಲ್ಲಮಂ ಕೊಟ್ಟದೊಳಿ ||
ಕ್ಕುಗೆ ವಾಜಿಗೆ ತದ್ರಸಮಂ |
ಮೊಗಸಲೊಡಂ ಪುಲು ಮರಟ್ಟಿವುಂ ಬಟ್ಟಿಯಕ್ಕುಂ || ೪೪ ||

ತಿಗುಡೆ [2]ಕಟುತ್ರಯಮುಮಂ ಕೊಡ |
ಸಿಗೆ ಖದಿರಂ ತ್ರಿಪಳೆ ಬಜೆ ವಿಳಂಗಂ ನಿಂಬಾ ||
ಸ್ಥಿಗಳಂ ಗೋಮೂತ್ರದೊಳೂ |
ಡುಗೆ ಹಯಮಂ ಕೀಟಕಾದಿ ಕ್ರಿಮಿಸಂಹರಣಂ || ೪೫ ||

ನೊರೆವಾಲೊಳ್ ವಾರಿಜಮಂ |
ಬೆರಸಿಕ್ಕುಗೆಯಿಂಗು[3]ವದಿಲ್ಲದಿರ್ದೊಡೆ ಪಾಲೊಳ್ ||
ಬೆರಸಿರ್ಕುಗೆ ಶರ್ಕರೆಯಂ |
ಪರಿಗುಂ ಸ್ವಸ್ಥಾನಕಕ್ಕೆ ಕೀಟಕನಿಕರಂ || ೪೬ ||

1 ಬೆಣ್ಣ. 2 ಕಟುಕತ್ರ. 3 ನೊಡೆಯದಿ

ಕಂ|| ನಟ್ಟರೆ ಕಿವಿಯುಂ ಕಣ್ಗಳ್ |
ಬಿಟ್ಟರೆ ಮೆಯ್ಯುಱಿಯದೆಱಗಿ ತಡವಂದು ತಡಂ ||
ಮೆಟ್ಟೆ ತಿದಿಯಂತೆ ಬಾತಿರೆ |
ಪೊಟ್ಟೆ ಕರಂ ವಿಕಲನಾದ ತುರಗಂ ಸಾಯ್ಗುಂ || ೪೭ ||

(ಸಿಂಘಾ(ಹಾ)ಣ ರೋಗಂ)

ಬೂ(ಪೂ)ರಣ ಕ(ಗ)ಡಲೆಗಳಿಂ ಕೊಳೆ |
ನೀರಿಂ ದುರ್ಗಂಧರಸಕುಭೋಜನದಿಂದಂ ||
ಮಾರುತ ಪಿತ್ತ ಶ್ಲೇಷ್ಮ ವಿ |
ಕಾರಂಗಳ್ ನೆಗಟೆ ಪುಟ್ಟುಗುಂ ಸಿಂಘಾ(ಹಾ)ಣಂ || ೪೮ ||

ತುರಗದ ನಯನಂಗಳ್ ನೀರ್ |
ಸುರಿಗುಂ ನಾಸಾಂತರಂಗದಿಂದಂ ಶ್ಲೇಷ್ಮಂ ||
ಸುರಿಗುಮಡಿಗಡಿಗೆ ಕೆಮ್ಮು |
ತ್ತಿರೆ ಸಿಂಘಾ(ಹಾ)ಣದ ವಿಕಾರಮೆಂದಱಿವುದದಂ || ೪೯ ||

ರಜನಿ ಬರಿವದಣೆ ಕಟುಕ |
ವ್ರಜಮಿನಿತುಮನರೆವುದಾಡ ಪಾಲೊಳ್ ತುರಗ ||
ವ್ರಜಕೆ ಕುಡೆ ನಸ್ಯಮಂ ವಾ |
ತಜ ಪಿತ್ತಜಕಫಜಮೆನಿಪ ಸಿಂ(ಘಾ)ಹಾಣಹರಂ || ೫೦ ||

ಅರದಗಸೆಯೆಲೆಗಳಂ ವಿ |
ಸ್ತರದಿಂ ಗಾಳಿಸಿ ಕಟುತ್ರಿಕಂ ತ್ರಿಫಲೆಗಳಂ ||
ಬೆರಸಿ ತನಿರಸದೊಳಂಬಾ |
ಗಿರೆ ನಸ್ಯಂ ಗೆಯ್ದೊಡದುವೆ ಸಿಂಘಾ(ಹಾ)ಣಹರಂ || ೫೧ ||

(ಖಾಸರೋಗಂ)

ಆಲತ್ತಿಯರಳಿ ಬಸುರಿಯ |
ಪಾಲೇಱಿದ ಕೊಂಬನುಡಿದು ಮಧುಮಿಶ್ರಿತದಿಂ |
ದಾಳೋಚಿಸಡಿಕ್ಕುವುದಾ(ದೀ) |
ರೇಟು ದಿನಂಬರ ಹಯಕ್ಕೆ ಖಾಸವಿನಾಶಂ || ೫೨ ||

ಅರೆವುದು ಸೈಂಧವ ಮಂ ನಾ |
[ಗರಮು] ಮನೊಡಗೂಡಿ ಬಟ್ಟಿಕೆ ಗುಳ್ಳದ ರಸಮಂ ||
ಬೆರಸುವುದು ಮೂತ್ರಸಹಿತಂ |
ತುರಗಕ್ಕಂ ನಸ್ಯಮಲ್ತೆ ಸಿಂಘಾ(ಹಾ)ಣಹರಂ || ೫೩ ||

ರಸಮಂ ಕುಡಲಾಗದು ರ |
ಕ್ಷಿಸುವುದು ನಸ್ಯಾದಿದಹನದೊಳ್ ತುರಗಮು[1]ಮಂ ||
ಮಿಸಿಸುವುದಿರುಳ್ ಮೊಗಂ ಸೇ |
ಕಿಸುವುದು ಸೆರೆವಿಡುವುದ(ಸ್ರು)ಶ್ರುಪಾತಾಂತರದೊಳ್ || ೫೪ ||

1 ಮನೀಸುವುದಿರುಳೊಳ್ ಮೊಗಮಂಸೇ

(ರಕ್ತಸಿಂಘಾಣ ರೋಗಂ)

ಕಂ|| ಕುರು ಮೂಡಿದಂತೆ ಗಂಟುಗ |
ೞರೆ ನಾಸಿಕದೊಳಗೆ ರಕ್ತಸಿಂಹಾಣ(ಮು)ಂ ನೀ ||
ರ್ಱರಿಯಲ್ಪಡೆಯದೆ [1]ಕೀತೊಡೆ |
ತುರಗಕ್ಕದು ಮರಣಚಿಹ್ನಮಭಿನವಚಂದ್ರಾ || ೫೫ ||

ಆವಿನ ಪಾಲ್ ದಾಳಿಂಬದ |
ಪೂವಿನ ರಸದೊಳಗೆ ನಸ್ಯಮಂ ಮಾಳ್ಪುದು ವಿ |
ದ್ರಾವಿದರಶ್ವಕ್ಕೆ ಮುಖ |
ಸ್ರಾ(ಶ್ರಾ)ವಣೆಯಿಂ ಸುರಿವ ರುಧಿರಮಂ ಸ್ತಂಭಿಸುಗುಂ || ೫೬ ||

ಕಱುಕೆಯ ರಸಮಂ ಪಾಲುಮ |
ನೆಱೆವುದು ತುರಗಕ್ಕೆ ನಸ್ಯಮಂ ತಲೆಯೊಳ್ ತಂ |
ದೆಱೆವುದ(ಪ)ಪಾಮಾರ್ಗರಸಮಂ |
ಪಱಿಪಡುಗುಂ ಮೂಗಿನಿಂದಮುಣ್ಮುವ ರುಧಿರಂ || ೫೭ ||

(ಬಾವು [ಮುಷ್ಕವಾತ] ರೋಗಂ)

ವಾತಾದಿಯಾಗೆ ಕ್ರೊ(ಕೋ)ಶ |
ವ್ರಾತಂ ವಿಕೃತ ಪ್ರಭಾವದಿಂದಂ ತಲೆ [2]ಮುಷ್ಕಂ ||
ಬಾತೊಡೆ ತೊಡರ್ಚೆ ಕಟ್ಟುವು |
ದಾತಪದೊಳ್ ಹಯಮನೆಂದನಭಿನವಚಂದ್ರಂ || ೫೮ ||

ಬಜೆಯುಂ ಕಣಗಿಲ್ ವಿಳಂಗಂ |
ರಜನೀ[3]ದ್ವಿತಯಂ ಕಟುತ್ರಯಂ ಕುಟಜಫಲಂ ||
ರುಜೆ ಸಾಸಿವೆ ಸೌ(ಸಂ)ವರ್ಚಲ |
ಮಜಮೋದಂ ಮುಷ್ಕವಾತಹರಣಂ ಪಿಂಡಂ || ೫೯ ||

ಬಱಿವದಣೆ ಸುಣ್ಣ[4]ಗಂದಿಗೆ
ನಱುವಲ್ ಗುಳ್ಳಂ ಮಣಿಸಿಲೆ ಸೀವನ್ನಿ ಶತಾ ||
ವರಿ ಪುಲಿಗಿಲ್ [5]ಬೆಲ್ಲವತ್ತಂ |
ಗರುಗಂ ಗೋರಟೆ ತವಸಿ ಆವುಂಡಲಿಗೆಯುಮಂ || ೬೦ ||

ಇನಿತಱ ಬೇರಂ ನಾಗುಳ |
ಮೆನೆ ನೀರುಮ ನೆಱೆದುಕೊಂಡು ಮತ್ತೊಕ್ಕುಳಮ ||
ಪ್ಪನಿತಾಗೆ [6]ತೆಗಪಿ ಯೊಕ್ಕಳ |
ಮೆನಲೆಣ್ಣೆಯ ಸಾಕಷಾಯ[7]ದೊಳ್ ಕೂಡಿದುದಂ || ೬೧ ||

---

1 ಕಿತ್ತೊಡೆ 2 ಮುಖಂ 3 ದ್ವಿತಯಂ ಕುಟಜ 4 ಸುಣ್ಣಗಂದಿಗೆ ಪಾದರಿನಱು, ಸುಣ್ಣಪಾದರಿನಱು 5 ಬೆಲ್ಲವತಂ ಎಂದಿರಬಹುದು 6 ನೆರಪಿ 7 ದೊಳ್ ಕುಡಿದುದನ್ನು ದಳದೊಳ್ ಕೂಡಿವುದುಂ

ಕಂ|| ಎಣ್ಣೆ ನಿಲೆ ಯಟ್ಟ್ಟಿ ಕೊಂಡಾ |
ಯೆಂಣೆಯುಮುಂ ಘೃತಮುಮಂ ಗುದಸ್ಥಾನದೊಳಂ ||
ಪಣ್ಣನೆ ಗೆ(ಪೊ)ಯ್ದನುವಾಸಿಸಿ |
ದೆಣ್ಣೆ ಮಹಾದಿವ್ಯಮಲ್ತೆ ವಾತಾಪಹರಂ || ೬೨ ||

ತ್ರಿಫಲೆ ಬಜೆ ಬೆಲ್ಲ ಸುಣ್ಣಂ |
ಸುಪಥದ ಸದಗುಪ್ಪೆ ಮಾಸಿ(ಶಿ)ವಾಳಜಿ ಪುಡಿಯಂ ||
ವಿಪುಲಮತಿ ತೈಲದಿಂದ |
ಟ್ಟುಪಯೋಗಿಪುದಲ್ತೆ ವಾಜಿಗನುವಾಸನಮಂ || ೬೩ ||

ತೊಡೆ ಜಂಘೆ ವಿಷಾಣಂ [1]ಕಿ |
ಱ್ತೊಡೆ ಕೋಶಂ ನಾಭಿ ಜಠರ[2]ಮಿಂತಿ[ನಿ]ತುಂ ಬಾ ||
ತೊಡೆ ತೊಡೆಯೊಳ್ ಪಾಂಡುವಿನೊಳ್ |
ಬಿಡುವುದು ಸೆರೆಯಂ ಬಱಿಕ್ಕೆ ಬಳಿವುದು ಕೆಸಱಂ || ೬೪ ||

ಅಂಗಡಿಯ ಮದ್ದುರ್ ಪಲವು ಪ |
ದ(ಥ)ಂಗೊಳ್ಳವು ಬಗೆ(ಗ)ದ ಭೇದದೊಳ್ ಗಣಿ[ಯಿ]ಸ(ದೇ)ನಾ ||
ಸಂಗಡಿಸುವು(ವ)ರೆ(ದೆ)ಂಬಾಲ |
ಸ್ಯಂಗವ್ಪುದನೊಂ[ದು]ಮದ್ದರ್ನಾಂ ಪೇಲ್ದಪ್ಪೆಂ || ೬೫ ||

ತುಱುವುದು ತರ್ಗ್ಗಿಯ ತೊವಲಂ |
ಕೊಳುವುದು ತನಿರಸಮನದನೆ ಮುಷ್ಕಾಂತರದೊಳ್ ||
ಬಳಿವುದು ವಿಷಾಣ ಮಱುಗುಂ |
ಕಱಿಯಂ ತರ್ಗ್ಗಿಯನೆ ಪಿಂಡಮಿಕ್ಕುಗೆ ಬಱಿಯಂ || ೬೬ ||

ಒಂದೇಱುಗು ಮಿಱುಗುಂ ಮು |
[3]ಷ್ಕಂ ದೋಷಂ ತೋರ್ಪದೆಸೆಯ ನಾಲ್ಕುಂದುವೊಡಾ ||
ದಂದಱಿಗೆ ಮುಷ್ಕಪಾಲನ |
ಮೆಂದದನಱಿದು ಮುಷ್ಕಸೂ(ಶೂ)ಲೆ ವಾತದಿನಕ್ಕುಂ || ೬೭ ||

ಎರಡುಂ ಬೀಜಮನೊಂದಾ |
ಗಿರೆ ಮೊದಲಂ ಕಟ್ಟಿ ಸೀ(ಸೆ)ರೆಯೊಳ್ ಸೇಕಮನಾ ||
ದರದಿಂ ಮಾಳ್ಪುದು ಪಾಲೊಳ್ |
ಬರೆಗದನಾ(ಂ)ತ್ರಿಕ[ದ] ಮುಂದನಂತದು ತೀರ್ಗುಂ || ೬೮ ||

ವಾತಹರಮಪ್ಪ ಪಿಂಡಮ |
ನಾತುರಗಕ್ಕಿ(ಕ್ಕೆ)ಕ್ಕಿ ಗರ್ದುಗುಮುಪ್ಪುಮನದನಂ ||
ತೀ ತೆರದೊಳಮುಪಶಮಿಸುಗು |
ಮಾತಪದೊಳ್ ಕಟ್ಟೆ ಪೂಸೆ ತರ್ಗಿಯ ರಸಮಂ || ೬೯ ||

---

1 ಕಿಲ್ಸಿಡಿ 2 ಮಿಂತಿತುಂಬಾ 3 ಖಂ

ಕಂ॥ ಕಾಸಿದ ಚಿಕ್ಕಣಿ ಕೆಸಱೊಳ್ |
ಸಾಸಿವೆ ಕಲ್ಲುಪ್ಪು ಕಣಿಕ ಮಧುರ್ದ್ದಿನ ಪುಡಿಯಂ ||
ಬೇಸಱದೆ ಬಾಹಿನೆಡೆಯೊಳ್ |
ಪೂಸುವುದುನ್ಮತ್ತರಸಮನೆಱೆದಂತದಱೊಳ್ || ೭೦ ||

ಸೂಲೆ ಸುಭಿಕ್ಷಾ(ಕ್ಷಂ) ರೂಕ್ಷಾ |
ಸೂಲೆಯೆ ಸಲೆ ಮೂತ್ರಸಿಕ್ಕು ರಕ್ತವಿಮೇಹಂ ||
ಶೂ(ಸೂ)ಲಾವಿಷ್ಕಂಭಕೀಟಕ |
ಸೂಲಾಕೃಮಿ [1]ಸಿಂಘ(ಹ)ಣದ್ವಯಂ ವಾತಾಂತ್ಯಂ || ೭೧ ||

ಇಂತೀ ವ್ಯಾಧಿಗಳ ವಿಕಾ |
ರಾಂತರಮಂ ವೈದ್ಯಭೇದಮಂ ಭಾವಿಸಿ ಕ ||
ಲ್ತಂತಾಗೆ(ಗಿ) ಪೇಟ್ದ ಚಂದ್ರಮ |
ತಾಂತರಮೇಕಾದಶಾಧಿಕಾರಂ ಸಾರಂ || ೭೨ ||

ಇಂತು ಏಕಾದಶಾಧ್ಯಾಯಂ

---

1 'ಸಿಂಘಾಣ' ಶಬ್ದವನ್ನು ಛಂದಸ್ಸಿಗಾಗಿ 'ಸಿಂಘಣ' ಎಂದು ಪ್ರಯೋಗಿಸಿರುವಂತೆ ತೋರುವುದು ಮತ್ತು ಮೂರನೆಯ ಪಾದದಲ್ಲಿ ಒಂದು ಮಾತ್ರೆ ಹೆಚ್ಚಿದೆ, ವಿಷ್ಕಂಭ, ಕೀಟಕ – ಇವೆರಡು ಪದಗಳಲ್ಲಿ ಯಾವುದೊಂದನ್ನೂ ಮಾರ್ಪಡಿಸುವಂತಿಲ್ಲ.

ದ್ವಾದಶಾಧ್ಯಾಯಂ

ವ್ರಣಚಿಕಿತ್ಸೆ

ಕಂ॥ ಕೆಱಕುತುಱಿಗ(ಖ)ಜ್ಜಿ ಕಂಚುಕಿ |
ಕುರುವಂಬುಳು ಪುತ್ತು ಬಾಹುಗಳ್ ಬಿಡದೆ ಭಗಂ ||
ಧರಮರಿಸೆ ಕುಷ್ಠತರ್ದುಂ |
ನರವುಲಿ ದುಷ್ಟವ್ರಣಂಗಳಿಂದಱಿವುದಿವಂ || ೧ ||

ತಳದೊಳ್ ಕುಷ್ಠಿಕೆಯೊಳ್ ಬಾ |
ಯೊಳಮಕ್ಷಿಯೊಳಸ್ರ(ಶ್ರ)ಪಾತದೊಳ್ ಪೇರುರದೊಳ್ ||
ಗಳದೊಳ್ ಪಾಂಡುವಿನೊಳ್ ಪು |
ಣ್ಗಳಾದೊಡಿವು ದೋಷಜಂಗಳಭಿನವಚಂದ್ರಾ || ೨ ||

ಮಹಿಷಿಯ ಕೋಡೇಱುಗಳಿಂ |
ಬಹುವಿಧ ಶಸ್ತ್ರಾಭಿಘಾತದಿಂದರ್ಚಿ[ದ]ಭೂ ||
ರುಹದಿಂದ ಮಾದ ವಿವಿಧಾ(ದೋ) |
ಪಹತಂ ಸದುವಕ್ಷತಂಗಳಿಂದಱಿವುದವಂ || ೩ ||

ತಿಲಕದ ತೊಕ್ಕಪಮಾರ್ಗಂ |
ಗಳ ದಕ್ಕಂ ಸುಟ್ಟು ಮೂತ್ರದಿಂದರೆದು ನವೋ ||
ಜ್ವಲಚೂರ್ಣವಿಮಿಶ್ರಿತದಿಂ |
ವಿಲೇಪನಂಗೆಯ್ದು ಕಳೆಗೆ ದುಷ್ಟವ್ರಣಮಂ || ೪ ||

ಸುಡುವುದು ಮೆಕ್ಕೆಯ(ಕ್ಕದ)ಪುಡಿಯುಮ |
ನುಡುಗುವುದಾಬೂದಿಯಂ ಬಱಿಕ್ಕಮದಂ ಕ ||
ಪ್ಪಡದೊಳ್ ಸೋದಿಸಿ ಕೊಂಡಿ |
ಮ್ಮಡಿನೀರಂ ಪೊಯ್ದು ಮುಂದವಪ್ಪನ್ನೆವರಂ || ೫ ||

ಅಡಿಸುವುದಯಸ್ಕಭಾಂಡದೊ |
ಳೊಡಮೊಯ್ವುದು ಕಳ್ಳಿಯೆಕ್ಕೆಯಾಡಿನ ಪಾಲಂ ||
ಗುಡ ಗೋಮಹಿಷೀಕ್ಷೀರಮು |
ನಡುಗೆಯ ಪದನಱಿದು ಪೊಯ್ದು ತೊಳ(ಳು)ಸುಗೆ ಮತ್ತಂ || ೬ ||

ಗಿಳಿಮೂಗಿಯರಿಸಿನಂ ಪಿ |
ಪ್ಪಲಿಮೂಲಂ ತಿಗುಡೆ ವಾಣಿಜಂ ವಿಶ್ವಂ ಪಿ ||
ಪ್ಪಲಿ ನುಗ್ಗೆ ತಗ್ಗಿಯೆಸೆ |
ವಾಪಳಕ ಯವಕ್ಷಾರ ಸರ್ಷಪಂ ಬಜೆಯೆರಡುಂ || ೭ ||

ಕಂ|| ಪೊಸತಪ್ಪ ಸುಣ್ಣಮುಂ ಸೋ |
ದಿಸಿ ಕಿಱಿದಂ ಕೊಂಡು ಭಸ್ಮರಸದೊಳದಂ ಯೋ ||
ಜಿಸಿ ಬಱಿಕಿನಿತೌಷಧಮುಮ |
ನಸುವೆಯೊಳರೆದಲ್ಲಿ ಪೊಯ್ದು ತೊಳುಸುಗೆ ಮತ್ತಂ || ೮ ||

ಆಟ್ಟೆಱಿಪಿ ತಂದು ಕೆಯ್ಯೊಳ್ |
ಮುಟ್ಟದೆ ಪೆಱತೊಂದು ಕೊಡದೊಳಿಂಬಾಗಿ(ಯೆ)ರೆ ಬ ||
ಯ್ತಿಟ್ಟು ಪದನಱಿದು ಪೂಸುಗೆ |
ಬೊಟ್ಟಟ್ಟಂತಾಗೆ ಹಯದ ದುಷ್ಟವ್ರಣಮಂ || ೯ ||

ಮಾಗಿಯ ದಿವಸಂ ಬಿಸಿಲಾ |
ದಾಗಳ್ ಬೇಸಗೆಯ ದಿವಸ ಮಾದಂದು ಬಿಸಿಲ್ ||
ಪೋಗಲ್ ಘನಾಗಮಂ ಪೋ |
ದಾಗಳ್ ಮಱಿಗಾಲಮೆಂ(ದ)ದು ಯೋಜಿಸುವುದದಂ || ೧೦ ||

ಅರಳೆಯನಡಸುವುದಿಂಬಾ |
ಗಿರೆ ದುಷ್ಟವ್ರಣದ ಬಳಸಿಯುಂ ಕ್ಷೀರರಸಂ ||
ಪರಿಯಲ್ಕೀಯದೆ ಬಱಿಯುಂ |
ಪರಿಷೇಕಂ ಗೆ(ಯ್ಗೆ)ಪಾಲೊಳಂ ತುಪ್ಪದೊಳಂ || ೧೧ ||

ಸುರಧೂಪದ ಬಣ್ಣಂ ಮೇ |
ಣರ(ರೆ)ನೇಱಿಲಪಣ್ಣ ಬಣ್ಣವಾದೊಡೆ ಪುಣ್ಣಂ ||
ಪರಿಸೇಕಿಪ್ಪುದು ವೈಶ್ಯಾ |
ನರ ಚೂರ್ಣಮನಿಡಲ್ಕೆ ವೇಡ ತದನಂತರದೊಳ್ || ೧೨ ||

ವಾರುಣಿ ಮೂಲಮ ನಾಮಂ |
ಧಾರಾ(ದಾರ)ಕ್ಷೀರದೊಳೆ ತೊಯ್ದು ನಾಳೀವ್ರಣದಾ ||
ಬೇರೊಳ್ ಪಟ್ಟಿಯನಿಟ್ಟವ |
ಧಾರಿಸಿ ಸೋಧಿಸುಗೆ ಪುಣ್ಣೊಳನುನಯದಿಂದಂ || ೧೩ ||

ಮಂದಾರದ ಪಾಲುಪ್ಪುಮ |
ನೊಂದಾಗಿಯೆ ಕಣಿಕದೊಡನೆ ಬತ್ತಿಯನಿಂ ||
ತೊಂದೆರಡು ದೆವಸದಿಂ ಕಳೆ |
ದಂದಾ ವ್ರಣಕೆಣ್ಣೆಯಿಟ್ಟೊಡಿರದು ಪಶಮಿಕುಂ || ೧೪ ||

ನವನೀತದ ಬತ್ತಿಯ ತಿಗು |
ಡವುಂಗರಂ ಕಳ್ಳಿ ಜೇನತುಪ್ಪಮಿವಂ ಕೂ ||
ಡುವುದರೆದು ನಿಚ್ಚಲುಂ ಪೂ |
ಸುವುದುಂ(ದಾ)ದುಷ್ಟವ್ರಣಂಗಳೆಲ್ಲಂ ತೀರ್ಗುಂ || ೧೫ ||

ಕಂ|| ಕೊಳಗುಳಿಕೆಯ ಪುಣಿಸೆಯ ಕೋ |
ಮಳಿಕೆಯ ನೆ(ದ)ಳೆದಳಿಸುವೆತ್ತುನಾಲಿಗೆಯೆಲೆಯಂ ||
ತಿಲತೈಲದೊಳರೆದೊಂದನೆ |
ವಿಲೇಪನಂ ಗೆಯ್ವುದಡಸಿ ನಾಳೀವ್ರಣಮಂ || ೧೬ ||

ಆಱೆವುದು ಪಲಿನೀರೊಳ್ ಪಾ |
ಲ್ಮರಗಳ ತಿಗುಡಂ ಸಮಂತು ನವಘೃತದೊಳದಂ ||
ಪೊರೆದಿಡುಗೆ ನಾಳಿವುಣ್ಗಳ |
ನಿರೂಹಣಂ ಮಾಳ್ಕುಮಲ್ಲಿ ಸಂದೆಯಮುಂಟೇ || ೧೭ ||

ಸ್ವಾಗತಂ|| ಕಾಕಜಂಘೆ ಮಧು ಮತ್ತಿಯ(ವು)ಂಗುರ್ |
ಪ್ರಾಕಟಂ ಘೃತಸಮೇತ ಮಿವಂ ನಿ ||
ರ್ವ್ಯಾಕುಲಂ ನೆಗ(ರ)ಪಿ ಪೂಸುಗೆ ಪುಣ್ಗಳ್ |
ಪೋಕುಮೆಂದನಕಲಂಕಚರಿತ್ರಂ || ೧೮ ||

ಕಂ|| ಉಪ್ಪಂ ಬೋಳಮುಮಂ ಸಮ |
ನಪ್ಪಂತಿರೆ ಕೂಡಿ ಪುರಿದು ಮಸಿಯಂ ನೇರಿ ||
ತ್ತಪ್ಪಿನಮೆಳ್ಳೆಣ್ಣೆಯೊಳರೆ |
ದೊಪ್ಪಿರೆ ಪೂಸುವುದು ಕ(ಖ)ಜ್ಜಿ ದುಷ್ಟವ್ರಣದೊಳ್ || ೧೯ ||

ಪರಲಾಗದಂತು ವಸ್ತ್ರಾಂ |
ತರದೊಳ್ ಸೋದಿಸಿದ ಸುಣ್ಣದೊಳಗರಿದಾಳಂ ||
ಬೆರಸಿಯದನಟ್ಟು ಪೂಸುಗೆ |
ತುರಗದ ದುಷ್ಟವ್ರಣಂಗಳೆಲ್ಲಂ ಕಿಡುಗುಂ || ೨೦ ||

ಶ್ವೇತೈರಂಡದೊಳಂ ಭ |
ಲ್ಲಾತಕ ಮಿವನರೆದು ಕೂಡಿ ತಿಲತೈಲದೊಳ ||
ಟ್ಟಾ ತೈಲವಿಲೇಪನದಿಂ |
ಕೀತೊಸಱಿತ್ತಿರ್ಪ ನಾಳಿವುಣ್ಗಳ್ ಕಿಡುಗುಂ || ೨೧ ||

ಖಚರಪ್ಲುತ|| ಕೇರಗೊಟ್ಟೆ ಕರಂಜದ ಬೀಜಂ ಕೃಷ್ಣತಿಲಂ ಬೆರಸಿಂತಿವಂ |
ಕ್ಷೀರದಿಂದರೆದಾಡಿನ ಪಾಲೊಳ್ ಪೂಸುಗೆ ಬೆಚ್ಚನೆ ಮಾಡಿ ನೀರ್ ||
ಸೋರುತಿರ್ಪ...............ಪುಣ್ಗಳ್ ಕ(ಖ)ಜ್ಜಿ ಕಱಂಗಿದೆ ತರ್ದುಗಳ್ |
ನೀರದಂ ಪವನಂಗೆ ಪಡಲ್ವಟ್ಟೋಡುವವೋಲ್ ಪರೆದೋಡುಗುಂ || ೨೨ ||

(ಸದ್ಯಃಕ್ಷತ)

ಕಂ|| ಗರುಗಮನಕ್ಕನುನಯದಿಂ |
ನರಮೂತ್ರಮನಕ್ಕೆ ಕನಕಪತ್ರಮನಕ್ಕಾ ||
ದರದಿಂದಂ ಕಲ್ಲುಪ್ಪಂ |
ಬೆರಸಿಯದಂ ಬಳಿಗೆ ಹಯದ ಸದ್ಯಃಕ್ಷತದೊಳ್ || ೨೩ ||

(ದುಷ್ಕಲಿ)

ಕಂ|| ಪಲವುಂ ಕಾಲದ ಪುಡ(ಣ್)ದು |
ಷ್ಕಲಿಗಟ್ಟಿರ್ದೊಡೊಳಗು ನೋವೊಡಂ ಕರ್ಗಿದೊಡಂ ||
ಬಲಿದೊಟ್ಟಿಗಟ್ಟ ತೋರ್ಪೊಡ |
ಮಲಸದೆ ಮಾಡುವುದದಕೆ ದಹನಕ್ರಿಯೆಯಂ || ೨೪ ||

ಆರಿದಿಡುಗೆ ಕೀತ ಪುಣ್ಗಳ್ |
ಸೊರಿ ಯೆಲೆಯಂ ಮೂಱುನಾಲ್ಕುದೆವಸಂ ತದನಂ ||
ತರಮೆಣ್ಣೆ ವಿಡುಗೆ ಮೇಣ್ಘೃತ |
ಪರಿಸೇಕಂಗೆಯ್ಗೆ ನಾಳಿ ಪುಣ್ಗಳ್ ಕಿಡುಗುಂ || ೨೫ ||

(ಸದ್ಯಃಕ್ಷತ-ದುಷ್ಟವ್ರಣ)

ಪೊಸತಪ್ಪ ಸುಣ್ಣಮಂ ಪಕಿ |
ಯಿಸುವುದು ಸದ್ಯಃಕ್ಷತಕ್ಕೆ ದುಷ್ಟವ್ರಣಕಂ ||
ಪೊಸಸುಣ್ಣಮನರ್ಕಕ್ಷೀ |
ರಸಮೇತಂ ಪೂಸಿ ಕಳೆಗೆ ದುಷ್ಟ ವ್ರಣಮಂ || ೨೬ ||

ನೊರೆವಾಲ್ ಸಾಮುದ್ರಂ ಭೃಂ |
ಗರಸಂ ಕನಕಾಂಬುಜ ಗೇಱುತುಪ್ಪಂ ಮತ್ತಂ ||
ಬೆರಸಿಟ್ಟು ಪೂಸೆ ಕಿಡುಗುಂ |
ತುರಗವ್ರಣಸಂಕುಲಂಗಳನಭಿನವಚಂದ್ರ || ೨೭ ||

ಮುನ್ನಿನ ಹಯಶಾಸ್ತ್ರಂಗಳ್ |
ಕನ್ನಡದೊಳ್ ಚಂದ್ರಮಂಕೆ ಸಮನಲ್ಲಮುದೇಂ ||
ಬಿನ್ನಣಮೊ ಪೇಱುಮೆನಿಸಿದ |
ಪನ್ನೆರಡನೆಯ ವ್ರಣಾಧಿಕಾರಂ ಸಾರಂ || ೨೮ ||

ಇಂತು ದ್ವಾದಶಾಧ್ಯಾಯಂ

(ವ್ರಣಾಧಿಕಾರಂ ಮುಗಿದುದು)

ತ್ರಯೋದಶಾಧ್ಯಾಯಂ

ಜ್ವರಾಧಿಕಾರಂ

ಕಂ|| ಕೆಂಪಕ್ಕುಂ ಮೂತ್ರಂ ಮೆಣ |
ಸಂ ಪೋಲ್ಕುಂ ಲದ್ದಿ ಮೇಹುಗೊಳ್ಳದು ಖಾಣ ||
ಕ್ಕಂ ಪಡೆದು ಬಾರದಶ್ರುಜ |
ಲಂ ಪಾಯ್ಗುಂ ಜ್ವರವಿಕಾರಮಾದೊಡೆ (ಹಯಕಂ)ತುರಗಂ || ೧ ||

ಜ್ವರಮೇಂ ಕಾರಣದಿಂದಂ |
ತುರಗಕ್ಕಾಯ್ತೆಂದು ಬಗೆದು ಭಾವಿಸಿ ವೈದ್ಯಂ ||
ತುರಗಕ್ಕಂ ಮಾಡೆ[1] ಚಿಕಿತ್ಸಾ |
ವರಮಂ ತಾಂ ಕಾಯಮುಱಿದು ಹಿತಲಂಘನಮಂ || ೨ ||

ಬೇವಿನ ಪಿಂಡಮನಿಕ್ಕುವು |
ದಾ ವಾಜಿಗೆ ಲವಣವಿರಹಿತಂ ಸಮವಾಯಂ ||
ಮೇವೊಡೆ ಕಱುಕೆಯ ಪುಲ್ ಬಿಸಿ |
ಲಾವೆಡೆಯಂ ಮುಟ್ಟದಂತು ಕಟ್ಟಿಸುವುದದಂ || ೩ ||

ಪಿತ್ತಜ್ವರೋಪಶಮದ |
ತ್ಯುತ್ತಮಮಂ ಸ್ನೇಹವರ್ತಿಯಂ ಮಾಳ್ಪುದು ಬಾಯ್ ||
ಬತ್ತುವೊಡೆ ಕುಡುಗೆ ಕಳ್ಪೊಳ್ |
ಪಥ್ಯಂ ಪಿಪ್ಪಲಿಯುಂ ಮಿಂಗು(ಸೌ)ಸಂವರ್ಚಲಮಂ || ೪ ||

ನೊರೆವಾಲೊಳ್ ಮಧುವಂ ಶ |
ರ್ಕರೆಯುಮನೊಡಗೂಡಿಕೊಂಡು ವಾಜಿಗೆ ಪಾನಾಂ ||
ತರದೊಳ್ ಪ್ರಯೋಗನಿಪುಣಂ |
ಜ್ವರಹರಮಂ ಕ್ಷೀರವರ್ತಿಗೆ(ಕೆ)ಯನನುನಯದಿಂ || ೫ ||

ಸುತಶಾಲ್ಯೋದನಮಂ ಜೇ |
ನತುಪ್ಪಮೆಱೆದೊಡೆ ಕಟು(ಱು)ಕೆಯಂ ಮೇಯಿ(ಮೋಹಿ)ಸಿ ಮಾ ||
ರುತಘೂರ್ಮೋಷ್ಣಾಂತರ ವ |
ರ್ಜಿತಮಾಗಿರೆ ತಂದು ಕಟ್ಟುಗಂತಾ ಹಯಮಂ || ೬ ||

ಸುಟ್ಟು ಕುಮಾರಿಯ ಬೇರಂ |
ಘಟ್ಟಿಸಿ ಪಿಱಿದದಱ ರಸಮನೊಬ್ಬಳದನಿತಂ ||
ಕೊಟ್ಟು ಸಿತ ಹಸಿತಲವಣೆ(ಲೆ) |
ಕಟ್ಟುಗೆ ಕೊರಲೊಳಗೆ ತುರಗದ ಜ್ವರಹರಣಂ || ೭ ||

---

1 ಚಿಕಿತ್ಸಾರಮಂ

(ಶ್ಲೇಷ್ಮಜ್ವರ)

ಕಂ|| ಸುರಿಯೆ ಮುಖಲೋಚನಾಭ್ಯಂ |
ತರದಿಂ ಶ್ಲೇಷ್ಮಾಂಬು ರ್ಝೋ(ಜೋ)ಂಪಿಸುತ್ತುಂ ಮೋಹ(ಪ)ಂ ||
ಪರಿಹರಿಸಿ ನಿಂದೊಡಂ ತಾ(ಂ) |
ತುರಗಂ ಶ್ಲೇಷ್ಮ[1]ಜ್ವರಸ್ಥನೆಂದಱಿವುದದಂ || ೮ ||

ತುರಗಕ್ಕಿಕ್ಕುಗೆ ತಂದೀ |
ಶ್ವರಿಯಂ ಮಧುವೆರಸಿ ಬೞಿಕೆ ಕಟುವೆಯು ಕೂಟಂ ||
ಬೆರಸಿ ಮನೋಹರ ಮಾಗಿರೆ(ಯೆ) |
[ತರದಿಂದಂ]ಪೆಸಱ ಕಟ್ಟನಭಿನವಚಂದ್ರಾ || ೯ ||

‡(ಸನ್ನಿಪಾತಜ್ವರಂ)

ಪರವಶನಕ್ಕುಂ ತಿಟ್ಟನೆ |
ತಿರು(ರಿ)ಗುಂ ಮೂರ್ಛಾಸ್ರಮ [2]ಪ್ರಸನ್ನಂ ಮಲದೊಳ್ ||
ನೊರೆಯುಂ ನೆತ್ತರು ಮೊಯ್ಯನೆ |
ಪರಿಯುತ್ತಿರೆ ಸನ್ನಿಪಾತದ(ದಾ)ಜ್ವರಮಕ್ಕುಂ || ೧೦ ||

ಕಾಣುತ್ತಿರೆಯಿರೆ ಯಿನಿಸಂ |
ಮಾಣದೆ ಪಲತೆಱದ ಚೇಷ್ಟೆಗಳ್ ತೋಱುವೊಡಾ ||
ಸ್ಥಾಣುಗಮಸಾಧ್ಯಮೆಂಬರ್ |
ಪ್ರಾಣಾಂತಂ ಸನ್ನಿಪಾತಮದು ವಿಷಮತರಂ || ೧೧ ||

(ವಾತಾತಿಸಾರ)

ಭೋರನೆ ಬಸಿಱುರ್ಚಿ ಗುದ |
ದ್ವಾರಂ ಗಂಭೀರ ಭಿನ್ನಮೇನೆಂಬುದು [3]ಸಾ ||
ಹ್ಕಾರಣೆ ಗೆಯ್ಯುತ್ತಿರೆ ಯದ |
ಸಾರುಂ ವಾತಾತಿಸಾ: [4]ಮೆನ್ನ ದೊಳರರೆ || ೧೨ ||

ರಸದಾಳಿಂಬದ ದರ್ಭೆಯ |
ಪೊಸಬೇರುಂ ಬೆಟಲ ತಿಗುಡು ಮಧುಸಮೇತಂ ||
ರಸಮೊಸರೆ ತುಯ್ಯಲಟ್ಟಾ |
ಱಿಸಿ ಕುಡುವುದು ಮಧುವನೆಂದನಭಿನವಚಂದ್ರಂ || ೧೩ ||

ಮೊಸರೊಡನೆ ಯಷ್ಟಿಮಧುಕಂ |
ಪೊಸತುಪ್ಪಂ ಬೆಟಲ ಪಣ್ಣಿನಂ ಮುದದಿಂ ಭಾ ||
ವಿಸಿ ಮಧುವನೆಱೆದು ಹಯಕಿ |
ಕ್ಕಿಸುವುದು ವಾತಾತಿಸಾರಮಂ ಸ್ತಂಭಿಸುಗುಂ || ೧೪ ||

1 ಜ್ವರಾರ್ತ 2 ಪ್ರಸನ್ನಕ್ಕುಮಲದೊಳ್ 3 ಒಂದು ಬಾದನಾಚ್ಚಾರಣೆ 4 ಮೆನ್ನ ಪರೊಳದೇ
‡ಸನ್ನಿಪಾತಜ್ವರದ ಔಷಧಿ ಹೇಳಿಲ್ಲ

(ರಕ್ತಾತಿಸಾರ)

ಕಂ|| ಬಿಸುಸುಯ್ಗುಂ ಬಡವಕ್ಕುಂ |
ಬಸವಳಿಗುಂ ದಾಹಮಕ್ಕುಗಾ ತಣ್ಪ(ಣ್ಪಿ)ಂ ಕಾ ||
ಟಿಸುಗುಂ ಲೋಹಿತಮಂ ಮೂ |
ತ್ರಿಸುಗುಂ [1]ರಕ್ತಾತಿಸಾರದಿಂದಂ ತುರಗಂ || ೧೫ ||

(ಕಫಾತಿಸಾರ)

ಕರಮೆ ಬಡವಾಗಿ ಸುಯ್ಯು |
ತ್ತಿರೆ ಚಿಂತಾಕ್ರಾಂತನಾಗೆ ಪಿಪ್ಪಲಿಯಂ ತಂ ||
ದರೆದು ಘೃತಯುಕ್ತದಿಂದಂ |
ತುರಗಕ್ಕಿಕ್ಕುಗೆ ಕಫಾತಿಸಾರಂ ಕೆಡಗುಂ || ೧೬ ||

(ಕಜ್ಜಿಬೇನೆ)

ಆರಸಿನ ಮೋಣ್ ಕೋಷ್ಠಂ ಸಿತ |
ಸರುಷಪಮಂ ಕೂಡಿಕೊಂಡು ಸದ್ಯಃಕ್ಷಾರಂ ||
ಬೆರಸಟ್ಟು ಮೂತ್ರದಿಂದಂ |
ತುರಗದ ಖಜ್ಜಿಗೆ ವಿಲೇಪನಂ ಗೆಯ್ವುದದಂ || ೧೭ ||

ಮರದರಸಿನಮರಸಿನ ಮು |
ತ್ತರಣೆ ತಿಲಂ ಗೇಱಗೊಟ್ಟೆಯಿಂತಿವನೊಂದಾ ||
ಗರದೊಳ್ಪೆಣ್ಣೆಯೊಳಟ್ಟಾ |
ದರದಿಂದಂ ಪೂಸೆ (ಖ)ಕಜ್ಜಿಗುತ್ತಂ ತೀರ್ಗುಂ || ೧೮ ||

ಎರಡು ಮರಸಿನವ ಎಮುಪ್ಪಂ |
ಬೆರಸಾಪಡೆ ಕಕ್ಕೆಯಂ ಸವಿಸ್ತರದಿಂ ತಂ ||
ದರೆದಟ್ಟು ಮೂತ್ರದಿಂದಂ |
ತುರಗದ ಖಜ್ಜಿಗೆ ವಿಲೇಪನಂ ಗೆಯ್ವುದದಂ || ೧೯ ||

ಕಳ್ಳಿಯುಮೆಕ್ಕೆಯುಮಂ ಸು |
ಟ್ಟಿಳ್ಳಂ ಮಸಿಯಾಗಿ ಪುರಿದು ಚೂರ್ಣಸಮೇತಂ ||
ತೆಳ್ಳನೆ ಪೂಸುಗೆ ಮೂತ್ರದೊ |
ಳೊಳ್ಳಿತ್ತಾ(ಯೂ)ಗೂಱಲಿಟ್ಟು ಸುಕರವಿಲಾಸಾ || ೨೦ ||

ನರ ತುರಗಗೋಕುಲಕ್ಕಾ |
ತೆಱದಿಂದಂ ಖ(ಕ)ಜ್ಜಿತೋಱೆ ಮತ್ತೊಂದನೆ ವಿ ||
ಸ್ತರದಿಂ ಪೇೞ್ವೆಂ ಸಮನಾ |
ಗಿರೆ ಪೂಸುಗೆ ಪುಲಿಗಿಲೆಣ್ಣೆಯಂ ಸುಣ್ಣಮುಮಂ || ೨೧ ||

1 ರಕ್ತಾತಿಸಾರಮಂ ಸ್ತಂಭಿಸುಗುಂ 2 ಟೆರಸಿಟ್ಟು 3 ಕ್ಕಾದರದಿಂ

ಕಂ|| ಪುಡಿಮಾಡಿ ಸಜ್ಜರಸಮಂ |
ಕೊಡುವುದು ನವಘೃತಸಮನ್ವಿತಂ ತ್ರಿದಿನಂ ಕೊ ||
ಟ್ಟೊಡೆ ತರ್ದು ಖ(ಕ)ಜ್ಜಿಯೆರಡುಂ |
ಕಿಡುಗುಂ ದಿವ್ಯಪ್ರಯೋಗಮಭಿನವಚಂದ್ರಾ || ೨೨ ||

(ಮರಣಚಿಹ್ನೆ)

ಎವೆಯಿಕ್ಕದೆ ಕಣ್ಣಂ ಮು |
ಚ್ಚಿ ಮುಖಂ ನೀರೋಡಿ ಚೇಷ್ಟೆಗೆಟ್ಟು ಕರಂ ಬಾ ||
ಲಮನೊಲ್ದಲ್ಲಾಡದೆ ರ |
ಕ್ತಮುಮಂ ಮೂತ್ರಿಸುವ ತುರಗಕಕ್ಕುಂ ಮರಣಂ || ೨೩ ||

ಹರಿಣಿ|| ಸುರಿಯೆ ಮುಖದಿಂ ಶ್ಲೇಷ್ಮಂ ಕೃಷ್ಣಾರುಣಂ ಕ್ರಿಮಿ ಲದ್ದಿಯೊಳ್ |
ಪರಿಯೆ ಭರದಿಂದಂ ತಾಂ [1]ಮೆಯ್ಯಿಕ್ಕುತುಂ ಬಲಿದೇಱುತುಂ ||
ಪೊರಳೆ ಕರಮಾಪತ್ತಿಂ ಮೆಯ್ವಿಟ್ಟು ಬೀಸದೆ ಬಾಲಮಂ |
ತುರಗಮಿರೆ ನಿರ್ವ್ಯಾಜಂ ಸಾಯ್ಗುಂ ಹಯಕ್ಕದು ನಿರ್ಣಯಂ || ೨೪ ||

ಕಂ|| ಪೆಡತಲೆಯ ನರಂ ತೆಗೆದೊಡೆ |
ಮಿಡುಕದೆ ಸೈತಿರ್ದು ಬಾಲಮಂ ಕೊರಲುಂ ಮ ||
ತ್ತೆಡೆವಿಡಿ(ಡ)ದುಡಿರದೆ ಪಣೆಗಂ |
ಣಡಸಿ ಕರಂ ಸುಯ್ಯೆ ಬಾಱಲಾಱದು ತುರಗಂ || ೨೫ ||

ಕೊರಲುರುಗಿ ನಾಸಿಕಾಭ್ಯಂ |
ತರದಿಂದರುಣಾಂಬು ಪೊಣ್ಮೆ ಮುಖದಿಂ ಶ್ಲೇಷ್ಮಂ ||
ಸುರಿಯೆ ಬಸವಳಿದು ಬಾಲಂ |
ಪರೆಯೆ ಗತಪ್ರಾಣನಕ್ಕುಮಭಿನವಚಂದ್ರ || ೨೬ ||

(ರಸವಿಕಾರದೋಷಂ)

ನೊರೆವೆರಸು ಲದ್ದಿ ಪೊಱಮಡೆ |
ತುರಗಂ ದಡದಡಿಸಿ ನಡೆಯಲಾಱದೆ ಕಾಲ್ಗೆ ||
ಟ್ಟಿರೆ ರಸವಿಕಾರದೋಷಂ |
ತುರಗಮುಖಕ್ಕಕ್ಕುಮೆಂದನಭಿನವಚಂದ್ರಂ || ೨೭ ||

ಇಪ್ಪೆಯ ಪೂವೊಬ್ಬಳಮಂ |
ತಪ್ಪದವಂ ನೀರೊಳರೆವುದಾವಿನ ಪಾಲೊಳ್ ||
ನೇರ್ಪಡೆ ಕಲಸಿ ಹಯಕ್ಕೆ ಸ |
ಮರ್ಪಿಸುವುದು ರಸವಿಕಾರಮಾಗಳೆ ಕಿಡುಗುಂ || ೨೮ ||

ಪದನಱಿದು ಮುನ್ನ ಹೇಮಂ |
ತದ ಪಿಂಡಮನಿಕ್ಕಿ ಗರ್ದುಗನಿಕ್ಕುಗೆ ಬೞಿಯಂ ||
ತ್ರಿದಿನಂ[ತಾಂ] ಲೇಪಂ ಗೆ |
ಯ್ಸಿದೊಡುೞಿಯದೆ ಕಿಡುಗುಮನಿತಱೊಳ್ ರಸದೋಷಂ || ೨೯ ||

ಕಂ|| ಉಪ್ಪು ಪುನರ್ನವಿ ಮೂಲಂ |
ಪಿಪ್ಪಲಿ ಯೇಲಕ್ಕಿ ಲೊಕ್ಕಿಗರುಗ ನಾಗರಮುಮಿವಂ ||
ತಪ್ಪದೆ ಸಮನಾಗಿರೆ ಪ್ಪುದು |
ವಪ್ಪಿನವರೆದಿಡುಗೆ ಗುದದೊಳಂ ಮೇಢ್ರದೊಳಂ || ೩೦ ||

ಪುರಿವುದು ಕಡುವಿಸಿಯುಪ್ಪಂ |
ತಿರೆ ಮಳಲಂ ನಾಂದ ಸೀರೆಯೊಳ್ ಪೊಯ್ದು ನಯಂ ||
ಬೆರಸಿಯೆ [1]ಸೇಕಂ ಗೆಯ್ವುದು |
ಶಿರದಿಂ ನಿಟ್ಟೆಲ್ವುವಿಡಿದು ಜಘನಂಬರೆಗಂ || ೩೧ ||

ಮಾಗಿಯ ಮೞಿಗಾಲಕ್ಕಂ |
ಬಾಗಿರೆ ಸೇಕಿಪುದು ಸೇಕಿಸಲ್ತಕ್ಕೆಡೆಯಂ ||
ಮಾಗಿಯೆ ಪೋಗಲೊಡಂ ಗ್ರೀ |
ಷ್ಮಾಗಮದೊಳ್ ಬಿಸಿಲೆ ಸಾಲ್ಗುಮಾಗದು ಸೇಕಂ || ೩೨ ||

(ಮೃಗಜೃಂಭಾರೋಗ)

ಅಳಿಮೇಹ(ವು)ಮೇಯೆ ಕಣ್ಗಳ್ |
ಕುೞಿಯೆ ಕೊರಲ್ ನಸೆಯೆ ನಟ್ಟುನಿಲೆ ಕಿವಿ ಬಸಿಱ ||
ಕ್ಕುೞಿಸೆ ದಡದಡಿಸಿ ಕಾಲ್ಗಳ |
ನೆೞೆಯೆ ತುರಂಗಮದ. ಕುತ್ತಮದು ಮೃಗಜೃಂಭಂ || ೩೩ ||

ಬಿಸಿಲೊಳದಂ ಕಟ್ಟೆಸುವುದು |
ಬಿಸಿಲಿಲ್ಲದೆ ಗಾಳಿ ಸೀತಮುಂ ದುರ್ದಿನಮುಂ ||
ಮಸಗಿದೊಡೆ [2]ಮಸಮದಂ ಸೇ |
ಕಿಸುವುದು ನಿಟ್ಟೆಲ್ವುವಿಡಿದು ಜಘನಂಬರೆಗಂ || ೩೪ ||

ಬಜೆ ಕೊಡಸಿಗೆ ವಾ(ಳ)ಣಿಜವತಿ |
ಬಜೆ ಕೋಷ್ಠಂ ಪಾಲು ಪಂಚಲವಣಂ ದಹನಂ ||
ಗಜಪಿಪ್ಪಲಿ ಮಗಧೋದ್ಭವ |
ಮಜಮೋದಂ ತ್ರಿಫಲೆ ನಾಗರಂ ತ್ರಿಸುಗಂಧಂ || ೩೫ ||

*ಇಂತಿನಿತೌಷಧಮುಮನೋ |
ರಂತಿರೆ ಪುಡಿಮಾಡಿ ಬಿಸಿಯ ನೀರೊಳ್ ಪೆಱತೇಂ ||
ಭ್ರಾಂತಿಲ್ಲದೆ ಕುಡೆ ಮೃಗಜೃಂ |
ಭಂ ತಡೆಯದೆ ಕೆಡುಗುಮೆಂದನಭಿನವಚಂದ್ರಂ || ೩೬ ||

---

1 ಶಾಕಂ 2 ಮಳಲುಮಂ?

* ಇನಿತೌಷಧಮು ಮನೋರಂ |
ತಿರೆ ತಾಂ ಪುಡಿಮಾಡಿ ಬಿಸಿಯ ನೀರೊಳ್ ಪೆಱತೇಂ ||
ಭ್ರಾಂತಿಲ್ಲದೆ ಕುಡೆ ಮೃಗಜೃಂ |
ಭಂ ತಡೆಯದೆ ಕೆಡುಗುಮೆಂದನಭಿನವಚಂದ್ರಂ ||

—ಅರ್ಧ ಕಂದದಲ್ಲಿ ಬೇರೆ ಪ್ರಾಸಿರುವ ಈ ಕಂದವು ಒಂದು ಪ್ರತಿಯಲ್ಲಿವೆ.

ಕಂ|| ಸರಳಂ ಕೋಷ್ಠಂ ಮಂಜಿ |
ಷ್ಠೆರಾಸ್ನೆ ಬೆಳ್ಳುಳ್ಳಿ ಸೈಂಧವಂ ತಗರಮಿವಂ ||
ಕರಿಯಾವಿನ ನೊರೆವಾಲೊಳ್ |
ಬೆರಸಿ ಬಱಿಕ್ಕೆಣ್ಣೆವೊಯ್ದು ನೆಯ್ [1]ನಿಲ್ವಿನೆಗಂ ||೩೭||

ಪದನಱಿ[2]ವಟ್ಟು ಯವಕ್ಷಾ |
ರದ ಪುಡಿಯಂ ತಳಿದು ಕಳೆದುಕೊಂಡೆಣ್ಣೆಯನಾ ||
ಱಿದ ಬಿಸಿಯ ನೀರನೆಱೆದಂ |
ತದನೂಡುವುದದನೆ ಮಾಳ್ಪುದಭ್ಯಂತರಮಂ ||೩೮||

ಸೆರೆವಿ(ಯಿ)ಡುವುದಸ್ರುಪಾತದೊ |
ಳುರದೊಳ್ ಮನ್ಯಪ್ರದೇಶದೊಳ್ ಬಾಹುಗಳೊಳ್ ||
ಸುರೆಯೊಳ್ ಪ್ರಪಾನ ಶಂಕಾ(ಖಾ)ಂ |
ತರದೊಳ್ ವಿಹಿತ ಪ್ರಮಾಣವೇದ[3]ವಿದಗ್ಧಂ ||೩೯||

ಪುಱದ ಮಳಲಿಂದೆ ಸೇಕಂ |
ಸಿರದಿಂ ನಿಟ್ಟೆಲ್ವುವಿಡಿದು ಜಘನಂಬರೆಗಂ ||
ಬರೆವುದು ಕೆಯ್ಗುಱಿವಾದೊಡೆ |
ಸಿರದಿಂ ನಿಟ್ಟೆಲ್ವುವಿಡಿದು ಜಘನಂಬರೆಗಂ ||೪೦||

(ಹರಿಣ ರೋಗ)

ಬಸಿಱೆತ್ತಿ ಕಟ್ಟೆ ಮೆಯ್ ಕೀ |
ಲಿಸಿದಂತಿರೆ ಲೋಳೆ ಸುರಿಯೆ ಕಣ್ಣಂ ಬಿಟ್ಟು ||
ಬ್ಬಸಮಾಗ ಸುಯ್ಯೆ ಕಿವಿ ತೆ |
ತ್ತಿಸಿದಂತಿರೆ ಬೀಸೆ ಬಿಸುಟು ಖಾಣಾದಿಗಳಂ ||೪೧||

ಡಡದಡಿಸೆ ಪದಂಗಳ್ ಪ |
ಲ್ಲಡಿಗಿಱಿದಿರೆ ಬಾಲವಾಲಬೀಟಲತೆಱದಿಂ ||
ಪಿಡುಕದಿರೆ ಹರಿಣರೋಗಂ |
ತಡೆಯದೆ ಮಡಿಗುಂ ಚಿಕಿತ್ಸೆಗೆಯ್ಯಲ್ವೇಡಾ(ಡಂ) ||೪೨||

ಜ್ವರಮತಿಸಾರಂ ಖಜ್ಜಿಯು |
ಮರಿಷ್ಟಮುಂ ಖಾಸ ಮೆರಳೆಗುತ್ತಮುಮನುದಾ ||
ಹರಿಸಿದ ನುತಚಂದ್ರಮತಾಂ |
ತರದಧ್ಯಾಯಂ ತ್ರಯೋದಶಂ ಜಗಕೆ ಹಿತಂ ||೪೩||

ಇಂತು ತ್ರಯೋದಶಾಧ್ಯಾಯಂ

---

1 ಸಿಲುವನ್ನೆಗಂ, ನಿಲುವಿನೆಗಂ 2 ದುಪ್ಪ 3 ವಿದಗ್ನಂ, ವಿಧಜ್ಞಂ, ವಿಧಿಜ್ಞಂ ವಿದಂ ಜ್ಞಂ

ಚತುರ್ದಶಾಧ್ಯಾಯಂ

ತಾಳುರೋಗ

ಕಂ|| ಕಡುವಿಸಿಲೊಳಿರ್ದು ತಾಳುಗೆ |
ಪುಡಿವಿಡೆ ಮುಖಮೊಣಗೆ ನೀರನಾಹಾರಮುಮಂ ||
ಪಡೆಯದುಪವಾಸದಿಂದಂ |
ದಡದಡಿ(ಪ)ಸೆ ತುರಗಕೆ ತಾಳುರೋಗಂ ತೋರ್ಕುಂ ||೧||

ತೆಗೆದಡಸಿ ಮೇಯಲಲಸಿದ |
ಬಗೆವೆರಸಿನಿಸಿನಿಸು ಮೇವೊಡಂ ಮತ್ತಂ ತಾ ||
ಳುಗೆ ಕಂದಿ ರೋಮಮೊದಲೊಳ |
ಪುಗೆ ಕಣ್ಗಳ್ ತಾಳುರೋಗಮೆಂದಱಿವುದದಂ ||೨||

ಸೆರೆವಿಡುವುದಸ್ರುಪಾತಾಂ |
ತರದೊಳ್ ಗೋಮೂತ್ರತೈಲ ಸೈಂಧವಮಂ ತಂ ||
ದೊರಸುವುದು ತಾಳುದೇಶಾಂ |
ತರಮಂ ತರಗಕ್ಕೆ ತಾಳುರೋಗಂ ತೀರ್ಗುಂ ||೩||

(ಜಿಹ್ವೆ ರೋಗಂ)

ಕಱ(ಳ)ದಾಗಿ ಬಾತು ನಾಲಗೆ |
ಪಿರಿಯ ಪುಗುಱ್ ನೆಗೆದು ತೋಱೆ ಶ್ಲೇಷ್ಮಂ ಮುಖದಿಂ ||
ಸುಱಿಯೆ ಕೊಳೆನಾಱೆ ಮೋಹಂ |
ಪರಿಹಱ(ಕಲಿ)ಸಿರೆ ಜಿಂಹೆರೋಗಮೆಂದಱಿವುದದಂ ||೪||

ಪಿಪ್ಪಲಿ ಮಧು ಕೋಷ್ಠಂ ಭಜಿ |
ತುಪ್ಪಂ ಬೆಳ್ಳುಳ್ಳಿ ಸೈಂಧವಂ [1]ರಜನಿಯುಗಂ ||
ತಪ್ಪದನಿತುಮಂ ಸಮಸಮ |
ಮಪ್ಪಿನೆಗಂ ಪುಗುಱನೊಡೆದು ಪೂಸುಗೆ ಮತ್ತಂ ||೫||

ಅರೆದೂಡುಗೆ ಕಳ್ಳೊಳ್ ನಾ |
ಗರ ಕೋಷ್ಠ ಪಟೋಲಪಥ್ಯಮಂ ವಾಜಿಗನಂ ||
ತರದೊಳ್ ನಸ್ಯಂಗೈಸುವು |
ದರೆದಾಡಿನ ಪೊಸಘೃತಂಗಳೊಳ್ ಸೈಂಧವಮಂ ||೬||

(ಗಳ ಗ್ರಹ)

ಕೊರಲು ಮಣುಗು(ಣಲು)ಗಳ ನಡುವುಂ |
ತುರಗದ ಕದಪುಗಳುಮತಿಭಯಂಕರಮಪ್ಪಂ ||
ತಿರೆ ಬಾತು ತೋಱೆ ಬಾಯಿಂ |
ಸುರಿಯುತ್ತಿರೆ ಲೋಳೆಯದು ಗಳಗ್ರಹಮಕ್ಕುಂ ||೭||

---

1 ಲವಣ

ಕಂ|| ಎರಡುಂ ಬಜೆ ಪಿಪ್ಪಲಿ ನಾ |
ಗರವನಲಂ ಲಶುನ ಸರ್ಷಪಂಗಳ್ ಸಮನಾ ||
ಗಿರೆ ಕೂಡಿ ನಸ್ಯಮಂ ಮಾ |
ಡುರೆ ಸೇಕಂ ಗೈಯೆ ಬಱಯನಭಿನವಚಂದ್ರಾ || ೮ ||

ಇಂತೀ ಪೇೞ್ದೌಷಧದಿಂ |
ದಂ ತೀರದುದರ್ಕೆ ಬರೆಯನಿಡುಗನುನಯದಿಂ ||
ದಂತಿರೆ ತೀರದುದರ್ಕಂ |
ಭ್ರಾಂತಿಲ್ಲದೆ ಮಾೞ್ಕೆ ರಕ್ತವಿಸ್ರಾ(ಶ್ರಾ)ಣನ(ವಣ)ಮಂ || ೯ ||

(ಶೋಫ ರೋಗ)

ಎರಡು ವಿಷಾಣದ ನಡು ಬಾ |
ತಿರೆ ದ್ರೋಣ(ಣಿ) ಕೆಡುಗನುನಯದಿಂ ತೀರದುದ ||
ರ್ಕಂತಿರೆ ಮೃದುಕಠಿಣಮಾಗು |
ತ್ತಿರೆ ಪಿತ್ತಜವಾತಜಂಕಪಾತಿಗಮೆಂಬರ್ || ೧೦ ||

ಚಿತ್ರಕಮತಿಬಜೆ[1]ದಂತಿ ಕ |
ಟುತ್ರಿತಯಂ ಕಾಗೆದೊಂಡೆ ಗಿಳಿಮೂಗಿಯುಮಂ ||
ಮೂತ್ರಸಮೇತಂ ಬುಧಜನ |
ಮಿತ್ರನವಂ ತಂದು ಪೂಸೆ ಶೋಫಂ ಕೆಡುಗುಂ || ೧೧ ||

ಪೂಸುಗೆ ಭಲ್ಲಾತಕ ನಿ |
ರ್ಯಾಸಮುನನಲಾಸುಷ(ರ)ಕ್ಷಮಾದೊಡೆ ಪೆಱತೇಂ ||
ಪೂಸುವುದು ನರಪುರೀಷಮ |
ನಾಸುರವಾಗಿರ್ದ ದುಷ್ಟಶೋಫಂ ಕಿಡುಗುಂ || ೧೨ ||

(ಉಲೂಕಪಾ(ವಾ)ತ)

ಸ್ತುರಿ ಜಾನು ಜಂಘೆ ಕೂರ್ಚಂ |
ತರಂಗಳೊಳ್ ಶೋಫಮಾಗಿ ಪುಣ್ಗಳ್ ಮೂಡು ||
ತ್ತಿರೆ ಪುಣ್ಗಳ ಬಾಯೊಳ್ ಪಾ |
ಯ್ತುರೆ ರಕ್ತಮುಲೂಕಪಾ(ವಾ)ತನಭಿನವಚಂದ್ರಾ || ೧೩ ||

ಚಂ|| ಪುಲಿಗಿಲ ಕೊಟ್ಟೆ ಕಬ್ಬಿನ ರಸಂ ಬಜೆ ಪಿಪ್ಪಲಿಮೂಲ ಮುಪ್ಪಪಿ |
ಪ್ಪಲಿ ರಜನೀದ್ವಯಂ ಸರುಷಪಂ ದಹನಂ ಕನಕಂಗಳೆಂಬಿವಂ ||
ಕಲಸಿ ಗವಾಂಬುವಿಂ ತೆರ(ಬ)ಡು ಮೂತ್ರದೊಳಿಂತವನಟ್ಟು ಕೊಟ್ಟುವಂ |
ದಲಸದೆ ಪೂಸಿದಂದು ಕಳೆಗುಂ ಚರಯೋಗಮುಲೂಕಪಾಕ(ವಾತ)ಮಂ || ೧೪ ||

ಕಂ|| ತಱಯದ ಮತ್ತಿಯ ಮರನೆರ |
ಡಱ ಪಗಿನಂ ತ್ರಿಫಲೆ ಪಂಚಮೂಲಮಿವಂ ನೀ ||
ರೆಱೆಯಿನೆ ಪುಡಿಗೆಯ್ದು ದಱೊಳ |
ಗೆಱೆಪಷ್ಟಮಭಾಗೆಯಾಗೆ ತಿಲತೈಲಮುಮಂ || ೧೫ ||

1 ದಂತಿಯೆನಿಪ್ಪುದಕ್ಕುರುಜೆ ಮತ್ತರು ಕಟು(ಕ)ತ್ರಿತಯಂ (ಈ ಭಾಗ ಹೆಚ್ಚಾಗಿ ಕಂದದಲ್ಲಿ ಸೇರಿದೆ)

ಕಂ|| ಅದನಂತಾಗಳೆ ಗೋಮೂ |
ತ್ರದೊಳಡಿಸುವುದಾಗಳೆಣ್ಣೆ ಚತುರಂಶಂ ಪೆ ||
ರ್ಚಿದ ಗೋಮೂತ್ರವನೆಱೆ ಬ |
ತ್ತಿದುದೆಂಬಿನೆಗಂ ವಿಲೇಪಮಂತಾ ತೈಲಂ || ೧೬ ||

(ಬಡವಿಗೆ)

ಬೇವಿನ ಕಷಾಯದೊಳ್ ಪೊ |
ಯ್ದಾವರ್ಜಿಸಿ ಪೆಸಱಕಟ್ಟು ಮಧುಘೃತದೊಳದಂ ||
ಭಾವಿಸಿ ಹಯಶಾಸ್ತ್ರಾಗಮ |
ಕೋವಿದರದಱೊಳಗೆ ಸುಂಠಿಯಂ ಪಿಪ್ಪಲಿಯಂ || ೧೭ ||

ಪುಡಿಮಾಡಿ ಕೂಡಿ ಕೊಡುವುದು |
ಬಡವಿಗೆ ಭೋಜನವನೇೞುದಿವಸಂಬರೆಗಂ ||
ತೊಡೆ ಜಾನು ಜಂಘೆ ಕೂರ್ಚೆಯ |
ನೊಡೆಹೊಯ್ದುಗುತಿರ್ಪ ನಾಳಿವುಣ್ಗಳ್ ಕಿಡುಗುಂ || ೧೮ ||

ವಾಮಿಗನುದ್ರೋಣಿಕೆಗಂ |
ಸಾಮಾನ್ಯ ಮುಳೂಕ ಪಾ(ವಾ)ತಮು(ಕ)ಂ ನಿರ್ದ್ರವಿಗಂ |
ಮಾರ್ದ(ನಿ)? ವಿಚರ್ಚಿಕೆಯೆಂ |
ಬಾಮಯಕಂ ಶಸ್ತ್ರವಿಱಿದು ಬಱವುದು ಕೇಱಂ || ೧೯ ||

ತೊಡೆ[ಗಳ] ಜಘನದ ಪಾದೆರ |
1ಡೆಡೆಗಳ್ ಪುಣ್ಣಾಗೆ ಪೂಸುವುದು ಘೃತಮುಮಂ ||
ಕುಡುವುದು ಜೇವಣಿಗೆಯ ನೋ |
ಗಡಿಸದೆ ಮುಂ ಪೇೞ್ದ ರುಜೆಗಮಯ್ದುಂತೆಱದಿಂ || ೨೦ ||

ಪರಿದಱತು ಬಂದು ನೀರಂ |
ಪಿರಿದುಂಡೊಡಮುಂಡು ಪರಿದೊಡಂ ವಿಪರೀತಂ |
ಬೆರಸುವೊಡಂ ಬುಧ ಜಲ |
ಗರಮಕ್ಕುಂ ವಾಜಿಗಂದನಭಿನವಚಂದ್ರಂ || ೨೧ ||

ಪೊರ್ಕ್ಕುಲಿ ಕೆಳಗಿಬ್ಬೆರಲೊಳ್ |
ಪೊರ್ಕುಟಿ ಮೇಲೆಂಡು ಕೆಲದೊಳೊಬ್ಬೆರಲೊಳ್ ತು ||
ರ್ಯಕ್ಕೆ ಹಿತಮಾಗಿ ಕುತ್ತುಗೆ |
ಪಕ್ಕಾಗಿರೆ ಶಸ್ತ್ರದೊಳ್ ಚತುರ್ಥಾಂಗುಲಮಂ || ೨೨ ||

1 ಡೆಡೆಗಳೊಳಂ ಪುಣ್ಗಳಾಗೆ ಪೂಸುಗೆ ಘೃತಮಂ (ಎಂದಿರಬಹುದು)

ಕಂ|| ಕೊಱೆದಿಂಬಾಗಿರೆ ಪರ್ದಿನ |
ಗಱಿಯುನದಂ ಗ(ನ)ಗೆಮಾಡಿ ಪುಣ್ಣೊಳಗಿಟ್ಟೇ ||
ತೆಱದಿಂ ಕಳೆಯೆ [1]ತುರಗಂ |
ಪಱಿದಂತಿರೆ ಧಾರೆವಿಟ್ಟು ನಿಶ್ಶೇಷಿಸುಗುಂ || ೨೩ ||

ಶೋಧಿಸಿದಿಂಬುಳಿಯಂ ಸಂ |
ಶೋಧಿಸಿ ಪುಣೊಳಗೆ ಬಿಡುಗೆ ಮಧುಘೃತಮಂ ನಿ ||
ರ್ವ್ಯಾಧಿ ಹಯಕ್ಕಕ್ಕುಂ ಪುಣ್ |
ಬಾಧಿಸ(ಸಿ)ದಂತಾಗಿರೆ ಸೇಕ ಗೆಯ್ಯೆಣ್ಣೆಗಳಿಂ || ೨೪ ||

(ಶೋಫಕ್ಕೆ)

ಉರದಿಂದಮುಭಯ ಪಕ್ಷಾಂ |
ತರದಿಂದಂ ಕ್ರೋಡ ಮೂಲದಿಂದಂ ಶೋಫಂ ||
ಪರಿದು ಪರ(ರಿ)ಕಲಿಸಿ ತೋರ್ಪೊಡೆ |
ಸೆರೆವಿಡುವುದು ಪೂರ್ವಪಾದದೊಳ್ ನಿಪುಣತೆಯಿಂ || ೨೫ ||

ಗಿಣಿಮೂಗ ದೊಂಡೆಯನರೆದ |
ದಱಿಕೊಳಗೆಱೆದಾ ಬೇವಿನ ಕಷಾಯಮಂ ಪೂಸುಗೆ ಮ ||
ರ್ದೞಿವವರು ಮಱಿಯದವರುಂ |
ಪೆಱತೇವುದಿದೊಂದೆ ಮರ್ದ್ದು ಶೋಫಾಪಹರಂ || ೨೬ ||

ಕೊ(ಕೆ)ಂತಲೆಯನ ಗೆ(ಗ)ಡ್ಡೆಯ ನೋ |
ರಂತಿರೆ ಕೋಱೆಯೊಡನೆ ಸಣ್ಣಮಪ್ಪಿನಮರೆದು ||
ಪ್ಪಂ ತಳಿದು ಪೂಸೆ ಕಿಡುಗುಂ |
ಭ್ರಾಂತಿಲ್ಲದೆ ದುಷ್ಟಶೋಫೆಯೆನಿತೊಳವನಿತುಂ || ೨೭ ||

ಕುನಿಯನ ಪೆಣನಂ ವಾಲ್ಮೀಕ |
ಮನಗುಬ್ಬಿದ ನಡಸಿ ಕಡಿದು ಮಣ್ಣಂ ಸು(ಸ)ಣ್ಣಂ ||
ಸಮನಿರಿಸಿ ಶಲ್ಯಮಂ ಮ |
ಣ್ಣನೆ ಮೆತ್ತಂತರಿಸಿ ಬಯ್ತು ತನ್ಮೃತ್ತಿಕೆಯಿಂ || ೨೮ ||

*ಅಸುವೆಯೊಳರೆವುದು ತಗ್ಗಿ ಯ |
ರಸಮಂ ಪೊಯ್ದು ಟ್ಟು ಬಱಿಕೆ ಲೇಪಿಸುವುದದಂ ||
ಪೆಸರಱಿಯದ ಬಾಹಂ ಕೋ |
ಳ್ಪಸಗಿರ್ದ ವಿಷಂಗಳೆಲ್ಲ ಮಿರದುಪಶಮಿಕುಂ || ೨೯ ||

---

1 ತದುಂಗು, ತಡುಂಗು

*ಎಲ್ಲಾ ಪ್ರತಿಯಲ್ಲೂ – ಈ ಸ್ಥಳದಲ್ಲಿ ಎಂದರೆ 'ಅಸುವೆ' ಎಂಬ ಪದದ ಹಿಂದೆ 'ಅಂಮಿಕಲ್ಲು' ಎಂದು 'ಅಸುವೆ' ಶಬ್ದಾರ್ಥವನ್ನು ಬರೆದಿದೆ, ಆ ಶಬ್ದಾರ್ಥವು ಗ್ರಂಥಕ್ಕೆ ಸಂಬಂಧಿಸಿದುದಲ್ಲ.

ಕಂ|| ಕಾಸದ ಚಿಕ್ಕಣಗೆಸಱಿಕೊಳ್ |
ಸಾಸಿವೆ (ಸವಿ) ಕಲ್ಲುಪ್ಪು ಕಣಿಕಮುರ್ದ್ದಿನಪುಡಿಯುಂ ||
ಬೇಸಱದೆ ಕೂಡಿ ಕುದಿರೆಗೆ |
ಪೂಸುಗೆ ಕಡು[ಮಂದ]ಮಾಗಿ ಶೋಫಂ ಕಿಡುಗುಂ || ೩೦ ||

ಉಪೇಂದ್ರವಜ್ರಂ|| ಗ(ಳಾ)ಳೋರುಜ(ಗ)ಂ ತಾಳುಕ ಜಿಹ್ವರೋಗಂ |
ಗಳಗ್ರಹಂ ದ್ರೋಣಿಕೆ ವಕ್ಷಶೋಫಂ ||
ಉಳೂಕಪಾತಂ ಕೆಱಕಿಂತು(ಕೆಂದು) ವಾಹಾ |
ಕುಳಕ್ಕೆ ಪೇೞ್ದಿ ಧ್ಯಯನಂ ದ್ವಿಸಪ್ತಂ || ೩೧ ||

ಇಂತು ಚತುರ್ದಶಾಧ್ಯಾಯಂ

ಪಂಚದಶಾಧ್ಯಾಯಂ

ತ ಳ ರೋ ೀ ಗ ಂ

ಕಂ|| ಕಿಱುಗಲ್ಲೊಳ್ ಕೆಸಱೊಳ್ ಮೊಳೆ |
ಕೊರಡುಗಳೊಳ್ ಮುಳ್ಳೊಳಿಡುಕುಱಿಡೆಗಳೊಳಂ ಪಾ ||
ಯ್ದುಱದೆ ಕೊಳಗುಗಳ್ ಸಲೆ ಕು |
ತ್ತಿಱಿದೊಡೆಕುತ್ತಡಿಯ ನಿಡುವೊಡದು ತಳರೋಗಂ || ೧ ||

ಕ್ಷೀರಿಕೆಯಂ ಕರ್ಚುವುದಾ |
ಕ್ಷೀರಮಹೀರುಹಕಷಾಯದಿಂದಂ [ತಂದಂ] ||
ಭೋರುಹ ಲೋಧ್ರಂ ತ್ರಿಫಲೆಯ |
ನೀರೊಳ್ ಮಃ(ಧು)ಮಿಶ್ರವಾಗೆ ಪೂಸುಗೆ ಖುರಮಂ || ೨ ||

ಅರಗುಂ ತಿಲತೈಲಂ ಸ |
ಜ್ಜರಸಂ ಶ್ರೀವತ್ಸಕಂ ಘೃತಂ ಗುಗ್ಗುಲಮಂ ||
ಖುರಮಂ ಪೂಸುಗೆ ಬೞಿಕಾ |
ಖುರಮಂ ಮೆಟ್ಟಿಸುಗೆ ಕಾಸಿ ತಂದಿಟ್ಟಿಗೆಯಂ || ೩ ||

ಆರಿದಾಳಂ ತುಪ್ಪಂ ಸ |
ಜ್ಜರಸಂ ಮೆಳ(ಣ)ಸರಗು ಗೇಱಗೊಟ್ಟಿಯುಮೊಂದಾ ||
ಗಿರೆ ಮಾಡಿ ಕಾಸಿ ಪೂಸುಗೆ |
ಖುರಮಂ ಮೆಟ್ಟಿಸುಗೆ ಕಾಸಿ ತಂದಿಟ್ಟಿಗೆಯಂ || ೪ ||

ಆರಿದಾಳಂ ಲೋಧ್ರಂ ತಿಲ |
ಮರಿಸಿನವಂ ತ್ರಿಫಲೆ ಗೇಱಗೊಟ್ಟಿಯುನಿಂಬಾ ||
ಗಿರೆ ಕೂಡಿ ಕಾಸಿ ಪೂಸುಗೆ |
ಖುರಮಂ ಮೆಟ್ಟಿಸುಗೆ ಕಾಸಿ ತಂದಿಟ್ಟಿಗೆ(ಯಂ)ಯೊಳ್ || ೫ ||

ಉಪಮಾರಹಿತಂ ಮತ್ತೊಂ |
ದುಪಾಯಮುಂಟೆಲ್ಲತೆಱದ ತಳರೋಗಂಗ ||
ಳ್ಗುಪಶಮಮಂ ಪುಟ್ಟಿಸುಗುಂ |
ತ್ರಿಫಲೆಯು ಮೆಳ್ಳಣ್ಣೆಯುೂಡೆ ತಳರೋಗಹರಂ || ೬ ||

(ಕೂರ್ಚರೋಗ)

ತುರಗದ ಕೂರ್ಚಸ್ಥಾನಾಂ |
ತರದೊಳಮತಿರೌದ್ರವೇದನಂ ಪುಟ್ಟೆ ಭಯಾ ||
ತುರನಾಗಿ ಕುಂದಿ ನಡುಗು |
ತ್ತಿರೆ ರೋಗಂ ಕೂರ್ಚರೋಗಮೆಂದಱಿವುದದಂ || ೭ ||

ಕಂ|| ಸರಳಂ ಕೋಷ್ಠಂ ಮಂಜ |
ಷ್ಠೆ ರಾಸ್ನೆ ಬೆಳ್ಳುಳ್ಳಿ ಸೈಂಧವಂ ಗೋಕ್ಷೀರಂ ||
ಬೆರಸಟ್ಟು ಪೂಸೆ ಕಿಡುಗುಂ |
ತುರಗಕ್ಕಂ ಕೂರ್ಚರೋಗ(ಲಿಂಗ)ಮಭಿನವಚಂದ್ರಾ || ೮ ||

ಸಮವಾಯುಂ ಕಳೆದೊಡೆ ಸೇ |
ಕಮನತಿಶಯಮಾಗಿ ಮಾಡಿ ಕಳೆದಗದಱಿಂದಂ ||
ಶಮ ಮಾಡ(ಗ)ದಂದದನನು |
ಕ್ರಮದಿಂದಂ ಪೊರ್ದಿ ಬರೆಯುನಿಡುವುದು ನಯದಿಂ || ೯ ||

(ಕಣ್ಣ ಪುಷ್ಪಪಟಲಾದಿ)

ನಯನಾಂಬು ಪೊಣ್ಮೆ ಪಿತ್ತಾ |
ಶ್ರಯಮಕ್ಕುಂ ಪೞ್ಕೆ ಸುರಿಯೆ ನಯನಂ ಶ್ಲೇಷ್ಮಾ ||
ಶ್ರಯಮಕ್ಕುಂ ವ್ಯಥೆಯಿಂದಂ |
ನಯನಂ ಮುಚ್ಚಿರ್ಪೊಡದುವೆ ವಾತೋತ್ಥಾನಂ || ೧೦ ||

ಇಂತೀ ದೋಷತ್ರಯದಿಂ |
ದಂ ತಿಮಿರಂ ಕಾವ ಪುಷ್ಪಪಟಲಾದಿಗಳುಂ ||
ಭ್ರಾಂತಿಲ್ಲದಕ್ಕುಮೞ ಕಡೆ |
ಗಂ ತುರಗವಿಲೋಚನಾದಿಯೊಳೆ ಬುಧಬಂಧೂ || ೧೧ ||

ಪರೆದು ಪರಿ(ರ)ಕಲಿಸಿ ಕವಿವಾ |
ಪರೆಯಂ ತೆಗೆದಱಿದು ಕಳೆದು ಸೈಂಧವಮಂ ತಂ ||
ದರೆದು ಪುಡಿಮಾಡಿ ತೀವಿದೊ |
ಡಱ ಕೆಡುಗುಂ [1]ಚಕ್ಷುರೋಗಮಿರದುಪಶಮಿಕುಂ || ೧೨ ||

ಕರ್ಪುರಮಂ ಸ್ಯೆಂಧವಮಂ |
ಪಿಪ್ಪಲಿಯಂ ಜೇನತುಪ್ಪಮಂ ನೊರೆವಾಲೊಳ್ ||
ತುಪ್ಪಂ ನಿಲೆಯಟ್ಟುದ ಪದ |
ನಪ್ಪಂತೆಚ್ಚುವುದು ಚಕ್ಷುರೋಗಂ ತೀರ್ಗುಂ || ೧೩ ||

ಅರೆ(ರ)ಗಣಿಲೆ ತಾಱ ಮಣಿಶಿಲೆ |
ಮರಿಚಂ ಮಾಗಧಮೆ ಶಂಖ ನಿಂಬಶಲಾಕೋ ||
ತ್ತರಮನಜಮೂತ್ರಮಂ ಪೊ |
ಯ್ದರೆದೆಚ್ಚುಗೆ ಚಕ್ಷುರೋಗಮಿರದುಪಶಮಿಕುಂ || ೧೪ ||

ಅರಿಪಾಳಿ ಪಟೋಲಂ ಕಿ |
ಳ್ಸೊ(ಳ್ಸಿ)ರೆ ರಕ್ತಂ ಮಂಜು ಮೊಳೆ ತಮಸ್ತಿಮಿರಂ ಪೂ ||
ವರಸೆ ತೆರೆಯೆಂಬ ಪಲವ |
ಕ್ಷಿರೋಗಮಂ ಕಳೆಗುಮಂಜನಂ ಜಗ(ನ)ಕೆ ಹಿತಂ || ೧೫ ||

---

1 ವಕ್ಷರೋಗ

ಕಿವಿಬೇನೆ (ಕರ್ಣರೋಗ)

ಕಂ|| ವಾತಶ್ಲೇಷ್ಮದಿ ನತ್ತ್ಯುಪ |
ಮಾತೀತಂ ಕಿವಿಯ ಬೇನೆಯಕ್ಕುಂ ತುರಗ ||
ವ್ರಾತಕ್ಕೆ ಬಗೆಯದಿರೆ ವಿಷ |
ರೀತಂ ಬೆಂಸಲದು ಕಾಡುಗುಂ ಪಲದೆವಸಂ || ೧೬ ||

ಕೞಿಯುಂ ಸೋಧಿಸಿ ತಂದದ |
ರೊಳಗಲ್ಲವನಿಕ್ಕಿ ಮಾತುಲುಂಗಾಮ್ಲಮುಮಂ ||
ತಿಲತೈಲಮುಮಂ ಪೊಯ್ದಾ |
ಗಳೆ ಬೆಚ್ಚನೆಮಾಡಿ ಕಿವಿಯೊಳೆಱೆದೊಡೆ ತೀರ್ಗುಂ || ೧೭ ||

ಜನಿಯಿಸು ಗುದನಿಂ(ಗದಱಿಂ) ಮೆಯ್ಯ್ ತೊ |
ಟ್ಟನೆ ಪೊಱಮಡೆ ಕರ್ಚಿ ಬಿಸಿಯ ಪಾಲೊಳದಂ ನಿ ||
ರ್ಜನಸದಿರೆ ಕಿವಿಯೊಳೆಣ್ಣೆಯೊ |
ಳಿನಿಸಾನುಂ ಚಿಂತೆಮಾಡಿ ಸೇಕಿಪುದದಱಿಂ || ೧೮ ||

ಅತಿಧವಳಮುಪ್ಪಿನಂ ತೊಳೆ |
ಘೃತಮಂ ತಣ್ಣೀರೊಳೊರಸಿ ಸೈಂಧವಸಹಿತಂ ||
ಘೃತಮಂ ಗುದಮುಖದೊಳ್ ಪೂ |
ಸುತೆ [1]ಮಾಣ್ಗುಂ ವಾಜಿಗಳ್ಗೆ ಪಾನಭ್ರಂಶಂ || ೧೯ ||

ಆವುಂಡಿಗೆ (ಚರಣಗ್ರಂಥಿರೋಗ)

ಸೊಗಯಿಪ ಮಣಿಬಂಧಂ ತೊ |
ಟ್ಟನೆ ಕೊಳೆ ಕೋಮಳಿಕೆಗೆಟ್ಟು ಗಂಟಾದೊಡೆ ವಾ ||
ಜಿಗಳಳುಕಿಹಡೆಯಲಾವುಂ(ಗಂ-ಟಿಂ) |
ಡಿಗೆಯೆಂಬುದು ಗಂಟು ಕುಂಟುಮಾಳ್ಕುಂ ಹಯಮಂ || ೧೯ ||

ಮ|| ಅರಿದಾ ಗ್ರಂಥಿಯ[2]ರಕ್ತಮಂ ಕಳೆದು ಮತ್ತೆಳ್ಳೆಣ್ಣೆಯಂ ಪೂಸಿ ವಿ |
ಸ್ತರದಿಂ ಮಾಡುಗೆ ಸೇಕಮಂ ಬೞಿಕಮತ್ತಂತಲ್ಲಿ ಗೋಮೂತ್ರದಿಂ ||
ದರೆದಾನಾಗರಮಂ ಹರಿದ್ರಯುಗಮಂ ವಸ್ತ್ರಾಂತರಂಗೆಯ್ದು ಮಂ |
ತ್ವರಿತಂ ಕಟ್ಟುಗೆ ವಾಜಿಗಳ್ಗೆ ಚರಣಗ್ರಂಥೀರುಜೋಚ್ಚಾ(ಟಾ)ಟನಂ || ೨೦ ||

ಕಂ|| ತಳಲಿಂ(ರೋ)ಗ ಕೂರ್ಚಲಿಂ(ರೋ)ಗಂ |
ಗಳವುಂಡಿಗೆ ಗಂಟುಗಳ್ಗುದಭ್ರಂಶಂ ವ್ಯಾ ||
ಕುಲಮಕ್ಷಿಕರ್ಣರೋಗಂ |
ಗಳುಮಂ ವಿರಚಿಸಿದ ಪಂಚದಶಮಾಧ್ಯಾಯಂ || ೨೧ ||

ಇಂತು ಪಂಚದಶಾಧ್ಯಾಯಂ

---

1 ಮಾಣ್ಕುಂ, ಬ್ಕುಂ 2 ರಕ್ತ

ಷೋಡಶಾಧ್ಯಾಯಂ

ಸರ್ಪವಿಷಾದಿಯ ದೋಷಂಗಳ್

ಕಂ|| ತನುಶೋಭ(ಫ)ಮೇಱೆ ಗಂಟುಗ |
ಳಿನಿತಾನುಂ ತೋಱೆ ಸುರಿಯೆ ಮುಖದಿಂ ಶ್ಲೇಷ್ಮಂ ||
ಮನಮಿಕ್ಕೆ ಬೇಗದಿಂ ಕಿ(ನಿ)ಡಿ |
ದಿನಿಸಾನುಂ ಸುಯ್ಯೆ ರೋಮ ಮೊಡ(ದೆ)ದಿರೆ ಮತ್ತಂ || ೧ ||

ಪ(ಸ)ಂದಿರೆ ಬಾಲಂ ನಾಲಗೆ |
ಕರಿದಾಗಿರೆ ತಿಮಿರಮಡರೆ(ಗೆ) ಚೇಷ್ಟೆಗಳೆನಿತುಂ ||
ಕರಮತಿಕುಪಿತಮನಂ ವಿಷ |
ಧರನಳುರ್ದುಂ ಕೊಂಡುದಕ್ಕು ಮೆಂದಱಿವುದದಂ || ೨ ||

ಉರಗಂ ಕೊಂಡೆಡೆಯನದಂ |
ತ್ವರಿತಂ ತೆಗೆದರಿದು ಕಳೆದು ಮೆಯ್ಯೊಳ್ ವಿಷಮಂ ||
ಪರಿಯಲ್ಕೀಯದೆ ತದ್ವಿಷ |
(ಹ)ರಮಂ ಕಟ್ಟಿಸುವುದುಪ್ಪುಮಂ ತುಪ್ಪಮುಮಂ || ೩ ||

ಬೞಿಯಂ ಕೆಸಱೊಳೆ ಮೆಯ್ಯಂ |
ಬಳಿವುದು ಮಧುಘೃತ ಸಮಾನಗುಡಸಂಯುತದಿಂ ||
ತು(ಳು)ೞಿ ಕಿಱುಕು ಸಾಲೆಯುಮನಾ |
ಗಳೆ ಕಳ್ಳೊಳ್ ಕುಡುಗೆ ಮಧುವಿಮಿಶ್ರಿತದಿಂದಂ || ೪ ||

ತಱಿದರೆದು ಸೆಳ್ಳತಿಗುಡಂ |
ಕಿಱು(ಕು)ಸಾಲೆಯ ಬೇರುಮಂ ಸವಿಸ್ತರದಿಂ ತಂ ||
ದೆಱೆದಂಬಿಲದೊಳೆ ವಾಜಿಗೆ |
ಪೆಱತೇವುದೊ [ಮರ್ದು] ಮೂಲಮಂತ್ರಮಿದೆ ವಿಷತಂತ್ರಂ || ೫ ||

ಎಮ್ಮೆಯ ಸಗಣದ ರಸದೊಳ |
ಗಿಮ್ಮಾನಂ ಘೃತಮನೆಱೆದು ಕುಡುವುದು ಮೇಣ್ ಮ ||
ತ್ತೊಮ್ಮಾನಂ ಘೃತ ಮೂ(ಮಾ)ಡುವು |
ದಿಂಮಾನಂ ಕೞಿಯೊಳರೆದು ನೀಲಿಯ ರಸಮಂ || ೬ ||

ಕಡವದ ತಿಗುಡಂ ಘೃತಮುಮ |
ನೊಡಗೂಡಿ ಹಯಕ್ಕಮಾವುದಂತಲ್ಲದೊಡಂ ||
ಕಡುಮುಳಿದು[ಕೊಂಡ]ವಿಷಮಾ |
ಗಡೆ(ಳೆ)ಕಿಡುಗುಂ ಬೞಿಕ್ಕೆ ಕುಡುಗೆ ತಗ್ಗಿಯ ರಸಮಂ || ೭ ||

ಕಾಳಿಕಸರ್ಪವಿಷದೋಷ

ಕಂ|| ಕು(ವಿ)ಳಿಯಂ ಕೊಂಡೊಡೆ ಮೆಯ್ಯೆ |
ಲ್ಲವು ನಡುಗುಂ ಬಾಹುದಶನಮುಂ ಕೋಶಮುಮಂ ||
ಕುವಿ.........ಣಂ ಪೂಸುವ್ವ |
ದವಧಾರಿಸಿ ಬಟಿಕೆ ಕುಡುಗೆ ತಗ್ಗಿಯ ರಸಮಂ || ೮ ||

ಉರಗವಿಷಂ ಕೆಂಜೇ(ದೇ)ಟುಂ |
ತೆರಡಕ್ಕುಂ ಸ್ವರಸಭಾವಿಕ[ತ]ಂ ಮಾಡಿದುದಂ ||
............ದ ಪಂಚಾನನಮನಾ |
ದರದಿಂದಂ ಮಾಳ್ಕೆ..........ನಸ್ಯ ಪಾ[ನಾಂ]ಜನಮಂ || ೯ ||

ಸರ್ವವಿಷಕ್ಕೆ

ಸ್ಥಾವರ ಜಂಗಮ ವಿಷಹರ |
ವಿಾವಸುಧೆಯೊಳೊಂದೆ ದಿವ್ಯಮೂಲಿಕೆ ಪೆಜಿತೇಂ ||
ಭಾವಿಸದೆ ಕುಡುಗೆ ನರತುರ |
ಗಾವಳಿಗಂ ವಿಷಕೆ ಕರಿಯನೀಲಿಯ ಬೇರಂ || ೧೦ ||

ಸರ್ಪವಿಷಕ್ಕೆ

ಅಜಮಾ(ಮೂ)ಲಿಮಂದಮುಹಿಷೀ |
ವ್ರಜರುಧಿರಮನರೆದು ತಡೆಯದೂಡುಗೆ ತುರಗ ||
ವ್ರಜಕೆ ಹಿತಾರ್ಥಮದಕ್ಕುಂ |
ಭುಜಗವಿಷಂ ಸಪರಿಹಾರ ಮಭಿನವಚಂದ್ರಾ || ೧೧ ||

ಪೊಲದೊಳ್ತೊಳಲ್ದು ತಂದಾ |
ಮೊದನೆ(ಗಿ)ಲೆ ಮುಂಗುರಿಗಳಂ ವಿಚಾರಿಸಿ ನೆಣದೊಳ್ ||
ಕಲಸಿ ಮಧುಘೃತದೊಳೂಡುವು |
ದಲಸದೆ ವಿಷಹರಣಮುಮದಕ್ಕಾನೆ ನಿಶ್ಚಯದಿಂದಂ || ೧೨ ||

ಪಾವಿನಗಂ............ |
ಗಂಪುಗೆ ರೋಮಮೊಡೆದು ಮೈಯೆಲ್ಲಂ ಗ(ಘ)ಂ ||
ಟಾಗಿ ಮುಖಂ ಬಾತು ಖುರಂ |
ಭೊ(ಜೊ)ೀಗಂಬೋದಂತೆ ವಾಜಿ ಮೇಯದೆ ಸಲ್ಗುಂ || ೧೩ ||

ಅರಿಸಿನದೊಳ್ ವೈಯಬ್ಯಮ |
ನೊರಸಿ ಬಳಿಕ್ಕಂತೆ ನಸ್ಯಮಂ ಮಾಳ್ಪುದು ಸಾ ||
ಗರದಿಂದೆ ಬಣ್ಣ ಸೀರೆಯೊ |
ಳೊರಸುಗೆ ಮೆಯ್ಯೆಲ್ಲಮಂತೆ ವಿಷಹರಮಕ್ಕುಂ || ೧೪ ||

ಕಂ|| ಕಾಂತಾರದೊಳಂ ಪ್ರೇತವ |
ನಾಂತರದೊಳಮತಿ ಭಯಂಕರಂ ಪುಟ್ಟೆ ಭಯ ||
ಭ್ರಾಂತಿಯಿನೋಡಿದೊಡಲ್ಲಿ ದು(ತು) |
ರಂತ ಗ್ರಹವಿರ್ದ್ದು ಪಿಡಿಗುಮಾ ಹಯವರನಂ || ೧೫ ||

ತಿರಿತರ್ಕುಂ ಬೀೞ್ಗುಂ ಮೆ |
ಯ್ಯುರಿ ತರ್ಕುಂ ಪಲ್ದಿಂಗು ಮುಕ್ಷಿಗಳ್ ಬಹುವರ್ಣಂ ||
ಬೆರಸಿರ್ಕ್ಕುಮಪ್ಪೊಡಂ ತಾಂ |
ತುರಗಂ ಗ್ರಹಭೀತನಕ್ಕು ಮಾರ್ಗಮಸಾಧ್ಯಂ || ೧೬ ||

ತ್ರಾಣಿತಂ ಸಮುದ್ರಫಲಮಂ |
ನರಮೂತ್ರದೊಳರೆದು ಗೆಯ್ಯೆ ನಸ್ಯಾಂಜನಮಂ ||
ತುರಗ(ಗ್ರ)ಹ ಪೀಡೆಯುಮಂ |
ಪರಿಹರಿಸುಗು ಮೆಂದನಲ್ತೆ ಸುಕರವಿಲಾಸಂ || ೧೭ ||

ಮೆ(ಳ)ಣಸು ವಿಳಂಗಂ ಬಜೆ ಮಣಿ |
ಸಿಲೆ ಕೋಷ್ಠಂ ಮಾಂಸಿ ಸುಂಠಿಯಜಮೋದಮಿವಂ |
ಚಲಚಿತ್ತನಾಗದೆಱೆದಾ |
ಗಳೆ ಪಿಂಡಮನಿಡುಗೆ ಕೆಡುಗು ಮಾಗ್ರಹದೋಷಂ || ೧೮ ||

(ಕ್ಷಯರೋಗಕ್ಕೆ)

ಕರಮೆ ಜಡನಾಗಿ ಮೈಸೆರೆ |
ಪರಿದು ಕರಂ ಮೋಹನುಱಿದು ಜೋಗಿ(ಜಾನಿ)ಸಿ ಬೇಗಂ ||
ಬರೆ ದುರ್ಗಂಧಂ ಘ್ರಾಣಾಂ |
ತರದಿಂ ಪೊಱಮಡುಗುಮಪ್ಪೊಡಂ ಕ್ಷಯರೋಗಂ || ೧೯ ||

ಕುಱು(ರಿ)ತಳೆಯಂ ಕಲ್ಲುಪ್ಪಿನೊ |
ಳರೆದೂಡುವುದಲಸದೇಱಿದಂಗೆಯ್ಯದೆ ನ ||
ವ್ಯಱಿಕೆಯ ಮರ್ದನ್ನದೆ ಮೂ |
ಗಿಱಿಯದೆ ದಿವ್ಯಪ್ರಯೋಗಮಂ ಕ್ಷಯಹರಮಂ || ೨೦ ||

ಏರಂಡಮೂಲಮಂ ತ್ರಿಫ |
ಳಾ ರಸಮಂ ಚಿತ್ರಮೂಲಮಂ ಮದ್ಯದೊಳಂ ||
ಜಾರಿಸಿ ಕುಡಿಸುಗೆ ತುರಗ |
ಕ್ಕಾರೋಗ್ಯಂ ಕ್ಷಯರುಜಾಪಹರಣಂ ಯೋಗಂ || ೨೧ ||

ಪ್ರಕಟಿತ ಕಾಂಚನ ಕೃಷ್ಣಾ |
ಭ್ರಕ ಕುವಲಯ ನೀಲಪದ್ಮರಾಗಾಭಾಸಂ ||
ಪ್ರಕಟಿಸೆ ವರ್ಣಂಗಳ್ ಪಂ |
ಚಕವಕ್ಕುಂ ಗುಗ್ಗುಳಕ್ಕೆ ಸುಕರವಿಲಾಲಾ || ೨೨ ||

ಕಂ|| ಸಲೆ(ತಿಲ)ಮಧುರಮುಪ್ಪುತಿಕ್ತಂ |
ಗಳುಮಾ ಗಂಧಂಗಳಕ್ಕುಮಂತರಯಬ್ದಿಂಗು ||
ಗ್ಗುಳಕೆ ಸವಿ ನಾಲ್ಕುಭೇದಂ |
ಗಳಕ್ಕುಮೆಂದಱಿದು ಯೋಜಿಪುದು ಗುಗ್ಗುಳಮಂ || ೨೩ ||

ಕರಿಗಳ್ಗೆ ಕುಮುದವರ್ಣಂ |
ತುರಂಗಮವ್ರಜಕೆ ಪದ್ಮರಾಗಾಭಾಸಂ ||
ನರರ್ಗೆ(ಳ)ಮಲಕಾಂಚನಾಕೃತಿ |
ದೊರೆಕೊಳೆ ತೆಱನಱಿದು ಯೋಜಿಪುದು ಗುಗ್ಗುಳಮಂ || ೨೪ ||

ಪಲವರ್ಧಮಾದಿಯಾಗಿರೆ |
ಪಲವುಂ ದಿವಸ ಮುಳವೇಱೆಕೊಡುವುದದಂ ನಾ ||
ಲ್ವಲಮೆಯ್ದು ವಿನಂ ಬೞಿ |
ಯೊಳೇೞುದಿವಸಕ್ಕಿೞಿಯೆ ಕುಡಗನುಕ್ರಮದಿಂದಂ || ೨೫ ||

ಶರದದಋತುವಿನೊಳಂ ವಿ |
ಸ್ತ್ರರಸುರತೋತ್ಸವ ವಸಂತಋತುವಿನೊಳಂ ಬೈ ||
ಗಿರುಳಿಕ್ಕುಗೆ ಗುಗ್ಗುಳಮಂ |
ಬೆರಸಿ ಪಳತ್ರಯದೊಳೆಂದನಭಿನವಚಂದ್ರಂ || ೨೬ ||

ವರುಷದೊಳಂ ಗ್ರೀಷ್ಮದೊಳಂ |
ಭರದಿಂದಂ ಕುಡುಗೆ ತುಪ್ಪದೊಳೆ ಗುಗ್ಗುಳಮಂ ||
ಗೋಮೂತ್ರಮಿಶ್ರಿತಂ ಸ |
ರ್ವಾಮಯಹರಣಂ ಶರೀರಸಂಪತ್ಕರಣಂ || ೨೭ ||

ಇಂತೀದ್ವಾದಶಮಾಸಾ |
ಭ್ಯಂತರದಾವಾವ ಋತುವಿನೊಳ್ ತೀರ್ದೊಡ ವಾ ||
ದಂ ತಡೆಯದೆ ಕುಡು ಸತ್ವರ |
ಮಂ ತಿಳಿ ಮುದದಿಂದೆ ಮುನ್ನೆ ಪೇೞ್ದೀಕ್ರಮದಿಂ || ೨೮ ||

ಈ ಗುಗ್ಗುಳಂ ರಸಾಯನ |
ಯೋಗಮಿದಂ ಕೊಟ್ಟೊಡುತ್ತರಕ್ರಿಯೆಯೊಳದಂ ||
ಬೇಗದಿನಿಕ್ಕುವುದಳಿಲೆಯ |
ನೋಗಡಿಸದೆ ಹಯಕ್ಕೆ ಚಂದಿವರ್ಮನ ಮತದಿಂ || ೨೯ ||

ಬೇವಿನ ಕಷಾಯ ದೊಳಗಣ |
[ಮಾ]ವಿನ ಮೂತ್ರಮನೆ ಸಾರಮಣಿಸಿಲೆಗಳನೆ ತಾಂ ||
ಭಾವಿಸಿ ಕೊಂಡರೆದಿಂಬಿನೆ |
ತೀವುಗೆ ಕಬ್ಬೊರ್ನ್ನ ಬಟ್ಟಲೊಳ್ ನಿಪುಣತೆಯಿಂ || ೩೦ ||

(ಹರೀತಕೀ ಕ್ರಿಯೆ)

ಕಂ|| ಅಱುನೂಱನೆಂಟುನೂಱಂ |
ನೆಱೆಸಾಸಿಱಮಣಿಲೆಯಂ ತಥಾಕ್ರಮದಿಂದಂ ||
ಕಿಱಿದುಮಱೆ ಮಧ್ಯಮೋತ್ತಮ |
ಮಱಿದಿಕ್ಕುಗೆ ಮೂಱುವತ್ಸರಂ ಬರ್ಪಿನೆಗಂ || ೩೧ ||

ಅಯ್ದು ಯ್ದನೆರೆಯೆ ಕುಡೆ ನೂ |
ಱಯ್ದು ದಿನಂ ದಿವಸ ಮುಳಮನು ಕ್ರಮದಿಂದಂ ಮ ||
ತ್ತ್ರಯ್ದಯ್ದು ನಿೞಿಗೆ ಘೃತಮಂ |
ಪೊಯ್ದು ಕ್ಕುವುದಣಿಲೆಯಂ ಸವಿಸ್ತರದಿಂದಂ || ೩೨ ||

ಬಾಧಿಸಿ ಕಳೆಗುಂ ಸರ್ವ |
ವ್ಯಾಧಿಗಳಂ ಶ್ಲೇಷ್ಮವಾತ ಪಿತ್ತಂಗಳುಮಂ ||
ಸಾಗಿಸಿ ಮಿಗಲೀಯದೆ ಸಂ |
ಬೋಧಿಸಿ ಕುಡುಗೀ ಹರೀತಕೀಕ್ರಿಯೆ ದಿವ್ಯಂ || ೩೩ ||

ಸಕಲ ವಿಷಹರಮನುಪಮ |
ಸಕಲ ಕ್ಷಯರೋಗ ಹರಮನೆಸೆದಿರೆ ಪೇೞ್ದಂ ||
ಸಕಲ ಬುಧಸ್ತುತ್ಯಮನೂ |
ಲ್ಪಕಳಂಕರ್ ಪೊಗೞೆ ಷೋಡಶಾಧ್ಯಾಯದೊಳಂ‡ || ೩೪ ||

ಇಂತು ಷೋಡಶಾಧ್ಯಾಯಂ

---

‡ಅಂತು ಶಾಲಿಹೋತ್ರ ಗ್ರಂಥಂ ೩೦೦ ಮಂಗಲಮಹಾಶ್ರೀ. ಇನ್ನೊಂದು ಪ್ರತಿಯಲ್ಲಿ— ಅಂತು ಸಂಧಿ ೧೬ಕ್ಕಂ, ಪದ ೮೮೦ಕ್ಕಯಂಗಳ ಮಹಾಶ್ರೀ ಶಾಲಿಹೋತ್ರ ಗ್ರಂಥ ೨೮೮೦ ಶ್ರೀಪೂಜ್ಯಪಾದಸ್ವಾಮಿನೇ(ಯೇ) ನಮಃ—ಎಂದಿದೆ.

ಮುದ್ರಿತವಾದ ಬಳಿಕ ದೊರಕಿದ ಪಾಠಗಳು

ಪುಟ	ಪಙ್ಕ್ತಿ	ಮುದ್ರಿತ ಪಾಠ	ಬೇರೆ ಪಾಠ
4	೫	ದರ್ಪಕ	ಖರ್ಪರ
,,	೯	ಅರಿದಾಳಿ	ಅರಿಪಾಳಿ
,,	೮	೨೨ನೆಯ ಕಂದವಾದ ಬಳಿಕ ಇರುವ ಕಂದ	ಪ್ಪುದುಸೃಕ್ವಿಣಿಯುಂ ಹನುಚ | ಕ್ರದ ನೇರ್ಪುಮಮರ್ಕೆವೆತ್ತ ಹನುಸಂಧಿಗಳುಂ ‖ ಬೆದಱದೆ ಬೆಡಂಗನಾ | ಳ್ದೊವಿದ ಚಿಬುಕವುಮುತ್ತರೋಷ್ಠಮುಂ ಕರಮುಚಿತಂ ‖
,,	೧೧	ನೆರೆಸೆರೆಯೆಂಬರಜಾಗಾ?	ನರಿಯೆಂಬ ರುಜೆಗಾಗರಮಾಗದ |
5	೧೪	ಕರ್ಣಂ	ವೃತ್ತಂ‖ ಸ್ಥೂಲಂ ಋಜುಬಾಹುಜಾನು
,,	೧೮	ಘಟಯುಗಮಿಟ್ಟಂ	ಕೊಡನಂ ತಂದಿಟ್ಟ
,,	೨೫	ಸೋಂಕದಿರೆ – ಪೆಳ್ಗತೆರಂ	ಸೋಂಕದಿರೆ ಶುಭದ ಮಪರಖು | ರಂ ಕುಷ್ಠಿಕೆ ಕೂರ್ಜೆ ಜಂಘೆ ಮುಂ ಪೇೞ್ದಿತೆಱಂ ‖
6	೧೮	ಮೊಲೆನೋಡೆ ಕುಱುಯ ತೆಱದಿ	ಮೊಲೆ ಕುಱುಯ ಮೊಲೆಯತೆಱದಿರ್ಕೆಲ
7	೨೨	ದೊಡೆ ಕರ್ಕಂ	ದೊಡೆ ಕರ್ಣಂ
,,	೨೭	ಮುಷ್ಕಾಪಾನಮುಮುದರು	ಪರಿದಿರೆ ಮುಷ್ಕಮನಾ ಕ | ರ್ಪರುಣಚ್ಛವಿ
16	೨	ಮೋಢ್ರಪುಷ್ಪ	ಪುಂಡ್ರಪುಷ್ಪ

ಪರಿಶಿಷ್ಟ

ಮೂಡಬಿದರೆ-ಶ್ರೀ ಮಹಾ ವೀರವಾಣೀವಿಲಾಸ ಜೈನಸಿದ್ಧಾಂತ ಭವನವೆಂಬ ಜೈನ ಪುಸ್ತಕಭಂಡಾರದ ಓಲೆಯಪ್ರತಿಯ ಪಾಠ*

(ಶ್ರೀ ಲೋಕನಾಥ ಶಾಸ್ತ್ರಿಗಳ ಖಾಸಗಿ ಭಂಡಾರ)

ಪು. ಸಂ.	ಮುದ್ರಿತ.	ಹೊಸಪಾಠ.
೪–೯	ಅರಿದಾಳ	ಸೆರೆ ರಕ್ತಂ ಮಂಜುಮೊಳೆ ತಮಸ್ತಿ । ಮಿರಂಗುಂಜರುಸೆನರೆಯೆಂಬ ರುಜೆಗಾ ॥ ಗರಮಾಗದ ಮಧುವಿಲೋಚನಂಗಳ್ ಶುಭದಂ ॥ ೪೨ ॥
,,–೨೬	ತೋರ್ಪೊ...ದಂತಿರೆ	ಪಿಂದೆಪಾರ್ಕಿನ ಕಡೆಯೊಳ್ ॥ ತೀವಿಸಿದಂತಿರೆ
೮–೭.	ಕೊಂಗಂಜ್ಪಳ......	ಕೊಂಗನ ನೊಸಲೊಳ್ ಬೆಳ್ಪೆಳದಿಂಗಳನನುಕರಿಸಿ ತೋರ್ಪೊಡದು ಕಾರುರಗ್ಗಂ ॥
೯–೨೦	೧೯ನೆಯ ಕಂದವಾದ ಬಳಿಕ ಈ ಪದ್ಯ ಹೆಚ್ಚಿದೆ.	ಕೊರಲುಂ ಖುರಂಗಳುಂ ಕ । ಣ್ಣರೋಷ(ಮ)ಮುಂ ಕರಿಯವಾಗಿ ಕೇಸರಮುಂ ಮೆಯ್ಯ ವಿರುವಾಲಧಿಯುಂ ಶ್ವೇತವಾದೊಡಂ ಕೊಂಚೆಪತ್ರನಭಿನವಚಂದ್ರಾ॥
೧೧–೨೦	ಅಮಳಜಳ	ಧವಳಜಳಧರದ ಕೂರ್ಮದ । ಕುವಳಯಬಾಂಧವನ ತೈಲದನಿಮಿಷದ ಸುಧಾ॥ ವಲಿತ ವಿಚಿತ್ರ ಪತ್ರ। ಗ್ರಿವದಂದಮನಿನಿಸು ಬೆಳ್ಪುತೋರ್ಪೊಡೆ ಶುಭದಂ
೧೨–೮	ನಯನಂ ಎಂಬ ಪದ್ಯವಾದ ಬಳಿಕ	ವೃಕಧೂಮಭಸ್ಮ ಕರಮುಂ । ಸಕಕಾಕೋಲೂಕಚಂಡಿನಿರ್ದಿಕಾಳ ॥ ಪ್ರಕರದವರ್ಣಂಗಳ್ ಹಯ । ನಿಕರಕ್ಕಶುಭಂಗಳೆಂದನಭಿನವಚಂದ್ರಂ ॥ ೪೦ ॥
೧೩–೧೯	ಗುರವಿನಿತು	ಕುರವಿನಿತುಂ ವಾಜಿಗೆ ಪಾಂ । ಡರವಾದಂ ರುಜನಿಯೆಂಬರದು ಕರಮಶುಭಂ ॥ ೫೦ ॥

---

*ಈ ಓಲೆಪ್ರತಿಯು ಈ ಗ್ರಂಥದ ಸಂಪೂರ್ಣಮುದ್ರಣಾನಂತರ ದೊರಕಿತು. ಇದರಲ್ಲಿ 46 ತಾಳಪತ್ರಗಳಿವೆ. ಆದಿಯ ೩೮ ಪದ್ಯಗಳಿಲ್ಲ. ೧ನೆಯ ಓಲೆಯ ಮೊದಲಪಙ್ಕ್ತಿಯಾದಿಯಲ್ಲಿ ೩೮ ಎಂಬ ಪದ್ಯಸಂಖ್ಯೆಯನ್ನು ಬರೆದು ನಿರಂತರವಾಗಿ ೩೯ನೆಯ ಪದ್ಯವಿದೆ. ಓಲೆಯ ಸಂಖ್ಯೆ ಮಾತ್ರ ೧ ಎಂದಿದೆ. ಈ ಪ್ರತಿಯನ್ನು ಬರೆದವನು ಆದಿಯ ೩೮ ಪದ್ಯಗಳನ್ನು ಬರೆದಿದ್ದು ಈಗ್ರಂಥವನ್ನು ಪಡೆದವರಿಗೆ ಈ ಭಾಗವು ದೊರಕದೆಹೋದುದರಿಂದ ಅವರು ಪತ್ರ ಸಂಖ್ಯೆಯನ್ನು ೧ ಎಂದು ಭಾವಿಸಿ ಪತ್ರಸಂಖ್ಯೆಯನ್ನು ಗುರ್ತಿಸಿರಬಹುದೆಂದು ಊಹಿಸಬಹುದು ಅಲ್ಲದೆ ಗ್ರಂಥ ಲೇಖಕನಿಗೇ ಈ ಭಾಗವು ದೊರಕದಿದ್ದರೆ ೩೮ ಎಂಬಸಂಖ್ಯೆಯನ್ನು ಹಾಕದೆ ೧ ಎಂದೇ ಲೆಕ್ಕಹಾಕುತ್ತಿದ್ದನು. ಆದುದರಿಂದ ಲೇಖಕನಿಗೂ ಈ ಭಾಗ ದೊರಕದಿದ್ದು ಮೂಲಪ್ರತಿಯಂತೆ ಗ್ರಂಥಸಂಖ್ಯೆಯನ್ನುಹಾಕಿರಬಹುದೆಂದಾದರೂ ಊಹಿಸಬಹುದು, ೨೪ನೆಯ ಕೊನೆಯಲ್ಲಿರುವ ॥೩೪॥ ತುರಗದ ಹೃದಯದೊಳಿತ್ರಿದ–ಎಂಬುದು ೩೫ನೆಯ ಕಂದದ ಆದಿಭಾಗ, ಇದರೊಡನೆ ಮುಂದಣ ೨೫ ಓಲೆಯಲ್ಲಿರುವ ತುರುಂಬಿರ್ದಪದಕ್ಕೆ... ನಿಜೋತ್ಸಾಹಮಂ ॥೩೫॥ ಎಂಬ ಆರನೆ ಅಧ್ಯಾಯದ ೬೯ನೆಯ ವೃತ್ತದ ಕೊನೆಯ ಭಾಗ ಸೇರಿ ೩೫ ಪದ್ಯಸಂಖ್ಯೆಯಿದೆ, ಕುದಿರೆ ಎಂಬ ಮುಂದಣ ಪದ್ಯಕ್ಕೆ ಸಂಖ್ಯೆಯಿಲ್ಲ. ಶ್ರೀಯಂಮೆರೆ ಎಂಬ ಮುಂದಣ ಪದ್ಯಕ್ಕೆ ಮಾತ್ರ ೭೦ ಎಂಬ ಸರಿಯಾದ ಸಂಖ್ಯೆಇದೆ. ಇದನ್ನು ನೋಡಿದರೆ ಲೇಖಕನಿಗೆ ಈ ಗ್ರಂಥ ಭಾಗವು ದೊರಕದೆ ಪ್ರಮಾದಪಟ್ಟಿರುವಂತೆ ತೋರುವುದು. ಇದರಲ್ಲಿ ಗ್ರಂಥಪಾತಹೆಚ್ಚಾಗಿದ್ದರೂ ಈ ಮುದ್ರಣದಲ್ಲಿರುವ ಹಲವು ಲೋಪದೋಷಗಳನ್ನು ಸರಿಪಡಿಸಲು ಅನುಕೂಲ ಪಾಠಗಳುಂಟು. ಹಲವು ಪದ್ಯಗಳು ಅಧಿಕವಾಗಿಯೂ ದೊರಕಿರುವುದರಿಂದ ಅವನ್ನೂ ಇಲ್ಲಿಕೊಟ್ಟಿದೆ.

೧೫-೮ ೫೯ನೆಯ ಪದ್ಯವಾದ ಮೇಲೆ ಈ ಪದ್ಯವಿದೆ
ಬೇರಂ ಮಂಗಳಕ್ಕೈ(ಖೈ)ರಜಂಗನಳಗಂ ಜಂಭಂ(ಕರಂ)ಕತ್ತ ಳಂ।
ಸಾರಂಗಂ ಧವಳಾಂಗ ಮುಂಜತಿಲಕಂ ನೀಲಂ ಲಸತ್ಸಾಹಳಂ ॥
ಘೋರಂ ಕೊಂಗನೆ ಕಾಲಬೊಲ್ಲಕಣೆವಟ್ಟಂಮಹ್ವ? ವರ್ಣಂಗಳುಂ।
ಸಾರಾಯಂ ವಳಯಾಂಘ್ರಿಬಾಲಮಿವು ಕಪ್ಪಾರ್ದಂದು ಸತ್ವಾಧಿಕಂ ॥

''-೨೦ ೬೨ನೆಯ ಪದ್ಯವಾದ ಬಳಿಕ
ಸ್ತನಿ ಶೃಂಗಿ ದ್ವಿಖುರಂ ತ್ರಿಕರ್ಣತಳಹೀನಂ ಹಿಳ್ಳಿನೇಕಾಂಡದು ।
ರ್ಮನಸಂ ನಾಸಿಕಭಗ್ನ ಕಾಗೆ ಹುಲಿಬೆಕ್ಕುಂ ಗರ್ದಭಂ ಗೂಗೆ ಪ ॥
ರ್ದು ನಿಶಾಭಂ ವೃಷಧೂಮುವೆಂಬಿನಿತುವರ್ಣಂ ತ್ಯಾಜ್ಯಮೇಂಸಂ
ದೆಯಂ ॥
(ಈ ಪದ್ಯ ಪೂರ್ಣವಾಗಿಲ್ಲ)

೧೬-೨ ಗಂಧಹೇಷಿತ — ಗಂಧಹೇಷಿತಸ್ವನಭವಿ । ಭ್ರಾಜಿತ

೧೯-೧೮ ರವದ — ರಥದ,

,,-೨೮ ತನುಚ್ಛಿನ್ನ
ತನುಚ್ಛಿನ್ನ(ಭಿನ್ನ)ಘೋರಕಠೋರ ।
ಸ್ವನಮಿವು ಕರ್ಣಕಠೋರ ।
ಸ್ವನಮಿವು ಕರಮುಶುಭಸಹಿತಮಿವು ಶುಭರಹಿತಂ ॥ ೧೯ ॥

೨೦-೮ ಶ್ರೇಷ್ಠ ಎಂಬ ಪದ್ಯವಾದ ಬಳಿಕ ಈ ಪದ್ಯಗಳಿವೆ
ಶೌಚಂ ಜ್ಞಾನಂಕ್ಷಮೆ ಸ ।
ತ್ಯಾಚಾರಂ ಬ್ರಹ್ಮಸತ್ವನೆಂಬುದು ಮತ್ತಂ ॥
ಸೌಚಿತ್ತ ಸುಶಿಕ್ಷಾಗ್ರಹ ।
ಣಾಚರಿತಂ ವಿಮಲಮತಿಹಯಂ ಮುನಿಸತ್ವಂ ॥ ೩೩

ತೇಜೋವಿಭವಪರಾಕ್ರಮ ।
ರಾಜಿತಹಯನಿಂದ್ರಸತ್ವಮೆಂಬುದು ಮತ್ತಂ ॥
ವಾಜಿಸಮುಸತ್ವನೆನಿಸಿ ವಿ ।
ರಾಜಿಸುಗುಂ ದ್ವೇಷರಾಗ ವಿರಹಿತಗುಣದಿಂ ॥

,,-,,
ಕೋಪ ಪ್ರಸಾದ ಸೌಖ್ಯ ।
ವ್ಯಾಪಾರೋದಾರಸತ್ವನಮಕಾ? ರುಚಿರಂ ॥
ವ್ಯಾಪಿತಶೌಚಂ ಜಲಕೇ ।
ಳೀಪರನತಿಶೌರ್ಯನಾಗೆ ವಾರುಣಸತ್ವಂ ॥ ॥ ೩೫ ॥

ಕ್ರೂರಂ ಬಹ್ವಾಶಿ ನಿಶೋ ।
ದಾರರವಂ ರೌದ್ರರೂಪಿ ರಾಕ್ಷಸಸತ್ವಂ ॥
ಭೀರುವ ರಾಜಿವಿರಾದೆವಿ? ।
ಕಾರಿಯೆನಿಪ್ಪುದು ಪಿಶಾಚಸತ್ವದ ತುರಗಂ ॥ ೩೬ ॥

ಸಂಚಿತಮುಳಿಯದು ಧುರ ।
ಸಂಚಿತ ಸಂಸಾಗತ ಸತ್ವಮೆಂಬುದು ಕೋ ॥
ಪಾಂಚಿತದಂತಾಸನ ಪ್ರಿಯಗುಣಮುಂ ನೀ ।
ಚಂ ಭ್ರಷ್ಟಂ ? ತುರಂಗಮಂ ಪಿತೃಸತ್ವಂ ॥ ೩೭ ॥

೨೧-೫ ಪರಿಮಂ
ಪರಿಗುಂ ಧನುಶ್ಶತಾವಳಿಯಂ ಮ ।
ತ್ತದನಂತೆ ಮಗುಟ್ದು ಮಿಗೆ ಗತಿ ।
ಯಿನತ್ಯುತ್ರಮಜವದ

,,-೧೬ ಕರದಿಂ ಎಂಬ ಪದ್ಯವಾದ ಬಳಿಕ
ಪಗಲೊಳ್ ದಶಯೋಜನಮೆ
ಯ್ದುಗುಮುತ್ತಮನೆಂಟನೆಯ್ದುಗುಂ ಮಧ್ಯಮಾಜಿ ॥
ಯ್ದುಗುಮಧಮವಿಂತಿದು(ಂತಾಂ) ಜಗತ್ಪ್ರಸಿದ್ಧಂ ಹಯಾಗಮಪ್ರತಿ
ಬದ್ಧಂ ॥

೨೨-೪ ನಡೆಪಾಗಿ — ನಡರ್ವನಿತು

,,-೬ ನತ್ರಾಣ — ನುತ್ರಾಸಿ

,,-೭ ಮನ್ನ — ಮಂದ

೨೩-೧೦ ನೀಳದೊಳ್ — ನಿಗಾ(ಗ)ಳದೊಳ್

[ಮಂ।
೨೪-೧ ಈ ಪದ್ಯಗಳು ಹೆಚ್ಚಾಗಿವೆ
ನಿಂದಿರಿಸಲ್ಕದುಂ ತುರಗನೊ(ದೊ)ಳ್ ಪರಿವರ್ತನೆ ತೋಱಿ ಬಾಲ
ಸಂದಿಸಿ ಬೀಸಿ ತನ್ನಬಲದಂಗಮನೀಕ್ಷಿಸೆ ಕಂಪಿತಾಂಗದಿಂ ಭೋ ॥
ರೆಂದುಲಿದಾಸ್ಯದಿಂದುರವಮುಟ್ಟಿ ಖುರಾಗ್ರದೆ ಕೆತ್ತೆ ಧಾತ್ರಿಯಂ ।
ಸಂದೆಹಬೇಡ ಲಾಭಕೊಡುಗಾ ಹಯಮಾಗೆ ತದೀಯಭಾವದಿಂ ॥

ಗ್ರಾಹಕಬಂದು ನೋಡಲೆಡದಂಗಮನೀಕ್ಷಿಸೆ ಕಂಪಿತಾಂಗದಿಂ ।
ದೇಹಮನೆಯ್ದೆ ಕಂ(ಠ)ಟಣಿಸೆ ಕೊ(ಪ)ಲ್ಗಳಹಂಗಲಿಸುತ್ತೆ
ಕಚ್ಚುತುಂ॥
ಮೋಹಳಮಾನದಿಂ ಮುಸುಡ ತೂಗುತುಮುಂ ದನಿಹೀನನಾಗಿ ತೋ
ರ್ಪಾಹಯಗೊಂಡನಾವನವಗರ್ಥವಿನಾಶ (ಸ)ಮನುಂಟುಮಾಡು
ಗುಂ ॥

,,-೨೦ ನೊಸಲೊಳ್ ಎಂಬ ಪದ್ಯವಾದ ಬಳಿಕ
ನೊಸಲಾವರ್ತಮದೊಂದು ಮುತ್ತಮ ಮೆರಬಿಲ್ ತೋಱಲ್ ಜಯಂ
ಪಟ್ಟದಂ ।
ತೆಸೆಯಲ್ ಮೂಱು ಶುಭಾವಹಂ ನಿಱಿಸಿದಂತಾವರ್ತನಾಲ್ಕಾಗಿ ರಂ॥
ಜಿಸೆ ನಿಶ್ಶ್ರೇಣಿಕಮುದ್ಭವಂ ನೆಗಟ್ಟುಗಾಸಂತೋಷಮಂ ಕಂದದೊಳ್
ಪ್ರಸವಂಗೆಯ್ದಿರಲಾತುರಂಗಮದು ದೀರ್ಘಾಯುಷ್ಯದಿಂ ಬಾಳ್ಗುಗುಂ॥
ಪಟ್ಟಂಗಟ್ಟಿದವ್ರೋಲೊ ।
ಬ್ಬೊರ್ಟ್ಟೆಸೆದಿರ್ದೊಡೆ ಲಲಾಟದೊಳ್ ಮೂಱಿಡೆಯೊಳ್ ।
ಪುಟ್ಟಿದ ಸುೞಿ ಶುಭದಂಗಳ್ ।
ನೆಟ್ಟನೆ ನೇತ್ರಾಳಿ(ಣಿ)ಯೆಂಬ ಪೆಸರಂ ಪಡೆಗುಂ ॥ ೯ ॥

ತುರಗಂಗಳ್ಗೆ ಲಲಾಟಂ ।
ತರದೊಳ್ ಕಂಕರಿಸಿ ನೀಳದೊಳ್ಸುೞಿ ಮೂಱು ॥
ಗಿರೆ ನಿಶ್ಶ್ರೇಣಿಕಮೆಂಬುದು ।
ಪುರಾಣದ್ರುಸಂ ಹಯಾಧಿಪಂ ಗುರು ಕೃಷ್ಣಂ ॥ ೧೦ ॥

೨೬-೧೨ ರೋಮರಾಜಿ — ರೋಮಜಾತದಿ

,,-೧೩ ಹನುಮಧ್ಯದೆ — ಹನುಮನ್ಮಗಳಾಕಕ್ಷ

,,-೨೭ ತದ್ದಳಮಧ್ಯ — ತದ್ಗಳಮಧ್ಯ—ತುದಿಯೊಳಧಿಪನಂ

೨೭-೨೪ ಸೇವಿತ — ಸೋವತಮಕ್ಕು

೨೯-೯ ಮೊಳೆಯಂಕುರ — ಮೊಳೆಯುಂಖುರ

,,–೧೫	ತಂದಿಟ್ಟಂ —	ತಂದಿಟ್ಟಂತಿಪೊರ್ಡಮಣ । ಮೊಂದುಂ ಪುಟ್ಟಿದೊಡಮಶುಭಂ
,,–೧೭	ಒಂದೊಂದು —	ಒಂದುಪಿರಿದೊಂದುಕಿಱಿದಾ । ದಂದ ಶುಭಂ
,,–೨೦	ದಿನಜಾ	ದಿನಜಾತಕವಿಕೃತ ಗಾತ್ರ । ಸ್ವನನಾಸಾಭಗ್ನಕುಬ್ಜ ಪಕ್ಷಿಸ್ಥಕದು ॥ ರ್ಮನದುಷ್ಪ(ಷ್ಟ)ಜಲವಿಮೆತಸ? । ಮಿನಿತು ಮನಾಳಲ್ಕೆ ವೇಡ ಸುಕರವಿಲಾಸಾ ॥ ೪೭ ॥
,,–೨೫	ಹೀನಾಧಿಕನುರ	ಹೇತುಧಿಕನುಂ ಸ್ತನಿಯುಂ ತ್ರಿಕರ್ಣಿಯುಂ ದ್ವಿಮುಕಮುವುಂ । ಧಕದಿಶಮುಷ್ಕಸಮಂ ಪೋ । ಷಕನುಂ ಶೃಂಗಿಯುಮದಾಗೆ ಕುಲನಾಶಕರಂ ॥ ೪೮ ॥
,,–೩೧	ಕಾಕಮುಖ	ಕಾಕಮುಖನುಂ ಕರಾಳಿಯು । ಮಾಕಸ್ಮಿಕ ಶೋಕ ದುಃಖನುಂ ಮರಣಕರಂ ॥ ೪೯ ॥
೩೦–೧೦	ಜಯಕರಂ	ಜಯಕರಂ ಶಶಿ ವಿದ್ಯು ॥ ಚ್ಛಾಯ ಪ್ರಭೆಸಹಿತ(ಹಸಿತ)
,,–೨೭	ಮಿಱಿ ಂನರ	ಮೇಣ್ತ । ನ್ನರಸನ
೩೧–೩	ಮಾಡುಗುಮಪಾರ	ನಾಡೆಯುಮಪಾರ,
,,–೪	ಈ ಪದ್ಯ ಹೆಚ್ಚಾಗಿದೆ	ಪಡುವ ಮೊಗಮಿರ್ದು ನೇಸರ್ । ಪಡುವಾಗಳ್ ಕಿಳಿರೆ ಸಂಜೆಯೊಳ್ ಹರಿ ಮೊಱಗುಂ ॥ ಸಿಡಿಲುಂ ಮಿಂಚುಂ ಬೆರಸಾ । ಗಡೆ ಸಲೆ ಮುಱಿ ಕೊಳ್ಗುಮೆಂದನಭಿನವಚಂದ್ರಂ ॥ ೫೮ ॥
,,–೧೨	ಬಡಗ ಎಂಬ ಪದ್ಯವಾದ ಬಳಿಕ	ಆನನಮುನೆತ್ತಿ ಹೆಯಮಿಾ । ಸಾ(ಶಾ)ನಮನೀಕ್ಷಿಸಿ ನಿಶಾಂತದೊಳ್ ಕಿಳಿರೆ ನಿ ॥ ಜನಾ?ಶೋದ್ಭವಮಂ ರಿಪುಸಂ । ತಾನಕ್ಷಯಮಂ ಹಯಸ್ವನಂ ಪ್ರಕಟಿಸುಗುಂ ॥ ೬೧ ॥
,,–೧೫	ಕೆದಱೆಬಾಲ	ಕಿಳಿರ ತುರಂಗಂ । ದಿನಕರನಂ ನೋಡಿ ನಾಡೆ ಭಯಮಂ ಮಾೞ್ಕುಂ ॥ ೬೨ ॥ ಇನನಂ ಮೇಣ್ ಪೂರ್ಣಾಹ್ಣದೊ । ಳನಲದಿಶಾಂತರಮನೀಕ್ಷಿಸುತ್ತುಂ ಹರಿ ದು ॥ ರ್ಮನನಾಗಿ ಕೆದಱೆ ಬಾಲಮ । ನನವರತಂ ಕಿಳಿರೆ ಪತಿಗೆ ಭಯಮಂ ಮಾೞ್ಕುಂ ॥ ೬೩ ॥
,,–೨೭	ತ್ತೆನಿಗೆ......ಯದಿಂ	ತ್ತುನಿರೆ ಮಾೞ್ಕುಂ......ಯಮಂ ॥ ೬೫ ॥
೩೨–೬	ನೆರಡುಕಾ	ನೆಡದಕಾ.........ನಿಲೆತಳ್ವಿಲ್ಲದೆ
೩.=೩	ಮತ್ತ್ರದುತಾಂ	ಮತ್ತಪರಾಂತರದೊಳ್
,,–೬	ಪತಿಮುಂತಿರಿ	ಪತಿಬೆನ್ನೊ । ಳುರಿ

,,–೧೬	ಉರಿಯೆ ಎಂಬ ಪದ್ಯವಾದ ಮೇಲೆ	ತುರಗದ ವಾಳಾದಾನದೊ । ಳುರಿ ನೆಗೆದೊಡೆ ಚೋದ್ಯಮಾಗಿ ಮಱೆಯಂ ವಾ ಲೋ ॥ ತ್ಕರಮುರಿಯೆ ಜಲಾನಲಚೋ । ರಾರಿಭಯಮನದು ಪಿರಿದುಮನಾಗಿಸಲಕ್ಕುಂ ॥ ೭೭ ॥
೩೪-೧	ಮೇಣ್ಕಣ್ಗಳ	ಮೇಣುಲ್ಕಂಗಳೆ
,,-೫	ಉರಿಯನಯನಾ	ಸುರಿಯೆ ನಯನಾಂಬುವದನಮನೊರಸು
-೧೦	ನಡೆವಭಟಂ	ಕೆ ನಡೆವಲ್ಲಿ ಭುಜಂ । ಗಮಮಾರ್ಗಾಕೃತಿಯಿಂ ಭಿನ್ನಮನಂಪಡಿಮೂತ್ರ
೩೫-೭	ದಮೊಗದವುಲ್ಕಾ	ದಮಾಗೆಱಮೋತ್ಕರದಿಂದಂ
೩೬-೭	ಗಿರೆಸವಮಾಗು	ಗೆಧವಳಮಾಗು
,,-೨೮	ಪ್ರಥಮುದವ	ಪ್ರಥಮುದಶ
೩೭-೨	ಭಂಗಂಸಂದಂಶ	ಬರೆಗಂ ಸಂದಂಶಮಾ ಕಿಶೋರದಂಗಾಂ ॥
೩೮-೩	ಪ್ಪುವತನು	ಪ್ಪುವತನುಸಂಗ್ರಾಸಪರಂ ।
,,-೧೬	ನಭಂದೊರೆದೆಂತುಱ	ನಭಂ ಬಿರಿವಿನೆಗಂ ಕಿಳಿರುತಿಪೊರ್ಡಂ
,,-೨೫	ಪ್ರಭರೇಖಾ ಪ್ರಾಯಕ್ಕೆ	ಪ್ರಭುರೇಖಾ.........ವೀರ್ಯಕ್ಕೆ ಪೇೞ್ದುದ
೩೯-೧೧	ಷ್ಕನಳಂ ಕರಂ	ಷ್ಕಾಂತರಂಗಳಂ
೪೦-೬	[ಮತ್ತಾ]	ನೀಳ್ದು
,,-೨೦	ರಾಜಶೂಲೆಗೆ	ಶೂಲೆಯಿಂದಂ ಕಿಡುಗುಂ ।
೪೩-೨೬	[ಜಯವನಿತಾ] —	ಜಯಾಂಗನಾವರಣಂ ಶ್ರೀವನರಾ(ಸುಧಾ)ಧಿಪತ್ಯಜನಪದಫಲಭೋಗಿ
೪೪-೨	ಪೋಲುತ್ತಿರೆ	ಪೋಲ್ತಿಂಬಾಗಿರೆ
,,-೫	ನದನೇಱಲುಱದೊಳ್ ಮುಳ್ಪುದನರಿತ	ನದನೇಱೆ ಧುರದೊಳ್...ಮಾೞ್ಕುಂ ಧರೆಯಂಪಲ
,,-೧೩		ಎಡೆವಱದೊಡಮಡಗಿರ್ದೊಡ । ವೊಡೆದೊಡಮತಿರೂಕ್ಷ[ಮಾಗಿರಲ್ಕ ಶುಭಂಗಳ್] ॥ ಕಡುನೇರಿದುವುಂ ನುಣ್ಪುಂ । ಪಡೆದಾಯುವಿನೆಲ್ಲ ರೇಖೆಯುಂ ಶುಭದಂಗಳ್ ॥ ೭೧ ॥
-೧೭	ಇದುಚಂದ್ರ	ಇದು ಚಂದ್ರಭಟ್ಟನಿರ್ಮಿತ । ವಿದಿತಾಯುಜ್ಞಾನದೊಳಗೆ ರೇಖಾ ಣದ ಮೊದಲಮೂವತೆರಡ । [ನಿರ್ಯಾ ಬ್ದದ ಸಂಖ್ಯಾಧ್ಯಾಯಪಂಚಮಂ ಪಿರಿದಕ್ಕುಂ ॥ ೭೧ ॥

೪೫-೧ ಷಷ್ಠಾಧ್ಯಾಯಂ
ಮೊದಲೊಳ್ ರೇಖಾನಿರ್ಯಾ ।
ಣದ ತೇಜನಂ ನೋಡಿಬಗೆದು ಭಾವಿಸಿ ಮತ್ತಂ ॥
ಕುದಿರೆಗೆ ಶರೀರದಿಂ ಪೇ
ೞ್ವುದು ಮೂವತ್ತೆರಡುಬರಿಸದಾಯುವ ಪವಣಂ ॥
ದುರ್ಗಂಧ ನಾಭಿಯಿಂದಂ ।
ದುರ್ಗಂಧಂ ನೆಲ್ಪರ್ಪನೆಲ್ಲ ? ತಾಳುಗೆಯಿಂದಂ ।
ದುರ್ಗಂಧರಶನದಿಂದಂ ।
ನಿರ್ಗುಣಿ ಮಱು ಕಳೆಯದೊಂದು ಸಂವತ್ಸರಮಂ ॥
ತಾಳುಗೆ ನಾಲಗೆಯಿಂ ಪ ।
ಲ್ಲೊಳಿಯಿನೋಪ್ಪಂಗಳಕ್ಷಿ ವರ್ತಂಗಳ ಕ ॥
ಣ್ಣಾಲಿಗಳಂಮುಚ್ಚದೊಡಂ ವಿಲಯಾಶ್ವಂದ್ವಿತೀಯವರ್ಷಂ ಬಾೞ್ಗಂ
ನಳಿಯದ ಕುಷ್ಠಿಕೆ ದೊಡ್ಡಿದ ।
ವೊಳಕಾಲ್ ಸನಾಕ್ಷಿ ರೂಢಿದುರ್ಗಂಧಂಗಳ್ ॥
ಕೊಳೆನಾರ್ಪೊಡೆ ಕೀಳುಂಕಾ ।
ಲ್ಕೊಳೆಯದ ಮಱಿಯರಿದು ಮೂಱು ಸಂವತ್ಸರಮಂ ॥ ೪ ॥
ಸವನಾದತಾಲುಗೆ ಮೂತ್ರ ।
ಮುವಧಿಕಮುಮಲ್ಪಮಪ್ಪೊಡಂ ನೊಸಲಸಿದಾ ॥
ಗುವೊಡಮದು ಕಳೆಯ..........

,,-೨೬ ಪದಪೆಯು — ಪೇಡಿಯುಮಪ್ಪಾ

೪೬-೩ ಲಂಡನಾತಿ — ಲಂಡಪಾತಿಯಪ್ಪಾಕುದಿರೆ ಗತಪ್ರಾಣನೇೞುವರ್ಷದೊಳಕ್ಕುಂ

-೧೦ ಮಾಗಿರ್ಕು — ಮಾಗಿರ್ಕುರಪ್ರಪಾನದಾವರ್ತಂ ಸಂದೆಯಮಿಲ್ಲತಿದೀರ್ಘಂ

೪೭-೫ ಪಿರಿಯೆಲು — ಪಿರಿಯವು ಮೇಢ್ರಂ ಗುದಂಕಾ

೪೯-೨೪ ೩೪ನೆಯ ಪದ್ಯವಾದ ಬಳಿಕ — ತುರಗದ ಹೃದಯದೊಳೊತ್ತಿದ(ಕ) ತುಱುಂಬಿರ್ದ ಪದಕೆ - ಎಂಬ
ಅ7. ಪ69ರ ಭಾಗ ನಿರಂತರವಾಗಿದೆ(ಇಲ್ಲಿ ಗ್ರಂಥಪಾತಅಧಿಕವಾಗಿದೆ)

೬೯-೨೨ ಬಗೆಯಂ ಸೇಯಲ್ — ಪಗೆಯಂ ಸಾಯಲ್

೭೦-೧೦ ಗಜ — ಗಜಘಟೆಧಾತ್ರಿ(ಪತ್ತಿ)ಯೊಳ್ ತುರಗಂಗಳ್ ॥

,,-೧೪ ಶೇಷಿಯ — ಲೈಸಿಯೆ ಕರ್ಕಟಕವಾಣಿ ತುರಗದ ಮೆಯ್ಯಂ ॥
ದೂಷಿಸದಂತರಿಸಿನಮಂ

೭೧-೧ ಕದಡಿ — ಕುದಿವುದು ಪಟಿತುದು ಪ ।
ಪ್ಪುದು ಬಿಟ್ಟಿತು ಪಲವು

೭೨-೨ ಗುಪ್ಪೆಮರಿಚ — ಗುಪ್ಪೆಮರಿಚಗಳಿನೊಪ್ಪಲ್ ವಿಶಾಲಾಂತರದೊಳ್ ॥
(ಎಂದು ಅ. ೮ ಪ. ೨ರ ಭಾಗದೊಡನೆ ನಿರಂತರ. ಗ್ರಂಥಪಾತ)

೭೬-೨೧ ಜಯಜಯ — ಜಯದನುಜಕುಲಕ್ಷಯಕರ ।

,,-೨೫ ಜಯಜಯತು — ಜಯತು ಮಮಶತ್ರುಪಕ್ಷ—ಜಯದಖಿಳರಾಜ್ಯ

೭೮-೪ ೧ ಪದ್ಯವಾದ ಬಳಿಕ — ಕುದಿರೆಗಳ ಪ್ರದೇಶಮಂ ನಾಮಮನಱಿಯದವರ್ಗೆ ಶಸ್ತ್ರಕರ್ಮವಗ್ನಿ
ಕರ್ಮ ಮಾದಕರ್ಮಬಂಧನಸ್ಥಾಪನ ಮೊದಲಾಗೊಡೆಯ ಕ್ರಿಯೆ
ಗಳಂ ಮಾಡಲ್ಬಾರದಪ್ಪುದರಿಂ ಪ್ರದೇಶನಾಮಮಂತಿಳಿಯಪೇೞ್ವೆಂ
ಇದಱದ ಬಳಿಕ ಪ್ರದೇಶನಾಮವನ್ನು ತಿಳಿಸುವ ಗದ್ಯವಿದೆ

೯೦-೧ ಆಚಾರ್ಯಂಶಿಷ್ಯ — ಈ ಪದ್ಯದಿಂದ ಹನ್ನೊಂದನೆಯಧ್ಯಾಯದ ಪದ್ಯ ೭ರ ವರೆಗೆ ಗ್ರಂಥ
ಪಾತ(ನಿರಂತರ)

೯೭-೧೯ (ಹ)ವರಿಸಿ — ವರಿಸಿದೊಡಿಂಬಕ್ಕುಂ ಮನೆ ।

೯೮-೩ ಹನಮೆ — ಹನಮೆಂಬುದು ರುಜೆ ತುರಗ ।

೯೯-೧೦ ಪರಿಭವಿ — ಪರಿವಟಸಿರ್ಕಟ್ಟೆ

೧೦೦-೧೧ — ನಿರುತಕರಂಜಂ ಕಟಿಯೊಳ ।
ಗರೆದಿಕ್ಕುಗೆ ವಜ್ರಕೀಟನಿರ್ದಾಟನಮುಂ ॥ ೪೧ ॥
ಅರಗುಕೊಡಸಿಗೆಯ ಬೀಜಂ ।
ಸುರದಾರುವಿಳಂಗಮಿಂಗಿವೆಲ್ಲಮನೊಂದಾ ॥
ಗಿರೆ ಕೂಡಿ ಪಿಂಡಮಿಕ್ಕುಗೆ ।
ಸುರೆಯುಸಮೇತಂ ತುರಂಗಮಕ್ರಿಮಿಹರಣಂ ॥ ೪೨ ॥

,,-೧೫ ಪರಿಹರಿ — ಕೀಸುವುದು ವಾ ।
ಜಿಗೆ ಹಿತಮಿದು ಕೀಟಕಾಪಹರಣಂ ಕರಣಂ ॥

೧೦೨-೧೭ ಬಜೆಯುಂ — ಬಜೆಯಿಂಗಣಲೆ ವಿಳಂಗಂ ।

೧೦೩-೧೨ ದ್ಯಂಗೊಳ್ಳಿಮ — ಪದಂಗಳೊಳವು ಬಗೆದ ಬೇಗದೊಳ್ ಘುಸಣೆಯವರ್ ॥

೧೦೭-೨೭ ಸೋರುತಿರ್ಪ — ಸೋರುತಿರ್ಪ ಪುಗುೞ್ಗಳ್ ವಿಸರ್ಪಂ ಖಜ್ಜಿ ।

೧೦೮-೧೨-೨೬ನೇ ಪದ್ಯವಾದನೇಲೆ — ತುರಗದ ಪುಣ್ಣೊಳ್ ಕ್ರಿಮಿ ತೀ ।
ವಿರಲೇಲಕ್ಕಿಯನೆ ಸುಣ್ಣಮಂ ಸಮನಾಗಿಕ್ಕುಗೆ ಸಂ ॥
ಹರಿಕುಂ ಮತ್ತವ್ರಾಣಂತಿವು ಗುಣಮಯ ? ಯೆರಡುಭಾಗಸುಣ್ಣಂ
ಭಾವಂ ॥ ೨೬ ॥

೧೦೯-೨೭ ಕೊಪ್ಪುಸಿತ — ಕೊಟ್ಟುಸಿತಸಹಿತವಲಸದೆ

೧೧೦-೭ ಬೆರಸಿಮನೋ — ಬೆರಸಿಕುಡೆ ಕಲಸಿ ಮನೋ ।
ಹರಮಾಗಿರೆಪೆಸರ

೧೧೧-೧೮ ಪಡೆಕಕ್ಕೆಯಂ — ಪೆಡೆಗಳ್ಳಿಯಂ

೧೧೬- ಎರಡುಂ — ಉರದ ವಿಷಾಣದ ನಡು ಬಾ ।
ತಿರೆ ದ್ರೋಣಿಕಮೆನಿಪ್ಪುದಕ್ಕುಂ ರುಜೆ ಮತ್ತಂ ॥
ತರುಣವ್ಯದು

,,-೧೬ ಮಿತ್ರನವಂತಂದು — ಮಿತ್ರನ ಮತದಿಂದೆ ಪೂಸೆ

,,-೨೨ ಪುಣ್ಗಳ್ ಮೂಡು	ಪುಗುಟ್ಗಳ್ ಮೂಡು
೧೧೭-೧೫ ಮಾರ್ದನಿ ವಿ	ಬೀಮಾದಿವಿ
೧೭ ತೊಡೆ[ಗಳ]	ತೊಡೆಜಘನಮುಪಾನ ದೆರಡು । ಮೆಡೆಗಳ್ ಪುಣ್ಣಾಗೆ ಪೂಸುವುದುಮ್ಮತ್ತ್ರಮುಮಂ ॥
೧೧೮-೨ ಹೆನಗೆ ಮಾಡಿ	ನಳಿಗೆಮಾಡಿ
,,-೧೩ ಗಿಣಿಮಾ	ಮುರುದೊಂಡೆಯ ಮುರದದ
೧೨೦-೩ ತ್ರಿಖಿದೊಡೆ	ದಿಂದಟ್ಟುತ್ತಡಿಯನಿಡು
,,-೧೦ ಶ್ರೀವತ್ಸಕಂ	ಶ್ರೀ ವೇಷ್ಟಿತಕಂ
,,-೨೩ ಕುಂದಿ	ಕೂಂಟನಡು
೧೨೧-೧೪ ಕಾವಪುಷ್ಪ	ಕಾಚಪುಷ್ಪ
೧೨೨-೧೨ ಚಿಂತೆಮಾಡಿ	ಬೆಂಕೆಮಾಡಿ
೧೨೪-೧ ಕುವಿಯಂ	ಕುವಿಯಂಕುದಿರೆಗೆ ಮೆಯ್ಮೆಲ್ಲಮುಡರ್ವುದು ಬಾಹು - ಕುವಿಯನ ಮಣ್ಣಂ ಪೂಸು
-೪ ೮ನೆಪದ್ಯ	೮ನೆಯ ಪದ್ಯದಿಂದ ೨೨ನೆಯ ಪದ್ಯದವರೆಗೆ ಗ್ರಂಥಪಾತ. ಗ್ರಂಥ ನಿರಂತರ. ಪದ್ಯಸಂಖ್ಯೆ ೨೨ಕ್ಕೆ ೨೯ ಎಂದಿದೆ.
೧೨೬-೧೮ ಗುಗ್ಗುಳಮರಾ । ಗೋ	ಗುಗ್ಗುಳಮಂ ॥ ಬೆರಸಿ ಪದನರಿದು ಭಕ್ಷಣಾನಂ । ತರಮೆಯ್ದುವಿನಂ ತುರಗಪೋಷಣವಿಧಿಯಿಂ ॥ ೧೪ ॥ ಹೇಮಂತದೊಳಂ ಶಿಶಿ । ರೋಮಯದೊಳಂ ಹಯಮನೂಡುವುದು ಗುಗ್ಗುಳಮಂ ॥ ಗೋಮೂತ್ರ ಮಿಶ್ರಿತಂ...... ॥ ೧೫ ॥
೧೨೭-೪ ಮೂಜುವತ್ಸರಂ	ಮೂಜುಸಪ್ತಕಂ